ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರವಿ ಮಳಮಠ

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಚ್.ಪಿ. ಸಂದೇಶ್

ಶ್ರೀಮತಿ ಲಲಿತ -ವಿರುದ್ಧ-ಎಲ್.ಸಿ.ರಘು ಹಾಗೂ ಇತರರು

ಕ್ರಿಮಿನಲ್ ಅಪೀಲುಸಂಖ್ಯೆ: 648/2013 ಇದರೊಂದಿಗೆ ಇತರೆ,ದಿನಾಂಕ: 17 ನೇ ಜುಲೈ, 2019.

ತೀರ್ಪು

ನ್ಯಾಯಮೂರ್ತಿ ಶ್ರೀ ಹೆಚ್.ಪಿ. ಸಂದೇಶ್:

ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ 302 ನೇ ಹಾಗೂ 201 ನೇ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧಗಳಿಗಾಗಿ ಆಪಾದಿತನನ್ನು ಖುಲಾಸೆಗೊಳಿಸಿ, ಮಂಡ್ಯದ ಪ್ರಧಾನ ಸತ್ರ ನ್ಯಾಯಾಧೀಶರ ಕಡತ ಎಸ್.ಸಿ.ಸಂಖ್ಯೆ 167/2009 ರಲ್ಲಿ ಹೊರಡಿಸಿದದಿನಾಂಕ: 30-03-2013ರ ತೀರ್ಪಿನ ವಿರುದ್ಧ ದೂರುದಾರ ಹಾಗೂ ರಾಜ್ಯ ಸರ್ಕಾರ ಕೂಡ ಈ ಎರಡು ಅಪೀಲುಗಳನ್ನು ಹೂಡಿರುತ್ತದೆ.

2. ಮೊಕದ್ದಮೆಯ ವಾಸ್ತವಾಂಶವೇನೆಂದರೆ, ಮೃತ ಚೈತಳು, ಮಾಯಣ್ಣನ ಕೊಪ್ಪಲು ಗ್ರಾಮ, ಬಿಂಡಿಗನವಿಲೆ ಹೋಬಳಿ, ನಾಗಮಂಗಲ ತಾಲೂಕಿನ ವಾಸಿಗಳಾದ ಸಿ.ಡಬ್ಲ್ಯೂ -5 ಲಲಿತಾ ಹಾಗೂ ಸಿಡಬ್ಲ್ಯೂ -19 ದೇವೇಗೌಡ ಇವರ ಮಗಳಾಗಿದ್ದಾಳೆ.ಆಪಾದಿತ ಘಟನೆಗೆ ಮೂರು ತಿಂಗಳುಗಳ ಮೊದಲು 1 ನೇ ಆಪಾದಿತನೊಂದಿಗೆ ಮೃತಳ ವಿವಾಹ ನಿಶ್ಚಿತಾರ್ಥವಾಗಿತ್ತು.19-07-2009 ರಂದು ಬೆಳಿಗ್ಗೆ ಸುಮಾರು 10.00 ಗಂಟೆ ವೇಳೆಗೆ 1 ನೇ ಆಪಾದಿತನು, ಮೃತಳ ಭಾವನಾದ ಸಿ.ಡಬ್ಲ್ಯೂ -1 ಸುರೇಶ್ ಎಂಬುವವರ ಮನೆಗೆ ಹೋಗಿ ಅಲ್ಲಿ 15 ದಿನಗಳಿಂದ ಇದ್ದ ಮೃತಳನ್ನು ಶ್ರವಣಬೆಳಗೊಳ ದೇವಸ್ಥಾನಕ್ಕೆ ಹೋಗುವುದಾಗಿ ತಿಳಿಸಿ ಮೋಟಾರು ಬೈಕ್ನಲ್ಲಿ ಅವಳನ್ನು ಕರೆದುಕೊಂಡು ಹೋಗಿದ್ದಾನೆ; ಇದಾದ ನಂತರ, ಮಧ್ಯಾಹ್ನ ಸುಮಾರು 4 ಗಂಟೆಗೆ ಕುಮಾರ ಎಂಬುವವನು ಸಿ.ಡಬ್ಲ್ಯೂ-ಇವರಿಗೆ ದೂರವಾಣಿ ಕರೆಮಾಡಿ, ಚೈತ್ರಳು ಅಪಘಾತದಿಂದಾಗಿ ಮೃತಳಾಗಿದ್ದು, ಅವಳ ಮೃತ ದೇಹವು ಕೆ.ಆರ್.ಪೇಟೆ ತಾಲೂಕಿನಲ್ಲಿರುವ ಆಘಾಲಯದ ಕೆರೆ ಏರಿ ಮೇಲೆ ಇತ್ತೆಂದು ತಿಳಿಸಿದ್ದಾನೆ.ಸಿ.ಡಬ್ಲ್ಯೂ -1 ಹಾಗೂ ಇತರರು ಸ್ಥಳಕ್ಕೆ ಧಾವಿಸಿದ್ದು, ಅಲ್ಲಿ ತನ್ನ ನಾದಿನಿಯ ಮೃತದೇಹವನ್ನು ನೋಡಿದ್ದಾರೆ.ಅಲ್ಲದೆ, ಸಿ.ಡಬ್ಲ್ಯೂ-ಮೃತದೇಹದ ಮೇಲಾಗಿದ್ದ ಗಾಯಗಳನ್ನು ಹಾಗೂ 1 ನೇ ಆಪಾದಿತನ ಮೋಟಾರು ಬೈಕ್ ಹಾಗೂ ಅವನ ಶಿರಸ್ತ್ರಾಣ ಅಲ್ಲಿ ಬಿದ್ದುದನ್ನು ನೋಡಿದ್ದಾನೆ.ಅಷ್ಟೇ ಅಲ್ಲದೆ

2 ನೇ ಹಾಗೂ 3 ನೇ ಆಪಾದಿತರೂ ಕೂಡ ಅಲ್ಲಿದ್ದರು.ಮೃತದೇಹವನ್ನು ಮೃತಳ ಗ್ರಾಮಕ್ಕೆ ಸ್ಥಳಾಂತರಿಸಲಾಗಿತ್ತು.ಮೃತದೇಹದ ಮೇಲೆ ಆಗಿದ್ದ ಗಾಯಗಳು ಅಪಘಾತದ ಕಾರಣದಿಂದ ಆಗಿಲ್ಲವೆಂದು, ಬದಲಾಗಿ ಹತ್ಯೆಯಿಂದ ಉಂಟಾಗಿರಬೇಕೆಂದು ಸಿಡಬ್ಲ್ಯು ೧ 1, ಸಂಶಯಪಟ್ಟಿದ್ದಾರೆ.ಅವರು ದೂರು ದಾಖಲಿಸಲು ಬಿಂಡಿಗನವಿಲೆ ಪೊಲೀಸು ಠಾಣೆಗೆ ಹೋದಾಗ, ಮೃತದೇಹವು ಕೆ.ಆರ್. ಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಂಡುಬಂದಿರುವುದರಿಂದ, ಆ ಪೊಲೀಸ್ ಠಾಣೆಯನ್ನು ಸಂಪರ್ಕಿಸಲು ಸೂಚಿಸಿದ್ದಾರೆ.ಆದುದರಿಂದ 20-07-2009 ರಂದು ಮಧ್ಯಾಹ್ನ 3-15ಕ್ಕೆ ಕೆ.ಆರ್. ಪೇಟೆ ಪೊಲೀಸು ಠಾಣೆಯಲ್ಲಿ

ನಿಶಾನೆ ಪಿ -1 ರ ಪ್ರಕಾರ ದೂರನ್ನು ದಾಖಲಿಸಿ, ಕೆ.ಆರ್. ಪೇಟೆ ಆಸ್ಪತ್ರೆಯ ಶವಗಾರಕ್ಕೆ ಮೃತದೇಹವನ್ನು ಸ್ಥಳಾಂತರಿಸಲಾಯಿತು.

3. ದೂರಿನ ಆಧಾರದ ಮೇಲೆ ಪೊಲೀಸರು ಅಪರಾಧವನ್ನು ದಾಖಲಿಸಿಕೊಂಡು, ನಿಶಾನೆ ಪಿ -11 ರ ಪ್ರಕಾರ, ಶವದ ಪಂಚನಾಮೆಯನ್ನು ನಡೆಸಿದ್ದಾರೆ ಹಾಗೂ ಮೃತದೇಹವನ್ನು ಶವಪರೀಕ್ಷೆಗೊಳಪಡಿಸಿದ್ದಾರೆ.ಪೊಲೀಸರು ತನಿಖೆಯನ್ನು ನಡೆಸಿ, ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ 302 ನೇ ಹಾಗೂ 201 ನೇ ಪ್ರಕರಣಗಳ ಮೇರೆಗೆ ದಂಡಿಸಬಹುದಾದ ಅಪರಾಧಗಳಿಗಾಗಿ ಆಪಾದಿತನ ವಿರುದ್ಧ ಆರೋಪ ಪಟ್ಟಿಯನ್ನು ಸಲ್ಲಿಸಿದ್ದಾರೆ.1 ನೇ ಆಪಾದಿತನು ಕುತ್ತಿಗೆ ಹಿಸುಕಿ, ತಲೆಗೆ ಬಡಿದು, ಕೊಲೆಮಾಡಿ, ಮೃತದೇಹವನ್ನು ರಸ್ತೆಯಲ್ಲಿಟ್ಟು, ಮೋಟಾರು ಬೈಕು ಹಾಗೂ ಹೆಲ್ಮೆಟ್ಟನ್ನು ರಸ್ತೆ ಬದಿಯಲ್ಲಿ ಬಿದ್ದಿರುವಂತೆ ಇಟ್ಟು ಇದು ರಸ್ತೆ ಅಪಘಾತದ ಪ್ರಕರಣವೆಂಬಂತೆ ದೃಶ್ಯವನ್ನು ಸೃಜಿಸಿದ್ದಾನೆಂಬುದಾಗಿದೆ.ತಾನು ಸಹ ಗಾಯಗೊಂಡಿರುವನೆಂದು ತೋರಿಸಿಕೊಳ್ಳಲು ಹಾಸನದಲ್ಲಿರುವ ಎಸ್‌ಎಸ್‌ಎಂ ಆಸ್ಪತ್ರೆಗೆ ಸ್ವತಃ ತಾನೇ ಸೇರಿಕೊಂಡಿದ್ದಾನೆ.

4. 2 ನೇ ಹಾಗೂ 3 ನೇ ಆಪಾದಿತರ ವಿರುದ್ಧ ಮಾಡಲಾದ ಆಪಾದನೆಯೇನೆಂದರೆ, 1 ನೇ ಆಪಾದಿತನು ಚೈತ್ರಳನ್ನು ಕೊಲೆ ಮಾಡುವುದರ ಬಗ್ಗೆ ಇವರಿಗೆ ಗೊತ್ತಿತ್ತು, ಕಾನೂನಿನ ಶಿಕ್ಷೆಯಿಂದ ಅವನನ್ನು ಪಾರುಮಾಡುವ ಉದ್ದೇಶವನ್ನು ಹೊಂದಿದ್ದರು ಹಾಗೂ ಮುಂದುವರೆದು, ಚೈತ್ರಳ ಸಾವು, ಮೋಟಾರು ಬೈಕ್ನ ಅಪಘಾತ ಕಾರಣದಿಂದ ನಡೆದಿತ್ತು ಎಂಬುದನ್ನು ನಂಬಿಸಲು ರಸ್ತೆ ಬದಿಯಲ್ಲಿ ಮೋಟಾರು ಬೈಕನ್ನು ಇಡುವ ಮೂಲಕ ರಸ್ತೆ ಅಪಘಾತದಂತೆ ಬಿಂಬಿಸುವಂತೆ ಮಾಡಿ 0 ಅಪರಾಧದ ಸಾಕ್ಷ್ಯವನ್ನು ಮುಚ್ಚಿ ಹಾಕುವ ಸಾಮಾನ್ಯ ಉದ್ದೇಶ ಹೊಂದಿದ್ದರು ಎಂಬುದಾಗಿದೆ.

5. 1 ರಿಂದ 3 ರವರೆಗಿನ ಆಪಾದಿತರ ವಿರುದ್ಧ ಮಾಡಲಾದ ಆರೋಪಗಳನ್ನು ಸಾಬೀತುಪಡಿವ ಸಲುವಾಗಿ, ಪ್ರಾಸಿಕ್ಯೂಷನ್ ಪಿಡಬ್ಲ್ಯೂ-1-30ರವರೆಗಿನ ಸಾಕ್ಷಿದಾರರನ್ನು ವಿಚಾರಣೆ ಮಾಡಿ, ನಿಶಾನೆ ಪಿ -1 ರಿಂದ ಪಿ -72 ರವರೆಗಿನ ಸಾಕ್ಷ್ಯಗಳನ್ನು ಗುರುತಿಸಲಾಗಿದೆ.ಹಾಗೆಯೇ 1 ರಿಂದ 14 ರವರೆಗಿನ ಮುದ್ದೆ ಮಾಲುಗಳನ್ನು ಸಹ ಗುರುತಿಸಲಾಗಿದೆ.ಆರೋಪಿತರ ಪರ ವಕೀಲರೂ ಕೂಡ 1 ರಿಂದ 4 ರವರೆಗಿನ ಮುದ್ದೆ ಮಾಲುಗಳನ್ನು ಗುರುತಿಸಿದ್ದಾರೆ.ಸಾಕ್ಷಿದಾರರನ್ನು ವಿಚಾರಣೆ ಮಾಡುವಾಗ, ಆರೋಪಿತರ ಪರ ವಕೀಲರು ಯಾವುದೇ ಸಾಕ್ಷ್ಯವನ್ನು ಒದಗಿಸಿಲ್ಲ.ವಿಚಾರಣಾ ನ್ಯಾಯಾಲಯವು ಆರೋಪಿಗಳ 313 ಹೇಳಿಕೆಗಳನ್ನು ದಾಖಲಿಸಿ, ನಂತರ ಪ್ರಾಸಿಕ್ಯೂಷನ್ ಹಾಗೂ ಪ್ರತಿವಾದಿಗಳ ವಕೀಲರ ವಾದ-ವಿವಾದಗಳನ್ನು ಆಲಿಸಿತು.ವಿಚಾರಣಾ ನ್ಯಾಯಾಲಯವು, ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳನ್ನು ಪರಿಗಣಿಸಿದ ನಂತರ, ಎಲ್ಲಾ ಆಪಾದಿತರನ್ನು ಖುಲಾಸೆಗೊಳಿಸಿತು.ಖುಲಾಸೆಯ ತೀರ್ಪಿನಿಂದ ಬಾಧಿತರಾಗಿರುವ, ದೂರುದಾರರು ಎಂದರೆ ಪಿ.ಡಬ್ಲ್ಯೂ ೧ 7 ಎಂದು ವಿಚಾರಣೆ ಮಾಡಲಾಗಿರುವ ಮೃತಳ ತಾಯಿ, ಅಪರಾಧ ಅಪೀಲು ಸಂಖ್ಯೆ 648/2013 ನ್ನು ಸಲ್ಲಿಸಿದ್ದಾಳೆ ರಾಜ್ಯ ಸರ್ಕಾರವೂ ಸಹ ಅಪರಾಧ ಅಪೀಲು ಸಂಖ್ಯೆ 866/2013 ನ್ನು ಸಲ್ಲಿಸಿದೆ.

6. ದೂರುದಾರರು ಸಲ್ಲಿಸಿದ ಅಪೀಲಿನಲ್ಲಿ ನೀಡಲಾದ ಆಧಾರಗಳೇನೆಂದರೆ, 1 ನೇ ಆಪಾದಿತನು, ಮೃತಳನ್ನು ತನ್ನೊಂದಿಗೆ ಕರೆದುಕೊಂಡು ಹೋಗಿರುವುದರಲ್ಲಿ ಯಾವುದೇ ವಿವಾದವಿಲ್ಲ ಎಂಬುದಾಗಿದೆ.ಮೃತಳ ಮೃತದೇಹವನ್ನು ಪೂರ್ಣವಾಗಿ ಪರೀಕ್ಷೆ ಎ ನಡೆಸಿರುವ ವೈದ್ಯಾಧಿಕಾರಿಯು, ನಿಶಾನೆ ಪಿ -28 ರಲ್ಲಿ ವೈದ್ಯಕೀಯ

ಅಭಿಪ್ರಾಯವನ್ನು ನೀಡಿದ್ದು, ಅದರ ಪ್ರಕಾರ ಮೃತಳ ಸಾವು, ಕುತ್ತಿಗೆಯ ಮೇಲಿನ ಅಸ್ಥಿಮಜ್ಜೆಯ ಒತ್ತಡದಿಂದಾಗಿ ಉಸಿರುಗಟ್ಟಿಸಿದ ಹಾಗೂ ತಲೆಯಲ್ಲಾದ ಗಾಯದಿಂದಾಗಿ ಕೋಮಾದ ಪರಿಣಾಮದಿಂದ ಸಂಯೋಜಿತ ಕಾರಣದಿಂದ ಸಾವು ಸಂಭವಿಸಿದೆಯೆಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ.ಮೇಲಿನ ಕಾರಣದಿಂದ ಕೊಲೆಯಿಂದಾದ ಸಾವು ಎಂಬ ವಿಷಯ ಸ್ಪಷ್ಟವಾಗಿದ್ದು, ಆರೋಪಿಯು, ಯಾವ ಸನ್ನಿವೇಶಗಳಲ್ಲಿ ಮೃತಳ ಸಾವು ಸಂಭವಿಸಿದೆಯೆಂಬುದನ್ನು ವಿವರಿಸಬೇಕಾಗಿತ್ತು.ಅವನು ಅದನ್ನು ಮಾಡಿರುವುದಿಲ್ಲ.ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು, ಆಪಾದಿತ ವ್ಯಕ್ತಿಗಳನ್ನು ಖುಲಾಸೆಗೊಳಿಸಿ ದೋಷವೆಸಗಿದ್ದಾರೆ.ಸಾಕ್ಷ್ಯವನ್ನು ಮರೆಮಾಚುವಲ್ಲಿ 1 ನೇ ಆಪಾದಿತನೊಟ್ಟಿಗೆ ಸೇರಿ ಅದೇ ಉದ್ದೇಶವನ್ನು ಹೊಂದಿರುವ 2 ಹಾಗೂ 3 ನೇ ಆಪಾದಿತರು ಭಾರತ ದಂಡ ಸಂಹಿತೆಯ 201 ನೇ ಪ್ರಕರಣದ ಮೇರೆಗೆ ಅಪರಾಧ ಎಸಗಿದ್ದು, ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ಅದನ್ನು ಪರಿಗಣಿಸಿಲ್ಲ.ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು, ಯಾಂತ್ರಿಕವಾಗಿ ದಾಖಲೆಯಲ್ಲಿರುವ ಸಾಕ್ಷ್ಯವನ್ನು ಪರಿಗಣಿಸಿದ್ದು, ಆಪಾದಿತ ವ್ಯಕ್ತಿಗಳನ್ನು ಖುಲಾಸೆ ಮಾಡುವಾಗ ಯುಕ್ತ ಕಾರಣಗಳನ್ನು ನೀಡಲು ವಿಫಲರಾಗಿರುತ್ತಾರೆ.ಹೀಗಾಗಿ, ಇದು, ತರ್ಕ ವಿರುದ್ಧವಾಗಿದ್ದು ನ್ಯಾಯಸಮ್ಮತವಾಗಿಲ್ಲ.ಅಲ್ಲದೆ, ಕಾನೂನುಬಾಹಿರ ಹಾಗೂ ಅಸಮಂಜಸವಾಗಿದೆ ಎಂಬ ಆಧಾರದ ಮೇಲೆ ತೀರ್ಪನ್ನು ಪ್ರಶ್ನಿಸುವುದು ಅಗತ್ಯವಾಗಿದೆ.

7. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರೂ ಸಹ ತಮ್ಮ ವಾದಗಳಲ್ಲಿ, ಅಧಿವಿಚಾರಣಾ ನ್ಯಾಯಾಧೀಶರು ಲೋಪವೆಸಗಿದ್ದು, ಅದೇ ದಿನದಂದು ಆಪಾದಿತನು ತನ್ನ ಮೋಟಾರು ಸೈಕಲ್ನಲ್ಲಿ ಮೃತಳನ್ನು ಕರೆದುಕೊಂಡು ಹೋಗಿರುವುದನ್ನು ಹಾಗೂ ವಾಸ್ತವವಾಗಿ ಅವನು ಕೊಲೆಯನ್ನು ಮಾಡಿದ್ದಾನಾದರೂ ಅದು ಅಪಘಾತವಾಗಿದೆಯೆಂದು ನಟಿಸಿರುವ ಸಂಗತಿಯನ್ನು ಗಮನಕ್ಕೆ ತೆಗೆದುಕೊಳ್ಳುವಲ್ಲಿ ವಿಫಲರಾಗಿರುವರೆಂದು ಹಾಗೂ ಮೃತದೇಹ ಪರೀಕ್ಷೆ ಮಾಡಿರುವ ವೈದ್ಯರ ಅಭಿಪ್ರಾಯವು, ನೇರವಾಗಿ, ಇದು ಕೊಲೆಯ ಪ್ರಕರಣವಾಗಿದೆ ಹಾಗೂ ಅಪಘಾತದ ಸಾವಲ್ಲ ಎಂಬುದಾಗಿದ್ದು, ಅಧಿವಿಚಾರಣಾ ನ್ಯಾಯಾಧೀಶರು ಇದನ್ನು ಗಣನೆಗೆ ತೆಗೆದುಕೊಳ್ಳುವಲ್ಲಿ ವಿಫಲರಾಗಿರುತ್ತಾರೆ ಹಾಗೂ ಬಲವಾಗಿ ವಾದಿಸಿದ್ದಾರೆ ..

8. ರಾಜ್ಯವು, ಅಪೀಲು ಸಂಖ್ಯೆ 886/2013 ರಲ್ಲಿ, ಅಧಿ ವಿಚಾರಣಾ ನ್ಯಾಯಾಲಯವು, ಪ್ರಾಸಿಕ್ಯೂಷನ್ನು ನೀಡಿದ ಸಂಬಂಧಪಟ್ಟ ಸಾಕ್ಷ್ಯಾಧಾರವನ್ನು ಗಣನೆಗೆ ತೆಗೆದುಕೊಳ್ಳುವಲ್ಲಿ ದೋಷವೆಸಗಿದೆಯೆಂದು ಹಾಗೂ ಆಪಾದಿತನ ಅಪರಾಧವನ್ನು ಮನಗಾಣಿಸಲು ಇರುವ ಸನ್ನಿವೇಶಗಳನ್ನು ಅವಲೋಕಿಸುವಲ್ಲಿ ವಿಫಲವಾಗಿದೆಯೆಂದು ವಾದಿಸಿದೆ.ಪ್ರಕರಣವು ಸಾಂದರ್ಭಿಕ ಸಾಕ್ಷ್ಯದ ಮೇಲೆ ನಿಂತಿದ್ದರೂ ಕೂಡ, ಮಾನ್ಯ ನ್ಯಾಯಾಧೀಶರು, 1 ನೇ ಆಪಾದಿತನ ವಿರುದ್ಧದ ಸಾಕ್ಷ್ಯವನ್ನು ಮರೆಮಾಚಲು ಪ್ರಯತ್ನಿಸಿದ್ದು, 1 ನೇ ಆಪಾದಿತನೊಂದಿಗೆ ಕೈಜೋಡಿಸಿರುವ 2 ಹಾಗೂ 3 ನೇ ಆಪಾದಿತರ ನಡೆತೆಯನ್ನು ಗಮನಕ್ಕೆ ತೆಗೆದುಕೊಳ್ಳಲು ವಿಫಲರಾಗಿರುತ್ತಾರೆ.ನಿಶಾನೆ ಪಿ -28 ರಲ್ಲಿರುವ ಮರಣೋತ್ತರ ಶವಪರೀಕ್ಷೆಯು, ಮೃತದೇಹದ ಮೇಲೆ ಹಲವಾರು ಗಾಯಗಳು ಕಂಡುಬಂದಿದ್ದು, ಸ್ವರೂಪದಲ್ಲಿ ಮರಣ ಪೂರ್ವದಲ್ಲಿ ಆದಂಥ ಗಾಯಗಳಾಗಿವೆ ಹಾಗೂ ಕುತ್ತಿಗೆಯ ಮೇಲೆ ಅಸ್ಥಿಮಜ್ಜೆಯ ಒತ್ತಡದಿಂದಾಗಿ ಉಸಿರುಗಟ್ಟಿಸಿದ ಹಾಗೂ ತಲೆಗೆ ಆದ ಗಾಯದಿಂದಾಗಿ ಕೋಮಾದ ಪರಿಣಾಮವಾಗಿ ಸಂಯೋಜಿತ ಪರಿಣಾಮವಾಗಿ ಮರಣವಾಗಿದೆಯೆಂಬುದನ್ನು ಸ್ಪಷ್ಟವಾಗಿ ರುಜುವಾತುಪಡಿಸುತ್ತದೆ.

9. ಪ್ರಾಸಿಕ್ಯೂಷನ್ನ ಸಾಕ್ಷ್ಯ ಲ್ಯು ಅದರಲ್ಲೂ ನಿರ್ದಿಷ್ಟವಾಗಿ ಪಿಡಬ್ಲ್ಯೂ -1 ರ ಸಾಕ್ಷ್ಯವು, ಅವರು ದೇವಸ್ಥಾನಕ್ಕೆ ಹೋಗುತ್ತೇವೆಂದು ತಿಳಿಸಿ ಮೋಟಾರು ಸೈಕಲ್ಲಿನಲ್ಲಿದಿನಾಂಕ: 19-07-2009ರಂದು ಬೆಳಿಗ್ಗೆ ಸುಮಾರು 9.30/10 ಗಂಟೆಯಲ್ಲಿ ಮೃತಳನ್ನು ೧ 1 ನೇ ಆಪಾದಿತನು ಕರೆದೊಯ್ದಿರುವುದನ್ನು ತಿಳಿಸುತ್ತದೆ.ಅದು, 1 ನೇ ಆಪಾದಿತನು ಮೃತಳ ಕೊಲೆಯಲ್ಲಿ ಭಾಗಿಯಾಗಿರುವುದನ್ನು ಸ್ಪಷ್ಟವಾಗಿ ರುಜುವಾತುಪಡಿಸುತ್ತದೆ.ಪಿಡಬ್ಲ್ಯೂ ೧2 ಹಾಗೂ 3 ನೇರವಾಗಿ, ಅವರು ತಾವು ಅಳುವುದನ್ನು ಕೇಳಿದೆವೆಂದು ಸ್ಪಷ್ಟವಾಗಿ ಸಾಕ್ಷ್ಯ ಎ ಹೇಳಿದ್ದು, ಅದು ಸಹ ಇದು ಅಪಘಾತದ ಪ್ರಕರಣವಾಗಿಲ್ಲದೆ, ಕೊಲೆಯ ಪ್ರಕರಣವಾಗಿತ್ತು ಎಂಬುದನ್ನು ದೃಢಪಡಿಸುತ್ತದೆ.ಪಿಡಬ್ಲ್ಯೂ 4 ರ ಸಾಕ್ಷ್ಯವು, 1 ನೇ ಆಪಾದಿತನು ಘಟನೆ ನಡೆದ ಸ್ಥಳದಲ್ಲಿದ್ದುದನ್ನು ತೋರಿಸಿದ್ದು, ಪಿಡಬ್ಲ್ಯೂ ಶಿ 6 ಸಹ ಮೃತಳು ಬೆಳಿಗ್ಗೆ ಸುಮಾರು 10.00 ಗಂಟೆಯಲ್ಲಿ ಬೈಕಿನಲ್ಲಿ 1 ನೇ ಆಪಾದಿತನೊಂದಿಗೆ ಹೋಗುತ್ತಿರುವುದರ ಬಗ್ಗೆ ತಿಳಿಸಿದ್ದಾರೆ.ಮೃತದೇಹದ ೧ ಪರೀಕ್ಷೆ ನಡೆಸಿದ ವೈದ್ಯರನ್ನು ಪಿಡಬ್ಲ್ಯೂ 27 ಎಂದು ವಿಚಾರಣೆ ಮಾಡಿದ್ದು, ಅವರು ಇಬ್ಬರು ಅಥವಾ ಅದಕ್ಕಿಂತ ಹೆಚ್ಚಿನ ಜನರ ನಡುವೆ ಹೊಡೆದಾಟ ನಡೆದಿದ್ದರೆ 5 ರಿಂದ 8 ರವರೆಗೆ ಗಾಯಗಳಾಗುವ ಸಂಭವವಿದೆಯೆಂದು ತಿಳಿಸಿದ್ದಾರೆ.5 ರಿಂದ 8 ರವರೆಗಿನ ಗಾಯಗಳು, ಬಲಗಣ್ಣಿನ ಪಾರ್ಶ್ವಕೋನದಲ್ಲಿ ತರಚಿರುತ್ತದೆ, ಎಡತೋಳಿನ ಮಧ್ಯಭಾಗದಲ್ಲಿ ವೃತ್ತಾಕಾರವಾಗಿ ಎರಡು ಮೂಗೇಟುಗಳಾಗಿದ್ದು ಪಾರ್ಶ್ವಿಕ ಹಾಗೂ ಎಡಗೈ ಮಧ್ಯದ ಹಿಂಭಾಗದ ಕಡೆ ತರಚಿರುತ್ತದೆ, ಬಲಪೃಷ್ಠದಲ್ಲಿ ಪಾರ್ಶ್ವಕವಾಗಿ ಹಾಗೂ ಬಲ ತೊಡೆಯ ಮೇಲಿನ ಭಾಗ ಪಾರ್ಶ್ವಕವಾಗಿ ಹಾಗೂ ಬಲ ಕಾಲಿನ ಮಧ್ಯದ ಮುಂಭಾಗ ಸವೆದಿದೆ ಹಾಗೂ ಬಲ ಪಾದದ ಪಾರ್ಶ್ವಿಕ ಮೂಳೆ ತರಚಿಹೋಗಿದೆ.ಅಧಿವಿಚಾರಣಾ ನ್ಯಾಯಾಲಯವು, ಕಡೆಯ ಘಟನೆ ನಡೆದ ಸನ್ನಿವೇಶಗಳನ್ನು ಹಾಗೂ ಘಟನೆ ನಡೆದ ಸ್ಥಳದಲ್ಲಿ 1 ನೇ ಆಪಾದಿತನು ಸಮೀಪದಲ್ಲಿರುವುದನ್ನು ಹಾಗೂ ಕೊಲೆಯಾಗಿ ಸಾವಾಗಿರುವುದನ್ನು ಪರಿಗಣಿಸಲು ವಿಫಲರಾಗಿದ್ದಾರೆ.ಆಪಾದಿತನು ಯಾವುದೇ ವಿವರಣೆಯನ್ನು ನೀಡಿಲ್ಲ, ಬದಲಾಗಿ ಅವನು, ಅಪಘಾತದ ಕಾರಣದಿಂದಾಗಿ ಗಾಯಗಳಾಗಿವೆಯೆಂದು ನಟಿಸಿ ಆಸ್ಪತ್ರೆಗೆ ಹೋಗಿ ಸೇರಿಕೊಂಡಿದ್ದಾನೆ.ಈ ಎಲ್ಲಾ ಸಾಂದರ್ಭಿಕ ಸನ್ನಿವೇಶಗಳು, ಆಪಾದಿತನೇ ಕೊಲೆಯನ್ನು ಮಾಡಿದ್ದಾನೆಂಬುದಕ್ಕೆ ಸಂಬಂಧ ಕಲ್ಪಿಸುತ್ತವೆ.ಹೀಗಾಗಿ, ಹಿಂದೆ ಹೇಳಲಾದ ಅಪರಾಧಗಳಿಗಾಗಿ ಆಪಾದಿತ ವ್ಯಕ್ತಿಗಳನ್ನು ದೋಷಿಗಳೆಂದು ನಿರ್ಣಯಿಸಬೇಕೆಂದು ಈ ನ್ಯಾಯಾಲಯವನ್ನು ಕೋರಲಾಗಿದೆ.

10. ರಾಜ್ಯದ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಎಂದರೆ ಹೆಚ್ಚುವರಿ ವಿಶೇಷ ಸರ್ಕಾರಿ ಪ್ರಾಸಿಕ್ಯೂಷನ್ ಶ್ರೀ ಐ.ಎಸ್. ಪ್ರಮೋದ್ ಚಂದ್ರರವರು, ತಮ್ಮ ವಾದದಲ್ಲಿ, ಭಾವನಾಗಿರುವ ಪಿಡಬ್ಲ್ಯೂ -1 ಹಾಗೂ ಮೃತರ ಸಹೋದರಿಯೂ ಕೂಡ ನ್ಯಾಯಾಲಯದ ಮುಂದೆ 1 ನೇ ಆಪಾದಿತನೇ ಅಪಘಾತವಾದ ದಿನಾಂಕದಂದು ಬೆಳಿಗ್ಗೆ 10.00 ಗಂಟೆಯಲ್ಲಿ ತನ್ನ ಮೋಟಾರು ಸೈಕಲ್ಲಿನಲ್ಲಿ ಮೃತಳನ್ನು ಕರೆದೊಯ್ದನೆಂದು ಹಾಗೂ ಮೃತಳು ಪಿಡಬ್ಲ್ಯೂ ಇತಿ ನೊಂದಿಗೆ ದೂರವಾಣಿಯಲ್ಲಿ ಮಾತನಾಡಿದಳೆಂದೂ ಕೂಡ ಹೇಳಿಕೆ ನೀಡಿದ್ದಾರೆ.ವಿಚಾರಣೆಯ ನಂತರ, ಅವಳು, ಮಧ್ಯಾಹ್ನದ ಊಟಕ್ಕಾಗಿ ಮನೆಗೆ ಬರುವುದಾಗಿ ತಿಳಿಸಿದ್ದಾಳೆ.ಆದರೆ ಅವರು ಬರದಿದ್ದಾಗ, 1 ನೇ ಆಪಾದಿತನನ್ನು ದೂರವಾಣಿ ಮೂಲಕ ಸಂಪರ್ಕಿಸಲಾಗಿತ್ತು.ಆದರೆ ಅವನು ದೂರವಾಣಿಗೆ ಉತ್ತರ ನೀಡಿರಲಿಲ್ಲ ಹೀಗಾಗಿ, ' ನನಗೆ ಕರೆ ಮಾಡು ' ಎಂದು ಸಂದೇಶವನ್ನು ಕಳಿಸಲಾಗಿತ್ತು, ಅದಕ್ಕೂ ಅವನು ಯಾವುದೇ ಉತ್ತರ ನೀಡಿರಲಿಲ್ಲ.ಮಧ್ಯಾಹ್ನ ಸುಮಾರು 4.00 ಗಂಟೆಗೆ ಒಬ್ಬ ವ್ಯಕ್ತಿ ಕರೆಮಾಡಿದ್ದು, ಚೈತ್ರಳು ರಸ್ತೆ ಅಪಘಾತದಲ್ಲಿ ಮೃತಳಾಗಿರುವಳೆಂದು ತಿಳಿಸಿದ.ಪಿ.ಡಬ್ಲ್ಯೂ -1 ಹಾಗೂ ಇತರರು ಕೂಡಲೇ ಸ್ಥಳಕ್ಕೆ ಧಾವಿಸಿದ್ದರು.ಈ ನಡುವೆ 2 ನೇ ಹಾಗೂ 3 ನೇ ಆಪಾದಿತರು ಮೃತದೇಹವನ್ನು

ಸ್ಥಳಾಂತರಿಸಿದ್ದರು ಎಂದು ಬಲವಾಗಿ ವಾದಿಸಿದ್ದಾರೆ.ಮುಂದುವರೆಸುತ್ತಾ, ಮಾನ್ಯ ವಕೀಲರು, 1 ರಿಂದ 3 ರವರೆಗಿನ ಆಪಾದಿತರ ಕರೆ ವಿವರ ದಾಖಲೆಗಳನ್ನು ಸಾಕ್ಷಿ ನಡೆಯುವ ಅವಧಿಯಲ್ಲಿ ಪೊಲೀಸರು ಸಂಗ್ರಹಿಸಿರುವರೆಂದು ವಾದಿಸಿರುವರು.ನಿಶಾನೆ ಪಿ .58 ರಲ್ಲಿ 2 ನೇ ಆಪಾದಿತನು 1 ನೇ ಆಪಾದಿತನಿಗೆ ಹಿಂದಿನ ರಾತ್ರಿ 10.30 ರಲ್ಲಿ ದೂರವಾಣಿ ಕರೆಮಾಡಿದ್ದು, 281 ಸೆಕೆಂಡುಗಳ ಕಾಲ ಮಾತನಾಡಿರುವುದನ್ನು, ಪುನಃ 1 ನೇ ಆಪಾದಿತನು ಬೆಳಿಗ್ಗೆ 9.28 ರಲ್ಲಿ ಪಿಡಬ್ಲ್ಯೂ -1 ಕ್ಕೆ ಕರೆ ಮಾಡಿರುವುದನ್ನು ಸ್ಪಷ್ಟವಾಗಿ ತೋರಿಸುತ್ತದೆ ಹಾಗೂ 2 ನೇ ಆಪಾದಿತನು ಬೆಳಿಗ್ಗೆ 10.31 ರಲ್ಲಿ 1 ನೇ ಆಪಾದಿತನಿಗೆ ಕರೆ ೧ ಮಾಡಿದ್ದಾನೆ.ತದನಂತರ, 1 ನೇ ಆಪಾದಿತನು ಮಧ್ಯಾಹ್ನ 1.20 ರಲ್ಲಿ ಮಧ್ಯಾಹ್ನದ ಊಟಕ್ಕೆ ತಾವು ಮನೆಗೆ ಬರುವ ಮಾಹಿತಿ ಕಳುಹಿಸುವ ಮೂಲಕ ಪಿ.ಡಬ್ಲ್ಯೂ .1 ಕ್ಕೆ ಕರೆ ಮಾಡಿದ್ದಾನೆ.ನಂತರ ಮಧ್ಯಾಹ್ನ 2.17 ರಲ್ಲಿ 1 ನೇ ಆಪಾದಿತನು 2 ನೇ ಆಪಾದಿತನಿಗೆ ಕರೆಮಾಡಿದ್ದಾನೆ.2 ನೇ ಆಪಾದಿತನು ಮಧ್ಯಾಹ್ನ 2.30 ರಲ್ಲಿ 1 ನೇ ಆಪಾದಿತನಿಗೆ ಕರೆಮಾಡಿದ್ದಾನೆ.ಇದಾದನಂತರ 1 ನೇ ಆಪಾದಿತನು ಮಧ್ಯಾಹ್ನ 4.11 ರಲ್ಲಿ 3 ನೇ ಆಪಾದಿತನಿಗೆ ಕರೆ ಮಾಡಿದ್ದಾನೆ.ಪಿಡಬ್ಲ್ಯೂ -1 ಸಂಜೆ 4.44 ರಿಂದ 6.19 ರವರೆಗೆ 1 ನೇ ಆಪಾದಿತನಿಗೆ ಕರೆ ಮಾಡಿದಾಗ, ಅವನು ಯಾವುದೇ ದೂರವಾಣಿ ಕರೆಯನ್ನು ಸ್ವೀಕರಿಸಿಲ್ಲ ಹಾಗೂ ' ಕಾಲ್ ಮಿ ' ಎಂದು ತಿಳಿಸಿ ಸಂದೇಶವನ್ನು ಕಳಿಸಿದ್ದಾರೆ.ಮಾನ್ಯ ವಕೀಲರು, 1 ನೇ ಹಾಗೂ 3 ನೇ ಆಪಾದಿತರು ಲಾಲನಕೆರೆ ನಿವಾಸಿಗಳಾಗಿದ್ದು, 2 ನೇ ಆಪಾದಿತನು ಲಾಲನ ಕೆರೆ ನಿವಾಸಿಯಾಗಿರುವುದಿಲ್ಲವೆಂದು ವಾದಿಸಿರುವರು.ಮಾನ್ಯ ವಕೀಲರು, ಕೊಲೆಯನ್ನು ಮಾಡಿದ ನಂತರ 1 ನೇ ಆಪಾದಿತನ ವಿರುದ್ಧ ಲಭ್ಯವಾಗಬಹುದಾದ ಸಾಕ್ಷ್ಯಗಳನ್ನು ಮರೆಮಾಚಲು 1 ನೇ ಆಪಾದಿತನು 2 ಹಾಗೂ 3 ನೇ ಆಪಾದಿತರ ನೆರವನ್ನು ಪಡೆದಿರುವನು ಎಂದು ವಾದಿಸಿರುವರು.ಹಾಗಾಗಿ, 2 ಹಾಗೂ 3 ನೇ ಆಪಾದಿತರು ಭಾರತ ದಂಡ ಸಂಹಿತೆಯ 201 ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧವನ್ನು ಮಾಡಿರುವರು.ವೈದ್ಯಕೀಯ ದಾಖಲೆಗಳೂ ಕೂಡ, ತಲೆಗೆ ಆದ ಗಾಯದ ಕಾರಣದಿಂದ ಇದು ಹತ್ಯೆಯಾಗಿದೆಯೇ ಹೊರತು ಅಪಘಾತದಿಂದಾದ ಸಾವಲ್ಲ ಹಾಗೂ ಕುತ್ತಿಗೆ ಮೇಲೆ ಬಲವಾಗಿ ಒತ್ತಿ ಹಿಡಿದು ಉಸಿರುಗಟ್ಟಿಸಿರುವ ಕಾರಣದಿಂದ ಸಾವಾಗಿದೆ ಎಂಬುದನ್ನು ಸೂಚಿಸುತ್ತದೆ.ಈ ಎಲ್ಲಾ ಸನ್ನಿವೇಶಗಳು 1 ನೇ ಆಪಾದಿತನ ವಿರುದ್ಧ ಇದ್ದರೂ ಸಹ, ಅಧಿವಿಚಾರಣಾ ನ್ಯಾಯಾಧೀಶರು ಲೋಪವೆಸಗಿದ್ದಾರೆಂದು ವಾದಿಸಿರುತ್ತಾರೆ.

11. ಆಪಾದಿತನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ತಮ್ಮ ವಾದಗಳಲ್ಲಿ, ವಿಚಾರಣಾ ನ್ಯಾಯಾಲಯವು, ದಾಖಲೆಯಲ್ಲಿರುವ ಸಾಕ್ಷ್ಯವನ್ನು ತುಂಬಾ ಸೂಕ್ಷ್ಮವಾಗಿ ಪರಿಗಣಿಸಿದೆ ಮತ್ತು ಪ್ರಕರಣವು ಸಾಂದರ್ಭಿಕ ಸಾಕ್ಷ್ಯದ ಮೇಲೆ ನಿಂತಿದ್ದು, ಘಟನೆಗೆ ಯಾವುದೇ ಪ್ರತ್ಯಕ್ಷ ಸಾಕ್ಷಿದಾರರು ಇಲ್ಲವೆಂದು ಬಲವಾಗಿ ವಾದಿಸಿದ್ದಾರೆ.1 ನೇ ಆಪಾದಿತನಿಗೂ ಅಪಘಾತದಲ್ಲಿ ಗಾಯಗಳಾಗಿವೆ.ಹೀಗಾಗಿ, ಅವನು ಆಸ್ಪತ್ರೆಗೆ ಹೋಗಿ ಸೇರಿದ್ದಾನೆ.ಇದು ಅಪಘಾತದ ಪ್ರಕರಣವಾಗಿದ್ದು, ಕೊಲೆಯಿಂದ ಸಾವಾಗಿರುವ ಪ್ರಕರಣವಲ್ಲ.ಅಲ್ಲದೆ, ಯಾವುದೇ ಸನ್ನಿವೇಶಗಳ ಸರಣಿಯಿರುವುದಿಲ್ಲ.ಸಾಂದರ್ಭಿಕ ಸಾಕ್ಷ್ಯದ ಸಂದರ್ಭದಲ್ಲಿ, ಪ್ರತಿಯೊಂದು ಸನ್ನಿವೇಶಗಳಿಗೂ ಒಂದಕ್ಕೊಂದು ಸಂಬಂಧವಿರಬೇಕಿತ್ತು ಹಾಗೂ ಯಾವುದೇ ಒಂದೇ ಒಂದು ಸಂಬಂಧ ತಪ್ಪಿದರೂ, ನಮ್ಮ ಮುಂದಿರುವ ಮೊಕದ್ದಮೆಯೊಂದಿಗೆ ಆಪಾದಿತನನ್ನು ತಳುಕು ಹಾಕಲು ಸಾಧ್ಯವಿರಲಿಲ್ಲ.ಅವರ ವಿರುದ್ಧ ವಿಧಿಸಲಾದ ಆರೋಪಗಳಿಗೆ ಆಪಾದಿತ ವ್ಯಕ್ತಿಗಳನ್ನು ಸಿಕ್ಕಿಸಲು ಪ್ರಾಸಿಕ್ಯೂಷನ್ ವಿಫಲವಾಗಿದ್ದು, ವಿಚಾರಣಾ ನ್ಯಾಯಾಲಯವು ವಿವರವಾಗಿ ಚರ್ಚಿಸಿ, ಪ್ರಾಸಿಕ್ಯೂಷನ್ ಆಪಾದಿತ ವ್ಯಕ್ತಿಗಳ ವಿರುದ್ಧ ಮೊಕದ್ದಮೆಯನ್ನು ರುಜುವಾತುಪಡಿಸಲು ವಿಫಲವಾಗಿದೆ ಮತ್ತು ಆಪಾದಿತ

ವ್ಯಕ್ತಿಗಳ ಮೇಲಿನ ಸಂದೇಹದ ಲಾಭವನ್ನು ನೀಡಿರುವರು ಎಂದು ಅಭಿಪ್ರಾಯಪಟ್ಟಿರುತ್ತದೆ.ಹೀಗಾಗಿ ಅಧಿವಿಚಾರಣಾ ನ್ಯಾಯಾಲಯದ ನಿರ್ಣಯವನ್ನು ನಿರರ್ಥಕಗೊಳಿಸುವುದಕ್ಕೆ ಯಾವುದೇ ಆಧಾರಗಳಿಲ್ಲ ಹಾಗೂ ಪಿಡಬ್ಲ್ಯೂ ಇತಿ 7 ಮೃತಳ ತಾಯಿ ಹಾಗೂ ರಾಜ್ಯವು ಸಲ್ಲಿಸಿದ ಅಪೀಲನ್ನು ವಜಾಗೊಳಿಸಲು ಈ ನ್ಯಾಯಾಲಯವನ್ನು ಕೋರಿರುತ್ತಾರೆ.

12. ಎರಡೂ ಕಡೆಯ ಅಪೀಲುದಾರರ ವಕೀಲರ ವಾದಗಳು ಹಾಗೂ ರಾಜ್ಯದ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಹಾಗೆಯೇ ಎದುರುದಾರರ/ಆಪಾದಿತರ ಪರವಾಗಿ ಹಾಜರಾಗಿರುವ ವಕೀಲರ ವಾದಗಳನ್ನು ಆಲಿಸಿದ್ದು, ಈ ಮುಂದಿನ ಅಂಶಗಳನ್ನು ನಮ್ಮ ಪರಿಗಣನೆಗಾಗಿ ಎತ್ತಲಾಗಿದೆ:

1. ವಿಚಾರಣಾ ನ್ಯಾಯಾಲಯವು, ಭಾರತ ದಂಡ ಸಂಹಿತೆಯ 302 ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಗಳಿಗಾಗಿ 1 ನೇ ಆಪಾದಿತನನ್ನು ಖುಲಾಸೆಗೊಳಿಸುವಲ್ಲಿ ಲೋಪವೆಸಗಿದೆಯೇ?

2. ವಿಚಾರಣಾ ನ್ಯಾಯಾಲಯವು, ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ 201 ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಗಳ ಸಂಬಂಧದಲ್ಲಿ 2 ನೇ ಮತ್ತು 3 ನೇ ಆಪಾದಿತರನ್ನು ಖುಲಾಸೆಗೊಳಿಸುವಲ್ಲಿ ದೋಷವೆಸಗಿದೆಯೇ?

13. ವಿವಾದಾಂಶ ಸಂ .1:-ನಾವು, ಸಂಬಂಧಪಟ್ಟ ಅಪೀಲುದಾರರ ಪರ ವಕೀಲರು ಹಾಗೂ ಪ್ರತಿವಾದಿಗಳ ಪರ ವಕೀಲರು ಮಂಡಿಸಿದ ವಾದಾಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳನ್ನು ಪರಿಗಣಿಸಬಯಸುತ್ತೇವೆ.ಅದನ್ನು ವಿವೇಚಿಸುವ ಮೊದಲು, ನಾವು ಪ್ರಾಸಿಕ್ಯೂಷನ್ನ ಸಾಕ್ಷ್ಯವನ್ನು ಸಂಕ್ಷಿಪ್ತವಾಗಿ ಚರ್ಚಿಸಬಯಸುತ್ತೇವೆ.ಪ್ರಾಸಿಕ್ಯೂಷನ್ ಪಿಡಬ್ಲ್ಯೂ ಅಶ 1 ರಿಂದ 30 ರವರೆಗಿನ ಸಾಕ್ಷ್ಯಗಳನ್ನು ವಿಚಾರಣೆ ಮಾಡಿದ್ದು, ನಿಶಾನೆ ಪಿ .1 ರಿಂದ 72 ರವರೆಗಿನ ನಿಶಾನೆಗಳನ್ನು ಹಾಗೂ 1 ರಿಂದ 14 ರವರೆಗಿನ ಮುದ್ದೆ ಮಾಲುಗಳನ್ನು ಗುರುತುಮಾಡಿರುತ್ತಾರೆ.ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯವನ್ನು ಪರಿಗಣಿಸುವ ಮೊದಲು, ನಾವು, ಸಂಕ್ಷಿಪ್ತವಾಗಿ ಪ್ರಾಸಿಕ್ಯೂಷನ್ನ ವಾದವನ್ನು ಹಾಗೂ ಆಪಾದಿತ ವ್ಯಕ್ತಿಗಳ ವಿರುದ್ದ ಅದರಲ್ಲೂ ನಿರ್ದಿಷ್ಟವಾಗಿ, ಮೃತ-ಚೈತ್ರಳ ಕೊಲೆಯನ್ನು ಮಾಡಿರುವ 1 ನೇ ಆಪಾದಿತರ ವಿರುದ್ದ ವಿಧಿಸಲಾದ ಆರೋಪಗಳನ್ನು ಪ್ರಸ್ತಾಪಿಸಬಯಸುತ್ತೇವೆ.ಇದಾದ ನಂತರ ಅವನು ಸಾಕ್ಷ್ಯವನ್ನು ಮರೆಮಾಚಲು 2 ಹಾಗೂ 3 ನೇ ಆಪಾದಿತರ ನೆರವನ್ನು ತೆಗೆದುಕೊಂಡಿರುತ್ತಾನೆ.ಅಲ್ಲದೆ, 1 ನೇ ಆಪಾದಿತನು ಅಪಘಾತವಾಗಿದೆಯೆಂಬಂತೆ ನಟಿಸಿದ ಆರೋಪ ಸಹ ಇದೆ. ಪ್ರಾಸಿಕ್ಯೂಷನ್ನು ಮುಖ್ಯವಾಗಿ, 1 ರಿಂದ 4 ರವರೆಗಿನ, 6 ಹಾಗೂ 7 ರವರೆಗಿನ ಸಾಕ್ಷ್ಯವನ್ನು ಆಧರಿಸಿದೆ ಹಾಗೂ ವೈದ್ಯರಾದ ಪಿಡಬ್ಲ್ಯೂ 27 ಹಾಗೂ 28 ರ ಸಾಕ್ಷ್ಯವನ್ನು, ಹಾಗೆಯೇ ಪ್ರಕರಣದೊಂದಿಗೆ ಜೋಡಿಸಲು ತನಿಖಾಧಿಕಾರಿಯ ಸಾಕ್ಷ್ಯವನ್ನು ಎಂದರೆ ಸಂಗ್ರಹಿಸಲಾದ ಆಪಾದಿತನ ಕರೆಗಳ ದಾಖಲೆ ವಿವರಗಳನ್ನು ಅವಲಂಬಿಸಲಾಗಿದೆ.ಪಂಚರ ಹಾಗೂ ಇತರ ಸಾಕ್ಷಿದಾರ ಸಾಕ್ಷ್ಯವನ್ನು ಕೂಡ ಪ್ರಾಸಿಕ್ಯೂಷನ್ ಅವಲಂಬಿಸಿದೆ.

14. ಈಗ, ನ್ಯಾಯಾಲಯದ ಮುಂದೆ ಲಭ್ಯವಿರುವ ಸಾಕ್ಷ್ಯವನ್ನು ಪರಿಶೀಲಿಸೋಣ.ಪಿಡಬ್ಲ್ಯೂ -1 ಮೃತಳ ಭಾವ ಆಗಿದ್ದು, ತನ್ನ ಸಾಕ್ಷಿಯಲ್ಲಿ ಮೃತಳು ತನ್ನ ಪತ್ನಿಯ ಸಹೋದರಿಯೆಂದು ಸ್ಪಷ್ಟವಾಗಿ ತಿಳಿಸಿದ್ದಾನೆ.ಪಿಡಬ್ಲ್ಯೂ - 6 ಅವನ ಪತ್ನಿ ತನ್ನ ಸಾಕ್ಷ್ಯದಲ್ಲಿ, 1 ನೇ ಆಪಾದಿತನೊಂದಿಗೆ ಮೃತಳ ವಿವಾಹ ನಿಶ್ಚಯವಾಗಿತ್ತೆಂದು ಹೇಳಿದ್ದಾರೆ.ಹೀಗಾಗಿ ಘಟನೆ ನಡೆಯುವ 15 ದಿನಗಳಿಗೆ ಮೊದಲು ಮೃತಳು ತಮ್ಮ ಮನೆಗೆ ಬಂದಿದ್ದಳು.ಇಬ್ಬರೂ

ತಮ್ಮ ಸಾಕ್ಷ್ಯದಲ್ಲಿ, 1 ನೇ ಆಪಾದಿತನುದಿನಾಂಕ: 19-07-2009ರಂದು ಬೆಳಿಗ್ಗೆ ಸುಮಾರು 9.00 ಗಂಟೆಗೆ ತಮ್ಮ ಮನೆಗೆ ಬಂದಿದ್ದು, ಅವರು ಶ್ರವಣಬೆಳಗೊಳ ದೇವಸ್ಥಾನಕ್ಕೆ ಹೋಗುವುದಾಗಿ ತಿಳಿಸಿ ಮೃತಳನ್ನು ಕರೆದೊಯ್ದನೆಂದು ತಿಳಿಸಿದ್ದಾರೆ.ಇಬ್ಬರೂ ಮೋಟಾರು ಸೈಕಲ್ನಲ್ಲಿ ಹೋಗಿದ್ದಾರೆ.ಮಧ್ಯಾಹ್ನ ಸುಮಾರು 1.30 ರಲ್ಲಿ ಚೈತ್ರ ದೂರವಾಣಿಯಿಂದ ಕರೆಮಾಡಿದ್ದಾಳೆ.ಸಾಯಂಕಾಲ ಸುಮಾರು 4.00 ಗಂಟೆಗೆ 2 ನೇ ಆಪಾದಿತನು ಪಿ.ಡಬ್ಲ್ಯೂ, 1 ಕ್ಕೆ ಕರೆಮಾಡಿ, ಇಬ್ಬರಿಗೂ ಕೆರೆ ಏರಿಯ ಮೇಲೆ ಅಪಘಾತವಾಗಿದ್ದು, ಇದರ ಪರಿಣಾಮವಾಗಿ ಚೈತ್ರ ಮರಣ ಹೊಂದಿದ್ದಾಳೆ ಎಂದು ತಿಳಿಸಿದ್ದಾನೆ.ಕೂಡಲೇ ಇಬ್ಬರೂ ಸ್ಥಳಕ್ಕೆ ಧಾವಿಸಿದ್ದು, ಕೆರೆ ಏರಿ ರಸ್ತೆಯಲ್ಲಿ ಮೃತದೇಹವನ್ನು ಕಂಡಿದ್ದಾರೆ.2 ನೇ ಹಾಗೂ 3 ನೇ ಆಪಾದಿತರು ಹಾಗೂ ಪಿ.ಡಬ್ಲ್ಯೂ.ಸ್ಥಳದಲ್ಲಿದ್ದರು ಹಾಗೂ ಮೋಟಾರು ಸೈಕಲ್ಗೆ ಯಾವುದೇ ಹಾನಿಯಾಗಿರುವುದು ಅವರಿಗೆ ಕಾಣಲಿಲ್ಲ.ಪಿಡಬ್ಲ್ಯೂ -7 ಅಳುತ್ತಿದ್ದಾಗ, 2 ನೇ ಹಾಗೂ 3 ನೇ ಅಪಾದಿತರು, ಮೃತದೇಹವನ್ನು ಆಟೋರಿಕ್ಷಾಗೆ ಎತ್ತಿಕೊಂಡಿದ್ದು ಅವರನ್ನು ಸದರಿ ಆಟೋರಿಕ್ಷಾದಲ್ಲಿ ಮೃತದೇಹದೊಂದಿಗೆ ಪಿಡಬ್ಲ್ಯೂ 7 ರ ಮನೆಗೆ ಕಳುಹಿಸಿದ್ದಾರೆ.ಇಬ್ಬರೂ ಕೂಡ ಸ್ಥಳದಲ್ಲಿ ಶಿರಸ್ತ್ರಾಣ ಬಿದ್ದಿತ್ತೆಂದು ತಿಳಿಸಿದ್ದಾರೆ.3 ನೇ ಆಪಾದಿತನು ಆಟೋರಿಕ್ಷಾವನ್ನು ಚಾಲನೆ ಮಾಡಿದ್ದಾನೆ.ಅವರು ತಲೆಯ ಹಿಂಭಾಗದಲ್ಲಿ ಮತ್ತು ಕುತ್ತಿಗೆಯಲ್ಲಿ ಗಾಯಗಳಾಗಿರುವುದನ್ನು ಗಮನಿಸಿದ್ದಾರೆ.2 ಹಾಗೂ 3 ನೇ ಆಪಾದಿತರಿಬ್ಬರೂ, ಮನೆಯ ಮುಂದೆ ಮೃತ ದೇಹವನ್ನು ಇಟ್ಟು, ಅವಳು ಅಪಘಾತದಲ್ಲಿ ಮೃತಳಾಗಿದ್ದಾಳೆಂದು ತಿಳಿಸಿದ.ಪಿಡಬ್ಲ್ಯೂ -1 ಮತ್ತು ಅವರ ಕುಟುಂಬ ಸದಸ್ಯರು, ಇದು ಅಪಘಾತವಲ್ಲ, ಕೊಲೆಯೆಂದು ಹೇಳಿದ್ದಾರೆ.ಅವರು, ಅಲ್ಲಿ ವಿದ್ಯುಚ್ಛಕ್ತಿ ಇಲ್ಲದಿದ್ದುದರಿಂದ ರಾತ್ರಿಯಲ್ಲಿ ಯಾವುದೇ ಪಂಚಾಯಿತಿಯನ್ನು ನಡೆಸಿಲ್ಲ ಹಾಗೂ ಕೆ.ಆರ್. ಪೇಟೆ ಪೊಲೀಸು ಠಾಣೆಗೆ ಮೃತದೇಹವನ್ನು ಕೊಂಡೊಯ್ದಿದ್ದಾರೆ.1 ನೇ ಆಪಾದಿತನು, ಸಿಡಬ್ಲ್ಯೂ ಅಶ 12 ನ್ನು ಪ್ರೀತಿಸುತ್ತಿದ್ದನು.ಮೃತಳೊಂದಿಗೆ ವಿವಾಹ ನಿಶ್ಚಯವಾದಾಗ, 1 ನೇ ಆಪಾದಿತನು ಮೃತಳನ್ನು ಮುಗಿಸುವ ಯೋಜನೆ ಮಾಡಿಕೊಂಡಿದ್ದಾನೆ ಹಾಗೂ 2 ಹಾಗೂ 3 ನೇ ಆಪಾದಿತರನ್ನು ಪಿಡಬ್ಲ್ಯೂ -1 ರ ಮೂಲಕ ಮುಖ್ಯ ಸಾಕ್ಷ್ಯದಲ್ಲಿನ ಇಬ್ಬರೂ ಸಾಕ್ಷಿದಾರರು ಗುರುತಿಸಿದ್ದಾರೆ.ಮುದ್ದೆ ಮಾಲುಗಳನ್ನು 1 ರಿಂದ 14 ರವರೆಗಿನ ಮುದ್ದೆಮಾಲುಗಳೆಂದು ಸಹ ಗುರುತಿಸಲಾಗಿದೆ.ಪಿಡಬ್ಲ್ಯೂ -1 ರ ಪಾಟೀ-ಸವಾಲಿನಲ್ಲಿ, ನಾಗಮಂಗಲದ ಪ್ರಸನ್ನ ಎಂಬೊಬ್ಬರ ಮೂಲಕ ಬರೆಸಲಾದ ದೂರು-ನಿಶಾನೆ ಪಿ .1 ನ್ನು ಪಡೆದುಕೊಂಡು ನಿಶಾನೆ ಪಿ .1 ರ ಒಳಾಂಶಗಳನ್ನು ತಾನು ಓದಿಕೊಂಡಿರುವುದಾಗಿ ಹೊರಗೆಡಹಿದ್ದಾರೆ.ಅವರು, ಎಷ್ಟು ದಿನದಿಂದ ಮೃತಳು ತಮ್ಮ ಮನೆಯಲ್ಲಿ ಉಳಿದುಕೊಂಡಿದ್ದಳೆಂಬುದನ್ನು ಸೂಚಿಸಿರಲಿಲ್ಲ.ಅವರು ಬಿಂಡಿಗನವಿಲೆ ಪೊಲೀಸು ಠಾಣೆಗೆ ಹೋಗಿದ್ದಾಗ, ಅವರು ಮೃತದೇಹವನ್ನು ತೆಗೆದುಕೊಂಡಿರಲಿಲ್ಲ.ಪೊಲೀಸರು ಕೆ.ಆರ್. ಪೇಟೆ ಪೊಲೀಸು ಠಾಣೆಯ ಅಧಿಕಾರವ್ಯಾಪ್ತಿಯೊಳಗೆ ಅಪಘಾತ ನಡೆದಿರುವುದರಿಂದ, ಸದರಿ ಪೊಲೀಸು ಠಾಣೆಯಲ್ಲಿ ದೂರನ್ನು ನೀಡಬೇಕಾಗುತ್ತದೆಯೆಂದು ತಿಳಿಸಿದ್ದಾರೆ, ಇದರಿಂದ ದೂರನ್ನು ಕೆ.ಆರ್. ಪೇಟೆ ಪೊಲೀಸು ಠಾಣೆಗೆ ನೀಡಲಾಗಿತ್ತು.ಅವರು ಮೃತದೇಹದೊಂದಿಗೆ ಹೋಗಿದ್ದು, ಪೊಲೀಸು ಠಾಣೆಯೊಳಕ್ಕೆ ಮೃತದೇಹವನ್ನು ತೆಗೆದುಕೊಂಡಿರಲಿಲ್ಲ.ಆದರೆ, ಶವಾಗಾರಕ್ಕೆ ತೆಗೆದುಕೊಂಡಿದ್ದರು.ಅವರು ಈ ಬಗ್ಗೆ ದೂರನ್ನು ನೀಡಿದ್ದಾಗ, ಆ ಸಮಯದಲ್ಲಿ ದೂರನ್ನು ಬರೆಯುವವನು ಬಂದು ಸ್ವತಃ ಅವನೇ ಪೊಲೀಸರಿಗೆ ದೂರನ್ನು ಕೊಡಲು ನಿರ್ಧರಿಸಿದ್ದಾನೆ.ಅವನು 19-04-2009 ರಲ್ಲಿ ನಿಶ್ಚಿತಾರ್ಥ ನಡೆದಿತ್ತೆಂಬುದನ್ನು ಹಾಗೂ ಅದಕ್ಕೆ ಯಾವುದೇ ದಸ್ತಾವೇಜುಗಳಿಲ್ಲವೆಂದು ಒಪ್ಪಿಕೊಂಡಿದ್ದಾನೆ.ಮೃತಳನ್ನು ವಿವಾಹವಾಗುವ ಉದ್ದೇಶವನ್ನು ಅವನು ಹೊಂದಿದ್ದನೆಂದು, ಇದರಿಂದಾಗಿ, ಅವನು ತನ್ನ ಮನೆಗೆ ಅವಳನ್ನು ಕರೆದುಕೊಂಡು ಹೋಗಿದ್ದನೆಂಬ ಸದರಿ ಸೂಚನೆಯನ್ನು ಅವನು ನಿರಾಕರಿಸಿದ್ದಾನೆ.ಅಷ್ಟೇ ಅಲ್ಲದೆ, ಈ ಸಂಬಂಧದಲ್ಲಿ, ದಿನಾಂಕ 19-07-2009ರಂದು

ಮನೆಯಲ್ಲಿ ಗಲಾಟೆ ನಡೆದಿತ್ತೆಂದು, ಇದರಿಂದ ಅವಳು ಮನೆಯನ್ನು ಬಿಟ್ಟಿದ್ದು, ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾಳೆ ಎಂದು ಸೂಚಿಸಲಾಗಿದ್ದು, ಸದರಿ ಸೂಚನೆಯನ್ನು ನಿರಾಕರಿಸಲಾಗಿದೆ.19-07 2009 ರಂದು, ಆಪಾದಿತನು ತನ್ನ ಮೋಟಾರು ಸೈಕಲ್ನಲ್ಲಿ ಮೃತಳನ್ನು ಕರೆದೊಯ್ಯಲು ಅವನ ಮನೆಗೆ ಹೋಗಿರಲಿಲ್ಲ.ಆ ವೇಳೆಯಲ್ಲಿ, 1 ನೇ ಸಂಖ್ಯೆಯ ಆಪಾದಿತನು ತಾನು ಯಾವುದೇ ಸಮಯದಲ್ಲೂ ಅವನೊಂದಿಗೆ ದೂರವಾಣಿಯಲ್ಲಿ ಮಾತನಾಡಿರಲಿಲ್ಲವೆಂದು ಒಪ್ಪಿಕೊಂಡಿದ್ದಾನೆ.1 ನೇ ಆಪಾದಿತನು ಕೃಷಿಕನಾಗಿದ್ದು, 3 ನೇ ಆಪಾದಿತನು ಆಟೋರಿಕ್ಷಾ ವ್ಯವಹಾರ ನಡೆಸುತ್ತಿದ್ದನೆಂಬುದನ್ನು ಅವನು ಒಪ್ಪಿಕೊಂಡಿದ್ದಾನೆ.ಅಷ್ಟೇ ಅಲ್ಲದೆ ಅವನು, 1 ನೇ ಆಪಾದಿತನು ತಮ್ಮ ಮನೆಗೆ ಬರುತ್ತಿದ್ದನೆಂದು ಮೃತಳೇ ಹೇಳಿದಳೆಂಬುದನ್ನು ಒಪ್ಪಿಕೊಂಡಿದ್ದಾನೆ. ಅಷ್ಟೇ ಅಲ್ಲದೆ ಅವನು, ಸಾಯಂಕಾಲ ಸುಮಾರು 4 ಗಂಟೆಗೆ ಅವನಿಗೆ 2 ನೇ ಆಪಾದಿತನು ಕರೆ ಮಾಡಿ ಅಪಘಾತದ ಬಗ್ಗೆ ತಿಳಿಸಿದನೆಂಬುದನ್ನು ಒಪ್ಪಿಕೊಂಡಿದ್ದಾನೆ.ಕೂಡಲೇ ಸ್ವತಃ ಅವನು ಹಾಗೂ ಅವನ ಪತ್ನಿ ಸ್ಥಳಕ್ಕೆ ಧಾವಿಸಿದ್ದು, ಅವನು ಕೊಲೆಯ ಬಗ್ಗೆ ಸಂದೇಹಪಟ್ಟ ಸ್ಥಳದಲ್ಲಿ ಮೋಟಾರು ಸೈಕಲ್ಲು ಇರುವುದು ಕಂಡುಬಂದಿದೆ.2 ನೇ ಹಾಗೂ 3 ನೇ ಆಪಾದಿತರಿಬ್ಬರೂ 3 ನೇ ಆಪಾದಿತನಿಗೆ ಸೇರಿದ ಆಟೊರಿಕ್ಷಾದಲ್ಲಿ ಮೃತದೇಹವನ್ನು ಸ್ಥಳಾಂತರಿಸಿದ್ದಾರೆ ಹಾಗೂ ಅವನ ಪತ್ನಿ ಆಟೊರಿಕ್ಷಾದಲ್ಲಿ ಮೃತದೇಹದೊಂದಿಗೆ ಇದ್ದಳು.ಅವನು ದೂರನ್ನು ನೀಡುವಾಗ, ಮೃತಳು ತನ್ನ ಪತ್ನಿಗೆ ಕರೆಮಾಡಿ ಅವರು ಮಧ್ಯಾಹ್ನದ ಊಟಕ್ಕೆ ಬರುತ್ತಿರುವುದಾಗಿ ತಿಳಿಸಿರುವುದನ್ನು ನಮೂದಿಸಿರಲಿಲ್ಲ.ಅವನು, 2 ನೇ ಆಪಾದಿತನು, 1 ನೇ ಆಪಾದಿತನಿಗೂ ಕೂಡ ಗಾಯಗಳಾಗಿದ್ದು ಅವನೂ ಕೂಡ ಸಾಯಬಹುದು ಎಂದು ಹೇಳಿದನೆಂಬುದನ್ನು ದೂರಿನಲ್ಲಿ ನಮೂದಿಸಿಲ್ಲ.ಅಷ್ಟೇ ಅಲ್ಲದೆ, ನಿಶಾನೆ ಪಿ .1 ರಲ್ಲಿ ಅವನು, ಮೋಟಾರು ಸೈಕಲ್ ಹಾಗೂ ಶಿರಸ್ತ್ರಾಣವು ಸ್ಥಳದಲ್ಲಿ ಬಿದ್ದಿದ್ದುದನ್ನು ಹಾಗೂ ಮೋಟಾರು ಸೈಕಲ್ಗೆ ಏನೂ ಹಾನಿ ಆಗದಿರುವುದನ್ನು ತಿಳಿಸಿರಲಿಲ್ಲ.

15. ಪಿ.ಡಬ್ಲ್ಯೂ .6 ರ ಸಾಕ್ಷ್ಯವು, ಪಿ.ಡಬ್ಲ್ಯೂ.ನೀಡಿದ ಸಾಕ್ಷ್ಯಕ್ಕೆ ಸದೃಶವಾಗಿದೆ.ಪಾಟೀ-ಸವಾಲಿನಲ್ಲಿ, ಮರಣ ಹೊಂದಿದ ದಿನಾಂಕದಂದು ಇದ್ದಂತೆ ಮೃತಳು ಆಕೆಯ ಮನೆಯಲ್ಲಿದ್ದಳೆಂದು ಹಾಗೂ ಅವಳು ಘಟನೆ ನಡೆದ 15 ದಿನಗಳಿಗೂ ಮೊದಲು ಅವಳ ಮನೆಗೆ ಹೋಗಿರುವುದನ್ನು ಹೊರಗೆಡಹಲಾಗಿದೆ.1 ನೇ ಆಪಾದಿತನು ಅವಳ ಸಹೋದರಿಯನ್ನು ವಿವಾಹವಾಗಲು ಆಸಕ್ತಿ ಹೊಂದಿದ್ದು, ಮಾತುಕತೆಯೂ ನಡೆದಿತ್ತು ಹಾಗೂ ಅವಳ ತಂದೆ-ತಾಯಿಗಳೂ, ಅವಳ ಪತಿಯನ್ನು ವಿಚಾರಿಸಿದ್ದುದನ್ನು ಸೂಚಿಸಲಾಗಿದ್ದು ಅದನ್ನು ಒಪ್ಪಿಕೊಳ್ಳಲಾಗಿದೆ.। ನೇ ಆಪಾದಿತನು ಬಂದು ಆಕೆಯ ಸಹೋದರಿಯನ್ನು ಮೋಟಾರು ಸೈಕಲ್ನಲ್ಲಿ ಕರೆದುಕೊಂಡು ಹೋಗಿಲ್ಲವೆಂದು ಸೂಚಿಸಿದ್ದು, ಅದನ್ನು ನಿರಾಕರಿಸಲಾಗಿತ್ತು.ಆದಾಗ್ಯೂ, ಅವಳು, ಅದಕ್ಕೆ ಸ್ವತಃ ತಾನು ಹಾಗೂ ತನ್ನ ಪತಿ ಸಾಕ್ಷಿದಾರರಾಗಿದ್ದು ಯಾರೊಬ್ಬರೂ ಇದನ್ನು ನೋಡಿರಲಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾಳೆ ಮಧ್ಯಾಹ್ನ ಸುಮಾರು 1.30 ರ ಸಮಯದಲ್ಲಿ ತನ್ನ ತಂಗಿ ಕರೆ ಮಾಡಿ ಮಧ್ಯಾಹ್ನದ ಊಟಕ್ಕೆ ಬರುತ್ತಿರುವುದಾಗಿ ಹೇಳಿದ್ದಳು ಎಂಬುದನ್ನು ಒಪ್ಪಿಕೊಂಡಿದ್ದಾಳೆ.ಅವಳು, 1 ನೇ ಆಪಾದಿತನನ್ನು ಹಾಗೂ ಅವಳ ಸಹೋದರಿಯನ್ನು ಸಂಪರ್ಕಿಸಲು ಪ್ರಯತ್ನಿಸಿದ್ದು, ' ಕರೆ ಮಾಡಿ ಎಂಬ ಸಂದೇಶ ಸಹ ಕಳುಹಿಸಿದ್ದರು.ಪಿ.ಡಬ್ಲ್ಯೂ .6, ಸಾಯಂಕಾಲ ಸುಮಾರು 4 ಗಂಟೆಯ ಹೊತ್ತಿಗೆ, 2 ನೇ ಆಪಾದಿತನು ಕರೆ ಮಾಡಿ ಇಬ್ಬರಿಗೂ ಅಪಘಾತವಾಗಿದೆಯೆಂದು ಹಾಗೂ 1 ನೇ ಆಪಾದಿತನನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಲಾಯಿತೆಂದು ತಿಳಿಸಿದನೆಂದು ಪುನರುಚ್ಚರಿಸಿದ್ದಾರೆ.ಮೃತಳ ದೇಹವನ್ನು 3 ನೇ ಆಪಾದಿತನಿಗೆ ಸೇರಿದ ಆಟೋರಿಕ್ಷಾದಲ್ಲಿ ಕೊಂಡೊಯ್ಯಲಾಯಿತೆಂದು ಹಾಗೂ 2 ನೇ ಆಪಾದಿತನು ತನ್ನ ಮೋಟಾರು ಸೈಕಲ್ನಲ್ಲಿ ಸದರಿ ಆಟೋವನ್ನು

ಹಿಂಬಾಲಿಸಿದ್ದ.ಪಿ.ಡಬ್ಲ್ಯೂ 6 ರ ಪಾಟೀ-ಸವಾಲಿನಲ್ಲಿ, ತನ್ನ ಪತಿಯು ತನ್ನ ಸಹೋದರಿಯೊಂದಿಗೆ ಸಂಬಂಧ ಹೊಂದಿದ್ದು, ಇದರ ಸಂಬಂಧದಲ್ಲಿ 19-07-2009ರಂದು ಮನೆಯಲ್ಲಿ ಅವರ ನಡುವೆ ಗಲಾಟೆ ನಡೆದಿತ್ತೆಂದು ಸೂಚಿಸಲಾಗಿದ್ದು, ಸದರಿ ಸೂಚನೆಯನ್ನು ನಿರಾಕರಿಸಲಾಗಿತ್ತು.

16. ಸಾಂದರ್ಭಿಕ ಸಾಕ್ಷಿದಾರರಾಗಿರುವ ಪಿ.ಡಬ್ಲ್ಯೂ 2 ರ ಸಾಕ್ಷ್ಯವನ್ನು ಈಗ ನೋಡೋಣ.ತನ್ನ ಸಾಕ್ಷ್ಯದಲ್ಲಿ, ಮಧ್ಯಾಹ್ನ ಸುಮಾರು 1.30 ರ ಸಮಯದಲ್ಲಿ ಸ್ವತಃ ತಾನು ಹಾಗೂ ಪಿ.ಡಬ್ಲ್ಯೂ ಇ 3 ಗದ್ದೆಯ ಬಳಿ ದನವನ್ನು ಮೇಯಿಸುತ್ತಿದ್ದಾಗ ` ಕಾಪಾಡಿ ಕಾಪಾಡಿ ' ಎಂದು ಕೂಗುತ್ತಿರುವ ಶಬ್ದವು ಕೇಳಿಬಂದಿತೆಂದು ಹೇಳಿದ್ದಾಳೆ.ಸದರಿ ಕೂಗಿಕೊಳ್ಳುವ ಶಬ್ದವನ್ನು ಕೇಳಿಸಿಕೊಂಡ ನಂತರ, ಅವರು ಸ್ವಲ್ಪ ಮುಂದಕ್ಕೆ ಹೋಗಿದ್ದಾರೆ.ಆಗ ಅಲ್ಲಿ ಯಾರೂ ಕಂಡಿಲ್ಲದ್ದರಿಂದ ಹಿಂದಕ್ಕೆ ಬಂದಿದ್ದಾರೆ.ಈ ಸಾಕ್ಷಿದಾರರನ್ನು ಪಬ್ಲಿಕ್ ಪ್ರಾಸಿಕ್ಯೂಟರ್ ಪ್ರತಿಕೂಲ ಸಾಕ್ಷ್ಯವೆಂದು ಪರಿಗಣಿಸಿದ್ದಾರೆ.ತನ್ನ ಪಾಟೀ-ಸವಾಲಿನಲ್ಲಿ ಅವಳು, ಸದರಿ ಕೂಗುಕೊಳ್ಳುವಿಕೆ ಶಬ್ದವು, ಬಾಳೆ ಹಾಗೂ ಅಡಿಕೆ ಗಿಡಗಳಿದ್ದ ನಾಗರಾಜ್ ಎಂಬುವವರ ತೋಟದ ಜಮೀನಿನಲ್ಲಿ ಕೇಳಿಬಂದಿತೆಂದು ಒಪ್ಪಿಕೊಂಡಿದ್ದಾಳೆ.ಅಲ್ಲದೆ ಕೂಗಿಕೊಂಡ ಶಬ್ದ ಕೇಳಿದ್ದನ್ನು ಪಬ್ಲಿಕ್ ಪ್ರಾಸಿಕ್ಯೂಟರ್ರವರ ಬಳಿಯೂ ಒಪ್ಪಿಕೊಂಡಿದ್ದಾಳೆ.

17. ಪಿ.ಡಬ್ಲ್ಯೂ ෆ3 ರ ಸಾಕ್ಷ್ಯವು ಕೂಡ, ಪಿ.ಡಬ್ಲ್ಯೂ ಇ 2 ರ ಸಾಕ್ಷ್ಯವನ್ನು ಹೋಲುತ್ತದೆ.ಸಾಯಂಕಾಲ ಸುಮಾರು 4 ಗಂಟೆ ಸಮಯದಲ್ಲಿ, ಅವಳು ಮೃತದೇಹವನ್ನು ನೋಡಿದ್ದು, ಘಟನಾ ಸ್ಥಳದಲ್ಲಿ ಆಪಾದಿತ ವ್ಯಕ್ತಿಗಳು ಕಂಡುಬಂದಿಲ್ಲ.ಆದರೆ, ಘಟನಾ ಸ್ಥಳದಲ್ಲಿ ನೆರೆದಿದ್ದ ಜನರಿಗೆ, ತಾನು ಕಿರುಚಿಕೊಳ್ಳುವ ಶಬ್ದವನ್ನು ಕೇಳಿಸಿಕೊಂಡೆನೆಂದು ಹೇಳಿದ್ದನ್ನು ಕ್ಲೇಮು ಮಾಡಿದ್ದಾಳೆ.ಈ ಸಾಕ್ಷಿದಾರರನ್ನು ಸಹ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಸರ್ಕಾರಿ ಅಭಿಯೋಜಕರು ಪಾಟೀ ಸವಾಲನ್ನು ನಡೆಸಿದಾಗ ಕೂಗಿಕೊಂಡ ಶಬ್ದವನ್ನು ಕೇಳಿಸಿಕೊಂಡ ಮೇಲೆ ಅವರು ಏನು ಮಾಡುತ್ತಿದ್ದರು ಎಂಬುದರ ಬಗೆಗಿನ ಸೂಚನೆಯನ್ನು ಅವಳು ನಿರಾಕರಿಸಿದ್ದಾಳೆ.

18. ಪಿ.ಡಬ್ಲ್ಯೂ 4 ಮತ್ತೊಬ್ಬರು ಸಾಕ್ಷಿದಾರರಾಗಿದ್ದಾರೆ.ತನ್ನ ಸಾಕ್ಷ್ಯದಲ್ಲಿ, ಯಾರೋ ಒಬ್ಬರು ಮೋಟಾರು ಸೈಕಲ್ನಲ್ಲಿ ಬಂದು, ಅಪಘಾತ ನಡೆದ ಬಗ್ಗೆ ವಿಚಾರಿಸಿದ್ದು, ಅವನು, ಯಾವುದೇ ಅಂಥ ಅಪಘಾತವಾಗಿರುವುದು ಗಮನಕ್ಕೆ ಬಂದಿಲ್ಲವೆಂದು ಉತ್ತರಿಸಿದ್ದಾನೆ.ಸದರಿ ವ್ಯಕ್ತಿಯು ಸ್ವಲ್ಪ ಮುಂದಕ್ಕೆ ಹೋಗಿ ಮೋಟಾರು ಸೈಕಲ್ನಿಂದ ಇಳಿದಿದ್ದಾನೆ.ಅವನನ್ನು ಆತ ಪ್ರಶ್ನಿಸಿದಾಗ, ಅವನು ನೀರು ತರಲು ಕೇಳಿದ್ದಾನೆ, ಹೀಗಾಗಿ, ತನ್ನ ಟವೆಲನ್ನು ಒದ್ದೆ ಮಾಡಿಕೊಂಡು ಸ್ವಲ್ಪ ನೀರನ್ನು ತಂದಿದ್ದು, ಬಿದ್ದಿದ್ದ ಹುಡುಗನ ಬಾಯಿಗೆ ನೀರನ್ನು ಹಾಕಿದ್ದು, ಮತ್ತೊಂದು ಹುಡುಗಿ ಬಿದ್ದಿರುವುದು ಕಂಡುಬಂತು.ಅವಳು ಬದುಕಿದ್ದಳಾ ಅಥವಾ ಗಾಯಗೊಂಡಿದ್ದಳಾ ಎಂಬ ಬಗ್ಗೆ ಅವನು ವಿಚಾರಿಸಿಲ್ಲ.ಆದರೆ, ಒಂದು ೧ ಆಟೋರಿಕ್ಷಾವು ಸ್ಥಳಕ್ಕೆ ಬಂದಿದ್ದು, ಹುಡುಗನನ್ನು ಆಟೋರಿಕ್ಷಾದಲ್ಲಿ ಆಸ್ಪತ್ರೆಗೆ ಕಳುಹಿಸಲಾಗಿತ್ತು ಹಾಗೂ ಅಪಘಾತದ ಬಗ್ಗೆ ಅವನನ್ನು ವಿಚಾರಿಸಿರುವ ವ್ಯಕ್ತಿಯು ಅಪಘಾತ ನಡೆದಿದೆಯೆಂದು ಹೇಳಿದ್ದಾನೆ.ಆದರೆ ಅವನಿಗೆ ಅವನ ಹೆಸರು ಗೊತ್ತಿರಲಿಲ್ಲ ಹಾಗೂ ಅವನು ಕೂಡ ತಾನು ಮೋಟಾರು ಸೈಕಲನ್ನು ನೋಡಿದುದಾಗಿ ಹೇಳಿದ್ದು, ಅದನ್ನು ಗುರುತಿಸಿದ್ದಾನೆ ಹಾಗೂ 1 ನೇ ಆಪಾದಿತನು ನೀರನ್ನು ಕುಡಿದಿದ್ದ ವ್ಯಕ್ತಿಯೆಂದು ಸಹ ಗುರುತಿಸಿದ್ದಾನೆ ಹಾಗೂ 2 ನೇ ಆಪಾದಿತನನ್ನು ಸಹ ಗುರುತಿಸಿದ್ದಾನೆ.ಅವನು, ಸ್ವತಃ ತಾನು ಹಾಗೂ 2 ನೇ ಆಪಾದಿತನೇ 1 ನೇ ಆಪಾದಿತನನ್ನು ಎತ್ತಿರುವುದನ್ನು ತಿಳಿಸಿದ್ದಾನೆ.ಅವನನ್ನು ಪ್ರತಿಕೂಲ ಸಾಕ್ಷ್ಯವೆಂದು ಪರಿಗಣಿಸಲಾಗಿದೆ.ಪಾಟೀ-ಸವಾಲಿನಲ್ಲಿ, 2 ನೇ ಆಪಾದಿತನು ಅಪಘಾತದ ಬಗ್ಗೆ

ವಿಚಾರಿಸಿರುವುದನ್ನು ಒಪ್ಪಿಕೊಂಡಿದ್ದಾನೆ.ಸದರಿ ಹುಡುಗಿಗೆ ನೀರನ್ನು ಕೊಡಲು ಅವನು ಕೂಡ ಪ್ರಯತ್ನಿಸಿದನೆಂದು ಅವಳ ಬಾಯಿಯಿಂದ ನೀರು ಹೊರಗೆ ಬಂತೆಂಬುದನ್ನು ಸೂಚಿಸಲಾಗಿದೆ.ಆದರೆ, ಅವನು, ತಾನು ಸದರಿ ಹುಡುಗಿಯ ಕಡೆಗೆ ಹೋಗಿಲ್ಲವೆಂದು ಕ್ಲೇಮು ಮಾಡಿದ್ದಾನೆ.ಆದಾಗ್ಯೂ, ಅವನು, 2 ನೇ ಆಪಾದಿತನು, ಅವಳು ಈಗಾಗಲೇ ಸತ್ತುಹೋಗಿರುವಳೆಂದು ಅವನಿಗೆ ಹೇಳಿದುದನ್ನು ಒಪ್ಪಿಕೊಂಡಿದ್ದಾನೆ.ಪಾಟೀಸವಾಲಿನಲ್ಲಿ ಅವನು, 2 ನೇ ಆಪಾದಿತನು, ಅಪಘಾತ ನಡೆದ ಸ್ಥಳವನ್ನು ಗುರುತಿಸಲು ಯಾವುದೇ ಸಹಾಯವನ್ನು ಕೋರಲಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾನೆ.ಸ್ಥಳದಲ್ಲಿ ಯಾರೊಬ್ಬರೂ ಇರಲಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾನೆ.1 ನೇ ಆಪಾದಿತನು ನಾಗರಾಜ್ರುವರ ಜಮೀನು ಸ್ಥಳದ ಬಳಿ ಇದ್ದನೆಂದು ಅವನು ತಿಳಿಸಿದ್ದಾನೆ.ಮೋಟಾರು ಸೈಕಲ್ಲು ಕರೆ ಏರಿಯಲ್ಲಿ ಬಿದ್ದಿತೆಂದು ಇದು ಬೇಲಿಯ ಬಳಿ ಇತ್ತೆಂದು ಒಪ್ಪಿಕೊಂಡಿದ್ದಾನೆ.ಜನರು ಸ್ಥಳದ ಬಳಿ ಬಂದಾಗ, ವ್ಯಕ್ತಿಯನ್ನು ವಿಚಾರಿಸಿದ ಬಗ್ಗೆ, ಸದರಿ ವ್ಯಕ್ತಿಯ ಸಹಾಯ ಕೇಳಿದ ಬಗ್ಗೆ ಹಾಗೂ ಆಟೋರಿಕ್ಷಾದಲ್ಲಿ ಅವನನ್ನು ಕಳಿಸಿದ ಬಗ್ಗೆ ತಿಳಿಸಿದ್ದಾನೆ.ಆದರೆ, ಅವನೇ ಆಸ್ಪತ್ರೆಗೆ ಇನ್ನೊಬ್ಬ ವ್ಯಕ್ತಿಯನ್ನು ಕೊಂಡೊಯ್ಯಲು ಆಟೋರಿಕ್ಷಾ ಚಾಲಕನಿಗೆ ಹೇಳಿದನೆಂದು ಅವನು ಕ್ಲೇಮು ಮಾಡಿದ್ದಾನೆ.ಪಿ.ಡಬ್ಲ್ಯೂ ಹಾಗೂ 1 ನೇ ಹಾಗೂ 3 ನೇ ಆಪಾದಿತರ ನಡುವೆ ರಾಜಕೀಯಕ್ಕೆ ಸಂಬಂಧಿಸಿದಂತೆ ಮನಃಸ್ತಾಪವಿತ್ತೆಂದು, ಹೀಗಾಗಿ, ಅವನು ನ್ಯಾಯಾಲಯದ ಮುಂದೆ ಸುಳ್ಳು ಹೇಳಿಕೆಯನ್ನು ನೀಡಿರುತ್ತಿರುವನೆಂದು ಸೂಚನೆ ನೀಡಲಾಗಿದ್ದು, ಸದರಿ ಸೂಚನೆಯನ್ನು ಅಲ್ಲಗಳೆಯಲಾಯಿತು.2 ನೇ ಆಪಾದಿತನು ವಿಚಾರಿಸಿದ್ದು, ತನ್ನ ಸಹಾಯವನ್ನು ಕೋರಿದ್ದನೆಂಬ ಸುಳ್ಳು ಹೇಳಿಕೆ ನೀಡಿರುವನೆಂದು ಸೂಚಿಸಲಾಗಿದ್ದು, ಸದರಿ ಸೂಚನೆಯನ್ನು ಅಲ್ಲಗಳೆಯಲಾಯಿತು.

19. ಪಿ.ಡಬ್ಲ್ಯೂ ಹಿಣಿ 5, ಸಾಕ್ಷ್ಯದಲ್ಲಿ, 1 ನೇ ಆಪಾದಿತನು ಅವಳ ಸಹೋದರನ ಮಗನಾಗಿದ್ದು, 3 ನೇ ಆಪಾದಿತನು ಕೂಡ ಅವಳ ಸಹೋದರನ ಮಗನಾಗಿದ್ದು, ಇಬ್ಬರೂ ಕೃಷಿಕರಾಗಿದ್ದಾರೆಂದು ಹೇಳಿದ್ದಾಳೆ.ಅವರ ಬಳಿ ಆಟೋರಿಕ್ಷಾ ಇತ್ತು. ಇವಳು ಪ್ರಾಸಿಕ್ಯೂಷನ್ನ ವಾದವನ್ನು ಸಮರ್ಥಿಸಿರಲಿಲ್ಲ ಹಾಗೂ ಅವಳು ಪ್ರತಿಕೂಲ ಸಾಕ್ಷ್ಯವಾಗಿ ಪರಿಣಮಿಸಿದ್ದಾಳೆ.ಪಾಟೀ-ಸವಾಲಿನಲ್ಲಿ 1 ನೇ ಆಪಾದಿತನು ವಿದ್ಯಾಭ್ಯಾಸಕ್ಕಾಗಿ ತನ್ನ ಮನೆಗೆ ಬಂದು ನೆಲೆಸಿದ್ದನೆಂದು ಒಪ್ಪಿಕೊಂಡಿದ್ದಾಳೆ ಹಾಗೂ ಅವಳು, ಅವನ ಹಾಗೂ ಮೃತಳ ನಡುವೆ ನಿಶ್ಚಿತಾರ್ಥ ನಡೆದಿರುವ ಬಗ್ಗೆ ತನಗೆ ಗೊತ್ತಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾಳೆ.೧

20. ಪಿ.ಡಬ್ಲ್ಯೂ 7 ಮೃತಳ ತಾಯಿಯಾಗಿರುತ್ತಾಳೆ.ಅವಳ ಸಾಕ್ಷ್ಯದಲ್ಲಿ, ತನ್ನ ಮಗಳು ಹಾಗೂ 1 ನೇ ಆಪಾದಿತನ ನಡುವೆ ನಿಶ್ಚಿತಾರ್ಥ ನಡೆದಿದ್ದು, ಘಟನೆ ನಡೆಯುವುದಕ್ಕೂ 15 ದಿನಗಳಿಗೂ ಮೊದಲು ಅವಳು ಪಿ.ಡಬ್ಲ್ಯೂ .1 ರ ಮನೆಯಲ್ಲಿದ್ದುದಾಗಿ ತಿಳಿಸಿದ್ದಾಳೆ.ನಂತರ, 1 ನೇ ಆಪಾದಿತನು ಮೋಟಾರು ಸೈಕಲ್ನಲ್ಲಿ ಅವಳ ಮಗಳನ್ನು ಕರೆದೊಯ್ದುದಾಗಿ ಅವಳಿಗೆ ತಿಳಿದುಬಂದಿದೆ.ಪಾಟೀ-ಸವಾಲಿನಲ್ಲಿ, ಮೃತಳು, ಘಟನೆ ನಡೆಯುವುದಕ್ಕೆ ಹದಿನೈದು ದಿನಗಳಿಗೂ ಮೊದಲು ಪಿ.ಡಬ್ಲ್ಯೂ ೧ ಹಾಗೂ ಪಿ.ಡಬ್ಲ್ಯೂ .6 ರ ಮನೆಗೆ ಹೋಗಿದ್ದಳೆಂಬುದನ್ನು ಹೊರಗೆಡಹಿದ್ದಾಳೆ.ಅವಳ ಮಗಳು, ತನ್ನ ಅಳಿಯನೊಂದಿಗೆ ತುಂಬಾ ಆಪ್ತಳಾಗಿದ್ದಳು, ಹೀಗಾಗಿ, ಅವನು ನಿಶ್ಚಿತಾರ್ಥವನ್ನು ಮುರಿಯುವ ಉದ್ದೇಶವನ್ನು ಹೊಂದಿದ್ದುದರಿಂದ ತನ್ನೊಂದಿಗೆ ಇರಲು ಅವನು ಹೇಳಿದನು ಎಂಬ ಸೂಚನೆಯನ್ನು ನೀಡಿದ್ದು, ಸದರಿ ಸೂಚನೆಯನ್ನು ಅಲ್ಲಗಳೆಯಲಾಯಿತು.ಮುಂದುವರಿದು, ಘಟನೆ ನಡೆದ ದಿನಾಂಕದಂದು, ಅವಳ ಅಳಿಯ ಹಾಗೂ ಇಬ್ಬರೂ ಹೆಣ್ಣು ಮಕ್ಕಳ ನಡುವೆ ಗಲಾಟೆ ನಡೆದಿದ್ದು, ಸದರಿ ಘಟನೆಯಲ್ಲಿ ಮೃತಳಿಗೆ ಗಾಯಗಳಾಗಿದ್ದವು ಎಂಬ ಸೂಚನೆ ನೀಡಲಾಗಿದ್ದು, ಇದನ್ನು ನಿರಾಕರಿಸಲಾಗಿದೆ.ಅನುಕ್ರಮವಾಗಿ ಪಿ.ಡಬ್ಲ್ಯೂ 8, 9 ಹಾಗೂ 10 ರಂಗನಾಥಪುರ, ಗರುಡನಹಳ್ಳಿ ಹಾಗೂ

ಬೆಂಗಳೂರಿನ ವಿಜಯನಗರದ ಇ ನಿವಾಸಿಗಳಾಗಿದ್ದಾರೆ.ಅವರು ಪ್ರಾಸಿಕ್ಯೂಷನ್ನ ವಾದವನ್ನು ಸಮರ್ಥಿಸಿಲ್ಲ.ಪಿ.ಡಬ್ಲ್ಯೂ ಶ 11 ಪಂಚನಾಮೆ ಮಹಜರಿನ ಸಾಕ್ಷಿದಾರರಾಗಿದ್ದು, ತಾನು ಮೃತದೇಹದಲ್ಲಿ ಗಾಯಗಳನ್ನು ನೋಡಿದ್ದು, ನಿಶಾನೆ ಪಿ .11 ರಲ್ಲಿ ಮಹಜರನ್ನು ಬರೆಯಲಾಗಿತ್ತೆಂದು ತಿಳಿಸಿದ್ದಾರೆ.ಪೊಲೀಸರು, ನಿಶಾನೆ ಪಿ .12 ರ ಪ್ರಕಾರ ಮೋಟಾರು ಸೈಕಲ್ಲನ್ನು ವಶಪಡಿಸಿಕೊಂಡಿದ್ದಾರೆ.ಅವನನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲಾಗಿತ್ತು.ಪಾಟೀ-ಸವಾಲಿನಲ್ಲಿ ಅವನು, ಸಿಡಬ್ಲ್ಯೂ -16, ಪಿ.ಡಬ್ಲ್ಯೂ -7 ರ ಚಿಕ್ಕಪ್ಪನ ಮಗನಾಗಿರುವನೆಂಬುದನ್ನು ಒಪ್ಪಿಕೊಂಡಿದ್ದಾನೆ.ಇವನಿಗೆ ಮೃತಳು ಸಾವನ್ನಪ್ಪಿರುವುದು ತಿಳಿದುಬಂದಿದ್ದು, ಪಿ.ಡಬ್ಲ್ಯೂ.ಇವನ ಸಂಬಂಧಿಯಾಗಿದ್ದಾರೆ.ಪಿ.ಡಬ್ಲ್ಯೂ -12 ಸಹ ಮೋಟಾರು ಸೈಕಲನ್ನು ವಶಪಡಿಸಿಕೊಳ್ಳುವ ಸಂಬಂಧದಲ್ಲಿ ಪ್ರಾಸಿಕ್ಯೂಷನ್ನ ವಾದವನ್ನು ಬೆಂಬಲಿಸಿಲ್ಲ.ಆದರೆ, ಅವನು, ಪೊಲೀಸರು ಬಂದು ಮೋಟಾರು ಸೈಕಲನ್ನು ಕೊಂಡೊಯ್ದಿದ್ದು, ಕೆ.ಆರ್.ಪೇಟೆ ನ್ಯಾಯಾಲಯದಿಂದ ಅವನು ಬಿಡಿಸಿಕೊಂಡಿರುವುದನ್ನು ಕ್ಲೇಮು ಮಾಡಿದ್ದಾನೆ.ಪಿ.ಡಬ್ಲ್ಯೂ -13 ವದಂತಿ ಸಾಕ್ಷಿದಾರರಾಗಿದ್ದು, ಪಿ.ಡಬ್ಲ್ಯೂ -1 ಹಾಗೂ 6 ರ ಸಾಕ್ಷ್ಯದ ಸಾಲಿನಲ್ಲಿ ಸಾಕ್ಷ್ಯವನ್ನು ನೀಡಿರುವನು.ತನ್ನ ಸಾಕ್ಷ್ಯದಲ್ಲಿ, ಅವನು ಸಹ 2 ಹಾಗೂ 3 ನೇ ಆಪಾದಿತರು, ಮೃತ ದೇಹವನ್ನು ಕೊಂಡೊಯ್ದರೆಂಬುದು ತಿಳಿದುಬಂತೆಂದು ಹಾಗೂ 1 ನೇ ಆಪಾದಿತನಿಗೂ ಕೂಡ ಗಾಯಗಳಾಗಿದ್ದುದನ್ನು ಹೇಳಿದ್ದಾನೆ.ಇದರಿಂದ ಅವನನ್ನು ಹಾಸನ ಆಸ್ಪತ್ರೆಗೆ ಕೊಂಡೊಯ್ಯಲಾಗಿತ್ತು ಹಾಗೂ ಸ್ಥಳದಲ್ಲಿದ್ದ ಜನರು ಇದನ್ನೇ ತಿಳಿಸಿದ್ದಾರೆ.ಪಾಟೀ-ಸವಾಲಿನಲ್ಲಿ, ಅವನು ಸ್ಥಳಕ್ಕೆ ಹೋದಾಗ, ಮೃತದೇಹವು ಇರಲಿಲ್ಲವೆಂದು ಹಾಗೂ ಸ್ಥಳದಲ್ಲಿ ಸೇರಿದ್ದ ಜನರನ್ನು ವಿಚಾರಿಸಿದೆನಷ್ಟೆ ಎಂಬುದನ್ನು ಒಪ್ಪಿಕೊಂಡಿದ್ದಾನೆ.ಅವರು ಪೊಲೀಸರಿಗೆ ದೂರನ್ನು ದಾಖಲಿಸಲು ಹೋದಾಗ, ಮೃತದೇಹವು ತನ್ನ ಸಹೋದರನ ಮನೆಯ ಬಳಿಯಿತ್ತು.ಅವನು ಹತ್ತಿರದಲ್ಲಿದ್ದ ಸ್ಥಳದಲ್ಲಿ ವಿಚಾರಿಸಿದಾಗ ಜನರು, ಅಪಘಾತ ನಡೆದಿದೆಯೆಂದು ತಿಳಿಸಿದರೆಂಬುದನ್ನು ಹೊರಗೆಡಹಿದ್ದಾನೆ.ಮೃತದೇಹಕ್ಕೆ ಸ್ನಾನ ಮಾಡಿಸುವಾಗ, ಅವನು ಕತ್ತಿನ ಬಳಿಯಿದ್ದ ಗಾಯಗಳನ್ನು ಹಾಗೂ ಕಾಲಿನಲ್ಲಾಗಿದ್ದ ಸುಟ್ಟಗಾಯಗಳನ್ನೂ ಸಹ ಗಮನಿಸಿದ್ದಾನೆ.ಅದನ್ನು ಅವನು ಪೊಲೀಸರಿಗೆ ಹೇಳಿದ್ದಾನೆ.

21. ಪಿ.ಡಬ್ಲ್ಯೂ -14, ಮೃತಳ ತಂದೆ-ತಾಯಿಗಳ ಮನೆಯ ಬಳಿ ದೇಹವನ್ನು ತಂದಿರುವ ಬಗ್ಗೆ ಹೇಳಿದ್ದಾನೆ.ಪಾಟೀ-ಸವಾಲಿನಲ್ಲಿ, ಮೃತಳು, ಮರಣಹೊಂದುವ ಸುಮಾರು ಎರಡು, ಮೂರು ದಿನಗಳಿಗೂ ಮೊದಲು, ಅವಳ ಸಹೋದರಿಯ ಮನೆಗೆ ಹೋಗಿದ್ದಳೆಂದು ಹೊರಗೆಡಹಿದ್ದಾನೆ.ಅವಳು ಹೇಗೆ ಮೃತಳಾದಳು ಹಾಗೂ ಮೃತದೇಹವನ್ನು ಆಟೋರಿಕ್ಷಾದಲ್ಲಿ ತಂದರು ಎಂಬುದು ಇವನಿಗೆ ತಿಳಿದಿರುವುದಿಲ್ಲ.

22. ಪಿ.ಡಬ್ಲ್ಯೂ -15, ನಿಶಾನೆ ಪಿ .6 ಕ್ಕೆ ಸಂಬಂಧಿಸಿದ ಮಹಜರು ಸಾಕ್ಷಿದಾರ.ಪಾಟೀ-ಸವಾಲಿನಲ್ಲಿ, ತಾನು, ಸ್ಥಳಕ್ಕೆ ಹೋದಾಗ, ಆಗಲೇ 50 ರಿಂದ 60 ಜನರು ಅಲ್ಲಿ ಸೇರಿದ್ದರು ಹಾಗೂ ಪೊಲೀಸರು ಮಹಜರನ್ನು ಬರೆಯುತ್ತಿದ್ದರು.ತನ್ನನ್ನು ಹೊರತುಪಡಿಸಿದರೆ, ಯಾರು ನಿಶಾನೆ ಪಿ .6 ರಲ್ಲಿ ಸಹಿ ಮಾಡಿರುವರು ಎಂಬುದನ್ನು ಅವನು ಹೇಳಲು ಸಾಧ್ಯವಾಗಿಲ್ಲ.

23. ಪಿ.ಡಬ್ಲ್ಯೂ -16 ಈತನು, 1 ನೇ ಆಪಾದಿತನ ಗ್ರಾಮದ ನಿವಾಸಿಯಾಗಿದ್ದಾನೆ.ಇವನು ಪ್ರಾಸಿಕ್ಯೂಷನ್ ವಾದವನ್ನು ಸಮರ್ಥಿಸಿಲ್ಲ.ಹಾಗೆಯೇ, ಪಿ.ಡಬ್ಲ್ಯೂ -17 ಮತ್ತು ಪಿ.ಡಬ್ಲ್ಯೂ -18 ಕಲ್ಲನ್ನು ವಶಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಮಹಜರು ಸಾಕ್ಷಿದಾರರಾಗಿದ್ದಾರೆ ಹಾಗೂ 1 ನೇ ಆಪಾದಿತನು ಪೊದೆಯಿಂದ ಅದನ್ನು ಹಾಜರುಪಡಿಸಿದ್ದಾನೆ.ಇವರು ನಿಶಾನೆ-ಪಿ .21 ನ್ನು ದೃಢೀಕರಿಸಿರುವ

ಸಾಕ್ಷಿದಾರ.ಪಾಟೀಸವಾಲಿನಲ್ಲಿ, ಇವನು, ಸ್ಥಳಕ್ಕೆ ಹೋದಾಗ, ಪೊಲೀಸರು ಹಾಗೂ 1 ನೇ ಆಪಾದಿತ ಮಾತ್ರ ಅಲ್ಲಿದ್ದರೆಂಬುದನ್ನು ಒಪ್ಪಿಕೊಂಡಿದ್ದಾನೆ.ಸದರಿ ತೋಟದ ಜಮೀನು, ಕರೀಗೌಡನ ಮಗನಾದ ನಾಗರಾಜ್ಗೆ ಸೇರಿದೆಯೆಂದು ತಿಳಿದು ಬಂದಿದ್ದು, ಅವನು ಸ್ಥಳದಲ್ಲಿ ಇದ್ದನೇ ಅಥವಾ ಇಲ್ಲವೇ ಎಂಬುದು ತಿಳಿದು ಬಂದಿರಲಿಲ್ಲ.ಪೊಲೀಸರು ಮಹರಿನ ಒಳಾಂಶಗಳನ್ನು ಓದಿ ಅವನ ಸಹಿಯನ್ನು ತೆಗೆದುಕೊಂಡಿದ್ದಾರೆ.ಅವನಿಗೆ ಹಾಗೂ ಆಪಾದಿತನ ನಡುವೆ ಯಾವುದೇ ಮಾತುಕತೆ ನಡೆದಿಲ್ಲ.

24. ಪಿ.ಡಬ್ಲ್ಯೂ -19 ಪ್ರಾಸಿಕ್ಯೂಷನ್ನ ವಾದವನ್ನು ಸಮರ್ಥಿಸಿಲ್ಲ.ಅವನ ಸಮ್ಮುಖದಲ್ಲಿ, ಮೋಟಾರು ಸೈಕಲನ್ನು ಸ್ವಾಧೀನಕ್ಕೆ ತೆಗೆದುಕೊಂಡಿರಲಿಲ್ಲವೆಂದು ಅವನು ಕ್ಲೇಮು ಮಾಡಿದ್ದಾನೆ.ಆದಾಗ್ಯೂ, ನಿಶಾನೆ ಪಿ .12 ರಲ್ಲಿ, ಅವನು, ತನ್ನ ಸಹಿಯನ್ನು ಗುರುತಿಸಿದ್ದಾನೆ.ಪಾಟೀ-ಸವಾಲಿನಲ್ಲಿ, ಅವನ ಸಮ್ಮುಖದಲ್ಲಿ ಮೋಟಾರು ಸೈಕಲನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಾಯಿತು ಎಂದು ಸೂಚನೆಯನ್ನು ನೀಡಿದ್ದು, ಅವನು ಅದನ್ನು ನಿರಾಕರಿಸಿದ್ದಾನೆ.ಪಿ.ಡಬ್ಲ್ಯೂ -20, ನಿಶಾನೆ ಪಿ .12 ಕ್ಕೆ ಮಹಜರು ಸಾಕ್ಷಿದಾರ.ಇವನು ಪ್ರಾಸಿಕ್ಯೂಷನ್ ವಾದವನ್ನು ಸಮರ್ಥಿಸಿದ್ದಾನೆ. ಪಾಟೀ-ಸವಾಲಿನಲ್ಲಿ, ಅವನು, ತನ್ನ ಗ್ರಾಮ ಹಾಗೂ ಮಹಜರು ನಡೆದ ಸ್ಥಳದ ಅಂತರ 15 ಕಿ.ಮೀ. ಗಳಾಗಿವೆಯೆಂದು ಒಪ್ಪಿಕೊಂಡಿದ್ದಾನೆ.ಅವನನ್ನು ಕೆ.ಆರ್. ಪೇಟೆಯಿಂದ ಸದರಿ ಸ್ಥಳಕ್ಕೆ ಕರೆದೊಯ್ದಿದ್ದು, ಮೋಟಾರು ಸೈಕಲ್ಲನ್ನು ಮನೆಯ ಮುಂಭಾಗದಲ್ಲಿ ನಿಲ್ಲಿಸಲಾಗಿತ್ತೆಂದು ಕ್ಲೇಮು ಮಾಡಿದ್ದಾನೆ.ಪಿ.ಡಬ್ಲ್ಯೂ -21 ಶಿರಸ್ತ್ರಾಣವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದ ಮಹಜರು ಸಾಕ್ಷಿದಾರ.ಅವನು, 1 ನೇ ಆಪಾದಿತನು ಅದನ್ನು ಹಾಜರುಪಡಿಸಿದನೆಂದು ಕ್ಲೇಮು ಮಾಡಿದ್ದಾನೆ.ಪಾಟೀ-ಸವಾಲಿನಲ್ಲಿ, ಪೊಲೀಸರು, ಇವನನ್ನು ಮಾಯಣ್ಣನ ಕೊಪ್ಪಲಿನಿಂದ ಕರೆದೊಯ್ದರೆಂದು ಹಾಗೂ ಅವನು, ಸದರಿ ಮನೆಯಲ್ಲಿ ಯಾರು ವಾಸಮಾಡುತ್ತಿದ್ದಾರೆಯೆಂಬುದನ್ನು ಹೇಳಲು ಸಾಧ್ಯವಾಗಿಲ್ಲ.ಆದರೆ, ಅಲ್ಲಿ ಕೆಲವು ವ್ಯಕ್ತಿಗಳಿದ್ದರೆಂಬುದನ್ನು ಕ್ಲೇಮು ಮಾಡಿದ್ದಾರೆ.ಸದರಿ ಶಿರಸ್ತ್ರಾಣವು ಆ ಮನೆಯಲ್ಲಿತ್ತು.ಅವನು ಪೊಲೀಸು ಠಾಣೆಯಲ್ಲಿ ನಿಶಾನೆ ಪಿ .23 ಕ್ಕೆ ಸಹಿ ಮಾಡಿರುವುದನ್ನು ಸೂಚಿಸಿದ್ದು, ಅದನ್ನು ನಿರಾಕರಿಸಲಾಗಿತ್ತು.2 ನೇ ಆಪಾದಿತನು ಅಲ್ಲಿರಲಿಲ್ಲವೆಂದು ಹಾಗೂ ಶಿರಸ್ತ್ರಾಣವನ್ನು ಹಾಜರುಪಡಿಸಿಲ್ಲವೆಂಬುದನ್ನು ತಿಳಿಸಿದ್ದಾನೆ.ಅವನು, ತನ್ನ ಸಮ್ಮುಖದಲ್ಲಿ ನಿಶಾನೆ ಪಿ .23 ನ್ನು ಬರೆದಿಲ್ಲವೆಂಬುದನ್ನು ನಿರಾಕರಿಸಿದ್ದಾನೆ.

25. ಪಿ.ಡಬ್ಲ್ಯೂ -22, ನಿಶಾನೆ ಪಿ .15 ರಲ್ಲಿ ಆಟೋರಿಕ್ಷಾವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದ ಮಹಜರು ಸಾಕ್ಷಿದಾರ.ಅವನು ತನ್ನ ಸಹಿಯನ್ನು ಗುರುತಿಸಿದ್ದಾನೆ.ಪಾಟೀ-ಸವಾಲಿನಲ್ಲಿ, ಅವನು ತನ್ನ ಗ್ರಾಮ ಹಾಗೂ ಕೆ.ಆರ್.ಪೇಟೆ ನಡುವಿನ ಅಂತರ 30 ಕಿ.ಮೀ.ಗಳಾಗಿವೆಯೆಂದು ಒಪ್ಪಿಕೊಂಡಿದ್ದಾನೆ.ಅವನನ್ನು ಮಾಯಣ್ಣನ ಕೊಪ್ಪಲಿನಿಂದ ಕೆ.ಆರ್. ಪೇಟೆಗೆ ಕರೆದೊಯ್ಯಲಾಗಿತ್ತು.ಅವನು, ಪೊಲೀಸು ಠಾಣೆಗೆ ಹೋಗುವ ಮೊದಲು ಆಟೋರಿಕ್ಷಾವನ್ನು ಪೊಲೀಸು ಠಾಣೆಗೆ ತೆಗೆದುಕೊಂಡು ಹೋಗಿದ್ದು, ಇದನ್ನು ಯಾರು ತಂದರೆಂಬುದು ಗೊತ್ತಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾನೆ.

26. ಪಿ.ಡಬ್ಲ್ಯೂ 23, ತನ್ನ ಸಹಿಯನ್ನು ಪೊಲೀಸು ಠಾಣೆಯಲ್ಲಿ ಅ ತೆಗೆದುಕೊಂಡರೆಂಬುದನ್ನು ಕ್ಲೇಮು ಮಾಡಿದ್ದಾನೆ.ಅವನು ಪ್ರತಿಕೂಲ ಸಾಕ್ಷ್ಯವಾಗಿ ಪರಿಣಮಿಸಿದ್ದಾನೆ.ಅವನ ಪಾಟೀ-ಸವಾಲಿನಲ್ಲಿ, ಏನನ್ನೂ ಹೊರಗೆಡಹಿಲ್ಲ.ಪಿ.ಡಬ್ಲ್ಯೂ -24 ಕೂಡ ಪ್ರಾಸಿಕ್ಯೂಷನ್ನ ವಾದವನ್ನು ಬೆಂಬಲಿಸಿಲ್ಲ.ಅವನು ತಾನು ಪೊಲೀಸು ಠಾಣೆಗೆ ಹೋದಾಗ ಪೊಲೀಸರು ತನ್ನ ಸಹಿಯನ್ನು ತೆಗೆದುಕೊಂಡರೆಂದು ಕ್ಲೇಮು ಮಾಡಿದ್ದಾನೆ.ಅವನನ್ನು ಪಾಟೀ-ಸವಾಲಿಗೆ ಒಳಪಡಿಸಿದ್ದರೂ ಕೂಡ, ಏನನ್ನೂ ಹೊರಗೆಡಹಿರುವುದಿಲ್ಲ.ನಿಶಾನೆ ಪಿ .24 ಕ್ಕೆ ಸ ಂ ಬ ಂ

ಧಿಸಿದ ೦ ತೆ, 2 ನ ಆಪಾದಿತನಿಂದ ಮೊಬೈಲನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಾಯಿತೆಂದು ಸೂಚನೆ ನೀಡಿದ್ದು, ಅದನ್ನು ನಿರಾಕರಿಸಲಾಯಿತು.

27. ಪಿ.ಡಬ್ಲ್ಯೂ -25, ನಿಶಾನೆ ಪಿ .25 ರಲ್ಲಿರುವ ಸ್ಕೂಲನಕ್ಷೆಯನ್ನು ಸಿದ್ದಪಡಿಸಿರುವ ಲೋಕೋಪಯೋಗಿ ಇಲಾಖೆಯ ಸಹಾಯ ಎಂಜಿನಿಯರ್ ಆಗಿದ್ದಾರೆ.ಇವರನ್ನು ಪಾಟೀ-ಸವಾಲಿಗೆ ಒಳಪಡಿಸಿಲ್ಲ.ಪಿ.ಡಬ್ಲ್ಯೂ -26 ವಿಧಿವಿಜ್ಞಾನ ಪ್ರಯೋಗಾಲಯದ ಸಹಾಯಕ ನಿರ್ದೇಶಕರು ವಿಚಾರಣೆಯನ್ನು ನಡೆಸಿದ ನಂತರ, ಅವರು 1, 3 ರಿಂದ 8 ರವರೆಗಿನ ಮುದ್ದೆ ಮಾಲುಗಳಲ್ಲಿ ರಕ್ತದ ಕಲೆಗಳಿದ್ದು, ಅವು " ಓ ' ಗುಂಪಿಗೆ ಸಂಬಂಧಿಸಿದೆಯೆಂಬ ಅಭಿಪ್ರಾಯವನ್ನು ನೀಡಿದ್ದಾರೆ.ಇವರನ್ನು ಕೂಡ ಪಾಟೀ ಸವಾಲಿಗೆ ಒಳಪಡಿಸಿರಲಿಲ್ಲ.ಪಿ.ಡಬ್ಲ್ಯೂ -27 ಮೃತದೇಹದ ಪರೀಕ್ಷೆ ನಡೆಸಿರುವ ವೈದ್ಯರಾಗಿದ್ದು, 10 ಗಾಯಗಳಿರುವುದನ್ನು ಸೂಚಿಸಿದ್ದು, ಅವು ಮರಣ ಪೂರ್ವದ್ದಾಗಿವೆ ಎಂದು ಹೇಳಿದ್ದಾರೆ.ಇವರ ಪ್ರಕಾರ ಕುತ್ತಿಗೆಯ ದಾರದ ಒತ್ತಡದಿಂದ ಉಸಿರುಗಟ್ಟಿದ ಹಾಗೂ ತಲೆಗೆ ಆದ ಗಾಯದಿಂದ ಕೋಮಾಗೆ ಹೋದ ಸಂಯೋಜಿತ ಪರಿಣಾಮದ ಕಾರಣದಿಂದ ಮರಣ ಸಂಭವಿಸಿದೆ.ಅಷ್ಟೇ ಅಲ್ಲದೆ ಅವನು, 5 ಹಾಗೂ 6 ನೇ ಗಾಯವನ್ನು ಮರಣೋತ್ತರ ವರದಿಯಲ್ಲಿ ತಿಳಿಸಿದ್ದು, ಯಾವುದೋ ಗಟ್ಟಿವಸ್ತುವಿನಿಂದ ನೇರವಾದ ಬಲಪ್ರಯೋಗದ ಕಾರಣದಿಂದಾಗಿರಬಹುದೆಂದು ತಿಳಿಸಿದ್ದಾರೆ.ಕುತ್ತಿಗೆಯ ಮೇಲಿನ ಒತ್ತಡವು ಅಥವಾ ತಲೆಯ ಗಾಯವು ಮೊದಲೇ ಆಗಿತ್ತೇ ಎಂಬುದನ್ನು ಅವರು ಹೇಳಲು ಸಾಧ್ಯವಾಗಿಲ್ಲ.ಮುಂದುವರಿದು, ಅವರು, ತರಚಿದ ಸ್ವರೂಪದಲ್ಲಿರುವ 7 ಹಾಗೂ 8 ನೇ ಗಾಯವು ಗಟ್ಟಿಯಾದ ಮೇಲ್ಮೆಗೆ ವಿರುದ್ಧವಾಗಿ ಚರ್ಮವು ಸಮಾನಾಂತರವಾಗಿ ಚಲಿಸಿದ ಕಾರಣದಿಂದಾಗಿರಬಹುದೆಂದು ತಿಳಿಸಿದ್ದಾರೆ.ಪಾಟೀ ಸವಾಲಿನಲ್ಲಿ, ಅವರು, ಅವಳ ಶವ ಪರೀಕ್ಷೆಮಾಡಿದಾಗ, ಹೊಟ್ಟೆಯು ಖಾಲಿಯಿತ್ತೆಂಬುದನ್ನು ಹೊರಗೆಡಹಿದ್ದಾರೆ.ಅವರು, ಸಣ್ಣ ಕರುಳು ಹಾಗೂ ದೊಡ್ಡ ಕರುಳಿನಲ್ಲಿ ಆಹಾರವು ಅರೆದ್ರವರೂಪದಲ್ಲಿತ್ತೆಂದು ನಿಶಾನೆ ಪಿ .28 ರಲ್ಲಿ ತೋರಿಸಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾರೆ.ಮೃತಳು ಲೈಂಗಿಕ ಸಂಭೋಗದಂತಹ ಕಾರ್ಯವನ್ನು ಮಾಡಿರುವ ಸಾಧ್ಯತೆಯಿರುತ್ತದೆಯೆಂದು ಹೇಳಿದ್ದಾರೆ.ಎಲ್ಲಾ ನೇಣು ಹತ್ಯೆಯಲ್ಲಿ ಹೈಯಾಡ್ ಹಾಗೂ ಥೈರಾಯಿಡ್ ಮೃದ್ವಸ್ಥಿಯು ಯಾವಾಗಲೂ ಕತ್ತರಿಸಿಹೋಗಬೇಕು ಎಂಬುದು ಅಗತ್ಯವಾಗಿರುವುದಿಲ್ಲ.ಮೃತದೇಹವನ್ನು, ಮುಳ್ಳಿರುವ ಸ್ಥಳ ಅಥವ ವಸ್ತುವಿನ ಮೇಲೆ ಮೇಲಿನಿಂದ ಕೆಳಕ್ಕೆ ಉರುಳಿಸಿದರೆ, ಅಗತ್ಯವಾಗಿ, ದೇಹದಲ್ಲಿ ಅನೇಕ ತರಚಿದ ಗಾಯಗಳಿರುತ್ತವೆ.ಆದರೆ, ಮೃತ ದೇಹದ ಮೇಲೆ ಅಂಥ ನಿರ್ದಿಷ್ಟ ತರಚಿದ ಗಾಯಗಳು ಕಂಡುಬಂದಿಲ್ಲ.ಕೈಯಿಂದ ಕುತ್ತಿಗೆಯನ್ನು ಹಿಸುಕಿದ್ದರೆ, ಬೆರಳಿನ ಅಥವಾ ಕೈನ ಗುರುತುಗಳು ಅಥವಾ ಉಗುರಿನ ಗುರುತುಗಳಾದರೂ ಕುತ್ತಿಗೆಯಲ್ಲಿ ಕಂಡುಬರುತ್ತವೆ.ಕುತ್ತಿಗೆಯ ವಿಛೇದನದಲ್ಲಿ ಸಹ ಕೈಯಿಂದ ಉಸಿರುಗಟ್ಟಿಸುವ ಗುರುತುಗಳನ್ನು ಕಾಣಬಹುದಾಗಿರುತ್ತದೆ.

28. ಪಿ.ಡಬ್ಲ್ಯೂ -28, ಎಸ್ಎಸ್ಎಮ್ ಆಸ್ಪತ್ರೆಯಲ್ಲಿ 1 ನೇ ಆಪಾದಿತನಿಗೆ ಚಿಕಿತ್ಸೆ ನೀಡಿರುವ ವೈದ್ಯರಾಗಿದ್ದಾರೆ.ಅವರು, 1 ನೇ ಆಪಾದಿತನು,ದಿನಾಂಕ: 19-07-2009ರಂದು ರಾತ್ರಿ 7.30 ರಲ್ಲಿ ಸ್ವಯಂ ತಾನೇ ಆಸ್ಪತ್ರೆಗೆ ಬಂದಿರುತ್ತಾನೆ ಹಾಗೂ ಅವನಲ್ಲಿ ಯಾವುದೇ ಗಾಯ ಕಂಡುಬಂದಿಲ್ಲ.ಅವನು ಸ್ನಾಯುಗಳಲ್ಲಿ ನೋವಿತ್ತೆಂದು ಹಾಗೂ ಎರಡು ದಿನಗಳವರೆಗೆ ಆಸ್ಪತ್ರೆಯಲ್ಲಿದ್ದೆನೆಂದು ಅವರು, ಕ್ಲೇಮು ಮಾಡಿದ್ದಾರೆ.ಅವರು ಪೊಲೀಸರ ಕೋರಿಕೆಯಂತೆ ಗಾಯ ಪ್ರಮಾಣಪತ್ರವನ್ನು ನೀಡಿದ್ದರು.ಇದನ್ನು ನಿಶಾನೆ-ಪಿ .31 ಎಂದು ಗುರುತು ಮಾಡಲಾಗಿದೆ.ಪಾಟೀ ಸವಾಲಿನಲ್ಲಿ, ಅದು ಖಾಸಗಿ ಆಸ್ಪತ್ರೆಯಾಗಿದೆಯೆಂದು ಹೇಳಲಾಗಿದೆ.ಅವನನ್ನು ಆಸ್ಪತ್ರೆಗೆ ಸೇರಿಸಿಕೊಳ್ಳುವ ಸಂಬಂಧದಲ್ಲಿ ದಾಖಲೆಗಳನ್ನು ಅವರು ಇಟ್ಟುಕೊಂಡಿದ್ದು, ಅವು ಆಸ್ಪತ್ರೆಯ ಕಚೇರಿಯಲ್ಲಿ ಲಭ್ಯವಿದ್ದವು.ಪೊಲೀಸರು ತನ್ನ ಯಾವುದೇ ಹೇಳಿಕೆಯನ್ನು ದಾಖಲಿಸಿರಲಿಲ್ಲವೆಂಬುದನ್ನು ಅವರು

ಒಪ್ಪಿಕೊಂಡಿದ್ದಾರೆ.ಪೊಲೀಸರ ಕೋರಿಕೆಯಂತೆ ನಿಶಾನೆ ಪಿ .31 ನ್ನು ನೀಡಲಾಗಿದ್ದು, ಇದನ್ನು ಸೃಜಿಸಲಾಗಿದೆಯೆಂದು ಸೂಚನೆ ನೀಡಲಾಗಿದ್ದು ಇದನ್ನು ತಿರಸ್ಕರಿಸಲಾಗಿದೆ.

29. ಪಿ.ಡಬ್ಲ್ಯೂ -29 ಪೊಲೀಸ್ ಉಪ ನಿರೀಕ್ಷಕರು ನಿಶಾನೆ-ಪಿ .1 ದೂರನ್ನು ದಾಖಲಿಸಿದ್ದು, ನಿಶಾನೆ-ಪಿ .32 ರ ಸಂಬಂಧ ಪ್ರಥಮ ಮಾಹಿತಿ ವರದಿಯನ್ನು ಕಳುಹಿಸಿದ್ದರು.ಅವರು ಪಂಚನಾಮೆಯನ್ನು ನಡೆಸಿದ್ದಾರೆ.ಅವರು, ತಲೆಯ ಹಿಂಭಾಗದಲ್ಲಿ ಕುತ್ತಿಗೆಯಲ್ಲಿ ಗಾಯಗಳನ್ನು, ಎಡತೋಳಿನ ಮೇಲೆ ಕಚ್ಚಿದ ಗಾಯಗಳು ಹಾಗೂ ತೊಡೆಯ ಮೇಲೆ ಎಡಗೈ, ಮುಂದೋಳು ಹಾಗೂ ಬಲ ಮಂಡಿಯ ಮೇಲೆ ಸೀಳಿದ ಗಾಯ ಆಗಿರುವುದನ್ನು ಕಂಡಿದ್ದಾರೆ.ಬಾಯಿಯಿಂದ ರಕ್ತ ಒಸರುತ್ತಿತ್ತು.ಅವರೂ ಕೂಡ, ಸಂಬಂಧಿ ಸಾಕ್ಷಿದಾರರ ಹೇಳಿಕೆಯನ್ನು ಕೂಡ ದಾಖಲಿಸಿರುವುದಾಗಿ ತಿಳಿಸಿದ್ದಾರೆ.ಅವರನ್ನು ಪಾಟೀ-ಸವಾಲಿಗೆ ಒಳಪಡಿಸಲಾಗಿತ್ತು.ಅವರು ದೂರುದಾರನ ನಂತರದ ಹೇಳಿಕೆಯನ್ನು ದಾಖಲಿಸಿಲ್ಲ ಎಂಬುದನ್ನು ಒಪ್ಪಿಕೊಂಡಿದ್ದಾರೆ ಹಾಗೂ ನಿಶಾನೆ ಪಿ .1 ದೂರಿನಲ್ಲಾದ ವಿಳಂಬವನ್ನು ವಿವರಿಸಲಾಗಿದೆ.ಅವರು, ಯಾವ ಸಮಯದಲ್ಲಿ ಮೃತದೇಹವನ್ನು ಶವಗಾರದಲ್ಲಿ ಇಡಲಾಗಿತ್ತು ಎಂಬುದನ್ನು ವಿಚಾರಿಸಿಲ್ಲ ಎಂಬುದನ್ನು ಒಪ್ಪಿಕೊಂಡಿದ್ದಾರೆ.ಅವರು ನಿಶಾನೆ-ಪಿ .1 ನ್ನು ಸ್ವೀಕರಿಸುವ ಮೊದಲು ಮರಣದ ಬಗ್ಗೆ ತಿಳಿದುಕೊಂಡಿದ್ದಾರೆ ಹಾಗೂ ಹಿಂದಿನ ದಿನದಂದು ಸಾಯಂಕಾಲ 5.30 ಕ್ಕೆ ಅಪಘಾತವಾಗಿದೆಯೆಂದು ದೂರವಾಣಿ ಮೂಲಕ ಮಾಹಿತಿ ಸ್ವೀಕರಿಸಿದ್ದಾರೆ.ಅವರು ಸ್ಥಳದಲ್ಲಿ ಯಾರೇ ವ್ಯಕ್ತಿಗಳು ಇದ್ದುದನ್ನು ಗಮನಿಸಿಲ್ಲ.

30. ಪಿ.ಡ ಬ -30 ಹೆಚ್ಚಿನ ತನಿಖೆಯನ್ನು ನಡೆಸಿರುವ ತನಿಖಾಧಿಕಾರಿಯಾಗಿದ್ದಾರೆ.ಅವರು ಸ್ಥಳಕ್ಕೆ ಹೋಗಿ ಸಾಕ್ಷಿದಾರರ ಮುಂದಿನ ಹೇಳಿಕೆಯನ್ನು ದಾಖಲಿಸಿರುವುದನ್ನು, ಮಹಜರನ್ನು ಬರೆದಿರುವುದು ಹಾಗೂ ಮೋಟಾರು ಬೈಕನ್ನು ಹಾಗೂ ಶಿರಸ್ತ್ರಾಣವನ್ನು ವಶಕ್ಕೆ ತೆಗೆದುಕೊಂಡಿರುವುದನ್ನು ಕೇಮು ಮಾಡಿದ್ದಾರೆ.ಅವರು ಸ್ಥಳ ಮಹಜರು ಮಾಡಿ ಆಪಾದಿತನನ್ನು ದಸ್ತಗಿರಿ ಮಾಡಿ, ಆಪಾದಿತ ಹಾಗೂ ಇತರ ಸಾಕ್ಷಿದಾರರ ಸ್ವಯಂ ಹೇಳಿಕೆಗಳನ್ನು ದಾಖಲಿಸಿ, ಸ್ಥಳಕ್ಕೆ ಹೋಗಿ ಆಪಾದಿತನ ಸೂಚನೆಯಂತೆ ಕಲ್ಲನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಾಗಿದೆ.ತನ್ನ ಮುಂದುವರಿದ ಸಾಕ್ಷ್ಯದಲ್ಲಿ ಅವರು, ಆಟೋರಿಕ್ಷಾವನ್ನು ಸಹ ವಶಕ್ಕೆ ತೆಗೆದುಕೊಳ್ಳಲಾಗಿದ್ದು, 3 ನೇ ಆಪಾದಿತನು ಅವರ ಮುಂದೆ ತಾನೇ ಖುದ್ದು ಶರಣಾಗಿದ್ದಾನೆಂದು ತಿಳಿಸಿದ್ದಾರೆ.ಆತನು ಮೃತದೇಹವನ್ನು ತನ್ನ ಆಟೋರಿಕ್ಷಾದಲ್ಲಿ ಸ್ಥಳಾಂತರಿಸಿದೆನೆಂದು ತಿಳಿಸಿದ್ದನ್ನು ಸಹ ಹೇಳಿದ್ದಾರೆ.ನಿಶಾನೆ-ಪಿ .58 ಎಂದು ಗುರುತುಹಾಕಿರುವ 1 ನೇ ಆಪಾದಿತನ ಮೊಬೈಲ್ ಕರೆಗಳ ವರದಿಗಳನ್ನು ಅವರು ಪಡೆದುಕೊಂಡಿದ್ದಾರೆ.ಅಷ್ಟೇ ಅಲ್ಲದೆ ಅವರು, 1 ನೇ ಆಪಾದಿತನು ಬಳಸಿದ್ದ ಸದರಿ ಮೊಬೈಲನ್ನು 2 ನೇ ಆಪಾದಿತನು ಹಾಜರುಪಡಿಸಿದನೆಂದು ಹೇಳಿದ್ದಾರೆ.ಮುಂದುವರಿದು, 1 ನೇ ಆಪಾದಿತನು, ತನ್ನ ಸ್ವಯಂ ಹೇಳಿಕೆಯಲ್ಲಿ, ತಾನು ನಾಗರತ ಎ ಂ ಬುವಳನ್ನು ಪ್ರೀತಿಸುತ್ತಿದ್ದೆನೆ ಂ ದು, ದಿನಾ ಂ ಕ:19-04-2009ರಂದು ಸೋದರ ಮಾವ ಯೋಗೇಶ್ನ ಸೂಚನೆಯ ಮೇರೆಗೆ ಬಲವಂತವಾಗಿ ಚೈತ್ರಾಳೊಂದಿಗೆ ನಿಶ್ಚಿತಾರ್ಥ ಮಾಡಿದ್ದರೆಂದು ಹೇಳಿದ್ದುದಾಗಿ ಪಿ.ಡಬ್ಲ್ಯೂ -30 ತಿಳಿಸಿದ್ದಾರೆ.ಮೃತಳು ತನ್ನ ಭಾವ ಸುರೇಶನೊಂದಿಗೆ ಸಂಬಂಧ ಹೊಂದಿದ್ದಳೆಂದು ಇದಕ್ಕೆ ಕೆಲವು ಜನರು ಸಾಕ್ಷಿಯಾಗಿದ್ದರೆಂದು ಕ್ಲೇಮು ಮಾಡಿದ್ದಾನೆ.ಅವನೂ ಕೂಡ ಇದಕ್ಕೆ ಸಾಕ್ಷಿಯಾಗಿದ್ದನೆಂದು ಹಾಗೂ ತಾನು ಅವಳನ್ನು ಅನುಮಾನಿಸಿದ್ದೆನೆಂದು ಕ್ಲೇಮು ಮಾಡಿದ್ದಾನೆ.ನಿಶ್ಚಿತಾರ್ಥದ ನಂತರವೂ ಕೂಡ, ತನ್ನೊಂದಿಗೆ ಇದ್ದಾಗ, ಸೋದರ ಮಾವನ ಭಯವಿದ್ದುದರಿಂದ ಗಮನಕ್ಕೆ ತಂದಿರಲಿಲ್ಲವೆಂದು ತಿಳಿಸಿದ್ದಾನೆ.ಅವಳು ತನ್ನ ಸಹೋದರಿಯ ಮೊಬೈಲ್ನಿಂದ ಫೋನ್ ಕರೆಗಳನ್ನು ಮಾಡುತ್ತಿದ್ದಳು.ಹಿಂದಿನ ದಿನವೂ ಕೂಡ, ಅವಳು ಮಿಸ್ ಕಾಲ್ ಮಾಡಿದ್ದು, ಇದಾದ ನಂತರ ಅವಳಿಗೆ

ಫೋನನ್ನು ಮಾಡಿದ್ದಾನೆ.ಅವಳು, 2 ನೇ ಆಪಾದಿತ-ಸಹೋದರನ ಮೋಟಾರು ಸೈಕಲ್ಲನ್ನು ತೆಗೆದುಕೊಂಡು, ಸಹೋದರಿಯಿದ್ದ ಸ್ಥಳಕ್ಕೆ ಕ ಹೋಗುವುದಕ್ಕೆ ಅವನಿಗೆ ಕರೆ ಮಾಡಿದ್ದು, ಪಿ.ಡಬ್ಲ್ಯೂ -1 ರ ಮನೆಗೆ ಹೋಗಿದ್ದು, ಮೃತಳು ಚುಂಚನಗಿರಿಗೆ ಹೋಗಲು ಅವನಿಗೆ ಹೇಳಿದ್ದಾಳೆ.ಆದರೆ, ಅವನು ಶ್ರವಣಬೆಳಗೊಳಕ್ಕೆ ಹೋಗುವ ಯೋಜನೆ ಹಾಕಿದ್ದಾನೆ.ಅವನು 2 ನೇ ಆಪಾದಿತನಿಗೆ ಕಾಲ್ ಮಾಡಿದ್ದು, ಅವನಿಗೆ, ಅಪಘಾತವಾಗಿದೆಯೆಂದು ಹಾಗೂ ಚೈತ್ರಾ ಸಾವನ್ನಪಿದ್ದಾಳೆಂದು ತಿಳಿಸಿದ್ದಾನೆ.45 ನಿಮಿಷಗಳ ನಂತರ ಅವನು ಸ್ಥಳಕ್ಕೆ ಧಾವಿಸಿದ್ದಾನೆ.ಅವನು ಪ್ರಜ್ಞೆ ಕಳೆದುಕೊಂಡಿದ್ದನೆಂಬಂತೆ ನಟಿಸಿ, ತದನಂತರ, ಅವನನ್ನು ಆಸ್ಪತ್ರೆಗೆ ಕಳುಹಿಸಿದ್ದನು.ಅವನನ್ನು ಪೊಲೀಸರು ಬಂಧಿಸಿದರು.ಅವನನ್ನು ಪಾಟೀ-ಸವಾಲಿಗೊಳಪಡಿಸಿದ್ದು, ಪಿ.ಡಬ್ಲ್ಯೂ -15 ರ ಜಮೀನಲ್ಲಿ ಎಂದರೆ, ಸರ್ವೆ ನಂ .311/ 1 ರ ಜಮೀನಿನಲ್ಲಿ ಅಪಘಾತ ನಡೆದಿಲ್ಲವೆಂಬ ಅಂಶವನ್ನು ಹೊರಗೆಡಹಿದ್ದಾನೆ.ನಿಶಾನೆ ಪಿ .25 ರಲ್ಲಿ ಸೂಚಿಸಲಾಗಿರುವ ಅಪಘಾತದ ಸ್ಥಳವನ್ನು ಗುರುತು ಮಾಡಿರುವುದಿಲ್ಲ.1 ನೇ ಆಪಾದಿತನು ಚಿಕಿತ್ಸೆ ಪಡೆಯುತ್ತಿದ್ದ ಆಸ್ಪತ್ರೆಗೂ ಕೂಡ ಅವರು ಭೇಟಿ ನೀಡಿರಲಿಲ್ಲ.ಅವನು ಶ್ರವಣಬೆಳಗೊಳ ಆಸ್ಪತ್ರೆಗೆ ಭೇಟಿ ನೀಡಿರಲಿಲ್ಲ.ಹಾಗೆಯೇ ಪಿ.ಡಬ್ಲ್ಯೂ -1 ರ ಹೆಚ್ಚಿನ ಹೇಳಿಕೆಯನ್ನು ದಾಖಲಿಸಿರಲಿಲ್ಲ.ನಿಶಾನೆ ಪಿ .58 ನ್ನು ದೃಢೀಕರಿಸಿರಲಿಲ್ಲ-ವೆಂಬುದನ್ನು ಅವನು ಒಪ್ಪಿಕೊಂಡಿದ್ದಾನೆ.ಇದಕ್ಕೆ ಯಾವುದೇ ದೃಢೀಕರಣ ಬೇಕಾಗುವುದಿಲ್ಲ ಎಂಬುದಕ್ಕೆ ಯಾವುದೇ ಹಿಂಬರಹ ಇಲ್ಲ. ಇದನ್ನು ಪೊಲೀಸ್ ಅಧೀಕ್ಷಕರ ಸೂಚನೆಯ ಮೇರೆಗೆ ಸ್ವೀಕರಿಸಲಾಗಿದೆಯೆಂದು ಕ್ಲೇಮು ಮಾಡಿರುತ್ತಾರೆ.ಪೊಲೀಸ್ ಅಧೀಕ್ಷಕರಿಂದ ಇದನ್ನು ಸ್ವೀಕರಿಸಲಾಗಿತ್ತೆಂದು ಇದನ್ನು ಸಾಕ್ಷೀಕರಿಸುವ ದಸ್ತಾವೇಜುಗಳನ್ನು ಅವರು ಹಾಜರುಪಡಿಸಿಲ್ಲ.ಮುಂದುವರಿದು ಇವರು, ಪಿ.ಡಬ್ಲ್ಯೂ -1 ರ ಹಾಗೂ ಪಿ.ಡಬ್ಲ್ಯೂ ೧೧ -6 ರ ಮೊಬೈಲನ್ನು ವಶಕ್ಕೆ ತೆಗೆದುಕೊಂಡಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾರೆ.ಇವರು ಪಿ.ಡಬ್ಲ್ಯೂ -1 ರ ಹಾಗೂ 6 ನೇ ಆಪಾದಿತನ ಫೋನ್ ಕರೆಗಳ ವಿವರಗಳನ್ನು ಸಂಗ್ರಹಿಸಿಲ್ಲ.

31. ಪಿ.ಡಬ್ಲ್ಯೂ -1 ರಿಂದ 30 ರವರೆಗಿನ ಪ್ರಾಸಿಕ್ಯೂಷನ್ ಸಾಕ್ಷಿದಾರರ ಸಾಕ್ಷ್ಯವನ್ನು ಪರಿಗಣಿಸಿ, ಹಾಗೆಯೇ, ನಿಶಾನೆ-ಪಿ .1 ರಿಂದ ನಿಶಾನೆ ಪಿ -72 ಹಾಗೂ ಪ್ರಾಸಿಕ್ಯೂಷನ್ ಪರವಾಗಿ ಗುರುತುಮಾಡಲಾಗಿರುವ ಮುದ್ದೆ ಮಾಲುಗಳನ್ನು ಪರಿಗಣಿಸಿ ಈ ನ್ಯಾಯಾಲಯವು, ಕೊಲೆ ಮಾಡುವಲ್ಲಿ ಆಪಾದಿತನಿಗೆ ಇದು ಸಂಬಂಧಿಸುತ್ತದೆಯೇ ಎಂಬ ಬಗ್ಗೆ ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯಾಧಾರವನ್ನು ವಿಶ್ಲೇಷಿಸಬೇಕಾಗುತ್ತದೆ.

32. ದಾಖಲೆಯಲ್ಲಿರುವ ಇತರ ಸಾಕ್ಷ್ಯಾಧಾರವನ್ನು ಪರಿಶೀಲಿಸುವ ಮೊದಲು ಮೃತದೇಹದ ಪರೀಕ್ಷೆ ನಡೆಸಿರುವ ಪಿ.ಡಬ್ಲ್ಯೂ -27 ರ ಸಾಕ್ಷ್ಯವನ್ನು ಮೊದಲಿಗೆ ಪರಿಗಣಿಸಬಯಸುತ್ತೇನೆ.ತನ್ನ ಸಾಕ್ಷ್ಯದಲ್ಲಿ, ಅವರು, ಹತ್ತು ಬಾಹ್ಯ ಗಾಯಗಳು ಕಂಡುಬಂದಿದ್ದು ಅವುಗಳನ್ನು ನಿರೂಪಿಸಿದ್ದಾರೆ.ಹಾಗೆಯೇ ದೇಹವನ್ನು ಕೊಯ್ದಿರುವ ಬಗ್ಗೆ, 1, 2 ಹಾಗೂ 3 ನೇ ಸಂಖ್ಯೆಯ ಗಾಯಕ್ಕೆ ಸಮಾನವಾಗಿ ಹಿಂದಲೆ ಪ್ರದೇಶದ ಎಡಭಾಗದಲ್ಲಿ 3 x 2 ಸೆಂಟಿ ಮೀಟರ್ ಅಳತೆಯಲ್ಲಿ ಇಳಿದ ಮೂಳೆಮುರಿತವನ್ನು ತಲೆಬುರುಡೆ ತೋರಿಸುತ್ತದೆ ಹಾಗೂ ಇಳಿತಾದ ಹಾಗೂ ಮೆದುಳು ಉಪ ನಡುಪೊರೆ ಒಳಗೊಂಡಿರುವ ಮೆದುಳು ಹರಿದಿರುತ್ತದೆ.ಪಿ.ಡಬ್ಲ್ಯೂ -27 ರ ಪ್ರಕಾರ ಕತ್ತಿನ ಮೇಲಾದ ಬಂಧಕ ರಜ್ಜಿನ ಒತ್ತಡದ ಪರಿಣಾಮದಿಂದ ಉಸಿರುಗಟ್ಟುವುದು ಹಾಗೂ ತಲೆ ಗಾಯದಿಂದಾದ ಪರಿಣಾಮ ಅರೆಪ್ರಜ್ಞಾವಸ್ಥೆಯ (ಕೋಮಾ) ಸಂಯೋಜಿತ ಕಾರಣದಿಂದ ಸಾವು ಸಂಭವಿಸಿದೆ ಎಂಬುದಾಗಿದೆ.ನಿಶಾನೆ ಪಿ -28 ಮರಣೋತ್ತರ ಪರೀಕ್ಷಾ ವರದಿಯನ್ನು ಅವಗಾಹಿಸಿದ ಮೇಲೆ, ಉಸಿರುಗಟ್ಟಿದ ಸಂಯೋಜಿತ ಪರಿಣಾಮದಿಂದ ಸಾವು ಸಂಭವಿಸಿದೆ ಎಂಬುದು ಸ್ಪಷ್ಟವಾಗುತ್ತದೆ ಹಾಗೂ ಯಾವುದೇ ಗಟ್ಟಿಯಾದ ವಸ್ತುವಿನಿಂದ ನೆಟ್ಟಗೆ ಬಲಪ್ರಯೋಗ ಮಾಡಿದ್ದರಿಂದ 5 ಮತ್ತು 6 ನೇ ಸಂಖ್ಯೆಯ ಗಾಯಗಳು ಆಗಿರಬಹುದೆಂಬುದು ವೈದ್ಯರ

ಸಾಕ್ಷ್ಯವಾಗಿದೆ.5 ರಿಂದ 8 ರವರೆಗಿನ ಗಾಯಗಳು, ವ್ಯಕ್ತಿಗೆ ಆಗಿರುವ ಸಾಧ್ಯತೆಯಿರುತ್ತದೆ.ಮೃತದೇಹವನ್ನು ಗಟ್ಟಿಯಾದ ಮೇ ಪ್ರದೇಶದಿಂದ ಉರುಳಿಸಿದರೆ ಆಗ ಆಗುವಂತಹ ಗಾಯಗಳಾಗಿರಬಹುದಂತಿವೆ.ಪಾಟೀ-ಸವಾಲಿನಲ್ಲಿ, ಎಲ್ಲಾ ನೇಣುಹತ್ಯೆಯಲ್ಲಿ ಜಿಹ್ವಾಸ್ಥಿ ಹಾಗೂ ಧ್ವನಿಪೆಟ್ಟಿಗೆ ಮೆದುಮೂಳೆ ಯಾವಾಗಲೂ ಮುರಿದಿರುತ್ತದೆಯೆಂದು ಭಾವಿಸುವ ಅಗತ್ಯವಿಲ್ಲವೆಂಬ ಅಂಶವನ್ನು ಹೊರಗೆಡಹಿದ್ದಾರೆ.ಹಾಗೂ 5 ರಿಂದ 8 ರವರೆಗಿನ ಗಾಯಗಳು ಇಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳ ನಡುವೆ ಹೊಡೆದಾಟದ ಕಾರಣದಿಂದ ಆಗಿರಬಹುದಾಗಿದೆ.ಉಸಿರುಗಟ್ಟಿಸಿರುವುದಕ್ಕೆ ಸಂಬಂಧಪಡುವಲ್ಲಿ, ಬೆರಳು ಅಥವಾ ಹಸ್ತ ಅಥವಾ ಉಗುರಿನ ಗುರುತುಗಳೂ ಸಹ ಕುತ್ತಿಗೆಯಲ್ಲಿ ಕಂಡುಬರಬಹುದು ಎಂಬುದನ್ನು ಬಹಿರಂಗಪಡಿಸಿದ್ದಾರೆ.ಪಾಟೀ-ಸವಾಲಿನಲ್ಲಿನ, ಆಪಾದಿತನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಮೃತರಿಗೆ ಆದ ಗಾಯಗಳು ಎಂದರೆ 1 ರಿಂದ 10 ರವರೆಗೆ ಆಗಿರುವ ಗಾಯಗಳ ವಿಷಯದಲ್ಲಿ ಯಾವುದೇ ವಿವಾದವನ್ನು ಮಾಡಿರುವುದಿಲ್ಲ.ಹಾಗೆಯೇ, ಹಿಂದಲೆಯ ಪ್ರದೇಶದ ಎಡಭಾಗದಲ್ಲಿ ಅಂದರೆ 1 ರಿಂದ 3 ರವರೆಗಿನ ಸದೃಶ ಗಾಯಗಳಿರುವಲ್ಲಿ ಇಳಿತಾದ ಮುರಿತವಾಗಿರುವ ಸಂಗತಿಯಲ್ಲಿ ಯಾವುದೇ ವಿವಾದವಿಲ್ಲ.

33. ಕುತ್ತಿಗೆಯ ಮೇಲಿನ ಬಂಧಕ ರಜ್ಜುನ ಒತ್ತಡದ ಪರಿಣಾಮ ಉಸಿರುಗಟ್ಟಿ, ತಲೆಗೆ ಆದ ಗಾಯದ ಪರಿಣಾಮವಾಗಿ ಉಂಟಾದ ಕೋಮಾದ ಸಂಯೋಜಿತ ಪರಿಣಾಮದ ಕಾರಣದಿಂದ ಸಾವು ಸಂಭವಿಸಿದೆಯೆಂಬುದು ವೈದ್ಯರ ನಿರ್ದಿಷ್ಟ ಸಾಕ್ಷ್ಯವಾಗಿದೆ.ಪಿ.ಡಬ್ಲ್ಯೂ-27-ವೈದ್ಯರ ಪಾಟೀಸವಾಲಿನಲ್ಲಿ, ಈ ರೀತಿಯ ಗಾಯಗಳು ಅಪಘಾತದ ಕಾರಣದಿಂದಾಗಿರಬಹುದೆಂದು ಎಲ್ಲಿಯೂ ಸೂಚಿಸಿಲ್ಲ.ಪಾಟೀ ಸವಾಲಿನಲ್ಲಿ, ಪ್ರತಿವಾದವನ್ನು ಸಹ ನಿರ್ದಿಷ್ಟಪಡಿಸಿಲ್ಲ ಹಾಗೂ ಇದನ್ನು ಸಂಪೂರ್ಣವಾಗಿ ನಿರಾಕರಿಸಲಾಗಿದೆ.ಅಂಥ ಸನ್ನಿವೇಶಗಳಿದ್ದಾಗ, ಪಿ.ಡಬ್ಲ್ಯೂ 27 ರ ಸಾಕ್ಷ್ಯವು, ಕುತ್ತಿಗೆಯ ಮೇಲಿನ ಬಂಧಕ ರಜ್ಜುನ ಒತ್ತಡದ ಪರಿಣಾಮದಿಂದ ಉಸಿರುಗಟ್ಟಿ ಸಾವು ಸಂಭವಿಸಿದೆಯೆಂಬುದನ್ನು ಸ್ಪಷ್ಟಪಡಿಸುತ್ತದೆ.ಹೀಗಾಗಿ, ಇದು ಉಸಿರುಗಟ್ಟಿ ಹಾಗೆಯೇ ತಲೆಗೆ ಆಗಿರುವ ಗಾಯಗಳ ಕಾರಣದಿಂದ ಸಾವು ಸಂಭವಿಸಿದೆಯೆಂಬುದು ಸ್ಪಷ್ಟವಾಗುತ್ತದೆ.

34. ಪಿಡಬ್ಲ್ಯೂ -7 ರ ಪಾಟೀಸವಾಲಿನಲ್ಲಿ, ಆಪಾದಿತರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಪತಿ ಹಾಗೂ ಪತ್ನಿ ಎಂದರೆ ಪಿಡಬ್ಲ್ಯೂ -1 ಹಾಗೂ ಪಿ.ಡಬ್ಲ್ಯೂ -6 ರ ನಡುವೆ ಹಾಗೂ ಮೃತಳ ನಡುವೆ ಗಲಾಟೆಯ ನಡೆದಿತ್ತೆಂದು, ಆ ಗಲಾಟೆಯಲ್ಲಿ ಮೃತಳಿಗೆ ಗಾಯಗಳಾಗಿದ್ದವೆಂದು ಸೂಚಿಸಲಾಗಿದ್ದು ಈ ಸೂಚನೆಯನ್ನು ಪಿಡಬ್ಲ್ಯೂ -6 ನಿರಾಕರಿಸಿರುತ್ತಾನೆ.ಪಿಡಬ್ಲ್ಯೂ -1 ಹಾಗೂ ಮೃತರ ನಡುವೆ ನಿಕಟ ಸಂಪರ್ಕವಿತ್ತೆಂದು, ಇದು ಪಿಡಬ್ಲ್ಯೂ -6 ಎಂದರೆ ಪಿಡಬ್ಲ್ಯೂ -1 ರ ಪತ್ನಿಯ ಗಮನಕ್ಕೆ ಬಂದಿತ್ತು.ಇದರಿಂದಾಗಿ ಆಕೆಯು ಆತ್ಮಹತ್ಯೆ ಮಾಡಿಕೊಂಡಿರುವಳು ಎಂಬಂತೆ ಸೂಚಿಸಲು ಪ್ರಯತ್ನ ಮಾಡಲಾಗಿದೆ.

35. ಒಂದು ಕಡೆ, ಪಿ.ಡಬ್ಲ್ಯೂ -1 ಹಾಗೂ 6 ರ ನಡುವೆ ಕಿತ್ತಾಟ ನಡೆದಾಗ ಆಕಸ್ಮಿಕ ಗಾಯವಾಗಿದೆಯೆಂದು ಸೂಚಿಸಲಾಗಿದ್ದು, ಮತ್ತೊಂದು ಕಡೆ, ಅವಳು ಆತ್ಮಹತ್ಯೆ ಮಾಡಿಕೊಂಡಿರುವಳೆಂಬ ಸೂಚನೆ ನೀಡಿದ್ದು, ಇದನ್ನು ಪುಷ್ಟೀಕರಿಸಲು ದಾಖಲೆಯಲ್ಲಿ ಏನೂ ಇರುವುದಿಲ್ಲ.ಹೀಗಾಗಿ, ಇದು ನರಹತ್ಯೆಯ ಸ್ಪಷ್ಟ ಪ್ರಕರಣವಾಗಿದೆ ಹಾಗೂ ಮರಣವು, ಅಪಘಾತದಿಂದಾದ ಗಾಯಗಳ ಕಾರಣದಿಂದಾಗಿರುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

36. ಇತರ ಸಾಕ್ಷಿದಾರರ ಸಾಕ್ಷ್ಯವನ್ನು ಪರಿಗಣಿಸುವ ಮೊದಲು, ನಾವು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಅವಲಂಬಿಸಬಯಸುತ್ತೇವೆ.ಹಿಮಾಚಲ ಪ್ರದೇಶ ರಾಜ್ಯ ವಿರುದ್ಧ-ರಾಜ್ ಕುಮಾರ್ (2018) 1 ಎಸ್ಸಿ (ಕ್ರಿ) 452 ಮೊಕದ್ದಮೆಯಲ್ಲಿನ ಇತ್ತೀಚಿನ ತೀರ್ಪುಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಸಾಂದರ್ಭಿಕ ಚ ಸಾಕ್ಷ್ಯದ ಸಂದರ್ಭದಲ್ಲಿ ಯಾವ ಸನ್ನಿವೇಶಗಳಿಂದ ಅಪರಾಧದ ಸುಳಿವನ್ನು ರೂಪಿಸಲು ಕೋರಲಾಗುತ್ತದೆಯೋ ಆ ಸನ್ನಿವೇಶಗಳ ಸಾಕ್ಷ್ಯದ ಮೊಕದ್ದಮೆಯಲ್ಲಿ ಸಮರ್ಪಕವಾಗಿ ಹಾಗೂ ದೃಢವಾಗಿ ಸಾಬೀತುಪಡಿಸಬೇಕಾಗುತ್ತದೆಯೆಂಬ ತತ್ವಗಳನ್ನು ಸಂಕ್ಷಿಪ್ತಗೊಳಿಸಿದೆ.ಆಪಾದಿತನ ಅಪರಾಧಕ್ಕೆ ಸಂಬಂಧಿಸಿದಂತೆ ನೇರವಾಗಿ ಗುರುತಿಸುವ ಸ್ವರೂಪದಲ್ಲಿ ಆ ಸನ್ನಿವೇಶಗಳನ್ನು ನಿರ್ಧರಿಸಬೇಕು, ಅಷ್ಟೇ ಅಲ್ಲದೆ, ಸಂಚಿತವಾಗಿ ತೆಗೆದುಕೊಂಡ ಎಲ್ಲಾ ಸನ್ನಿವೇಶಗಳನ್ನು ಸಂಪೂರ್ಣ ಸರಪಳಿಯಂತೆ ರೂಪಿಸಬೇಕು ಹಾಗೂ ಸಾಕ್ಷ್ಯದ ಸರಪಳಿಯಲ್ಲಿ ಎಲ್ಲಿಯೂ ಖಾಲಿ ಸ್ಥಾನ ಇರಬಾರದು, ಆಪಾದಿತನ ಅಪರಾಧದ ಊಹೆಗಳು ಪರಸ್ಪರ ಹೊಂದಿಕೊಳ್ಳಬೇಕು ಹಾಗೂ ಒಟ್ಟಾರೆಯಾಗಿ, ಅವನ ಮುಗ್ಧತೆಯೊಟ್ಟಿಗೆ ಹೊಂದಾಣಿಕೆಯಾಗದಂತಿರಬೇಕು.ಸಾಕ್ಷಿದಾರರ ಸಾಕ್ಷ್ಯವನ್ನು ವಿವೇಚಿಸುವಾಗ, ದೃಷ್ಟಿಕೋನ ಹೇಗಿರಬೇಕು ಎಂಬ ತತ್ವಗಳನ್ನೂ ಸಹ ಸಂಕ್ಷಿಪ್ತಗೊಳಿಸಿದೆ.ಸಾಕ್ಷಿದಾರರ ಸಾಕ್ಷ್ಯವನ್ನು ವಿವೇಚಿಸುವಾಗ, ಒಟ್ಟಾರೆಯಾಗಿ ಓದಲಾದ ಸಾಕ್ಷಿದಾರರ ಸಾಕ್ಷ್ಯವು ಮೊಕದ್ದಮೆಯು ನೀಡಿದ ಸನ್ನಿವೇಶಗಳಲ್ಲಿ ಸತ್ಯಾಂಶವೆಂದು ಕಂಡುಬರುತ್ತದೆಯೇ ಎಂಬ ದೃಷ್ಟಿಕೋನ ಇರಬೇಕು.ಒಮ್ಮೆ ಆ ಅಭಿಪ್ರಾಯ ಮೂಡಿದರೆ, ಸಾಕ್ಷ್ಯದಲ್ಲಿ ಎತ್ತಿ ತೋರಿಸಿದ ನ್ಯೂನತೆಗಳು ಹಾಗೂ ಕೊರತೆಗಳನ್ನು ಹೆಚ್ಚು ನಿರ್ದಿಷ್ಟವಾಗಿ ದೃಷ್ಟಿಯಲ್ಲಿಟ್ಟುಕೊಂಡು ಸಾಕ್ಷ್ಯವನ್ನು ಚ ಸೂಕ್ಷ್ಮವಾಗಿ ಪರಿಶೀಲಿಸಿ, ಇದು ಪ್ರಾಸಿಕ್ಯೂಷನ್ ವಾದದ ಸಾಮಾನ್ಯ ಧಾಟಿಗೆ ವಿರುದ್ಧವಾಗಿದೆಯೇ ಎಂಬುದನ್ನು ಗುರುತಿಸಲು ಮೌಲ್ಯ ನಿರ್ಣಯ ಮಾಡುವುದು ನ್ಯಾಯಾಲಯಕ್ಕೆ ಅಗತ್ಯವಾಗಿರುತ್ತದೆ.ಪ್ರಾಸಿಕ್ಯೂಷನ್ ಸಮರ್ಪಕವಾಗಿ ಹಾಗೂ ಸಾಕ್ಷ್ಯವನ್ನು ಮನವರಿಕೆ ಮಾಡುವ ಮೂಲಕ ಸನ್ನಿವೇಶಗಳನ್ನು ರುಜುವಾತುಪಡಿಸಿದರೆ, ಸನ್ನಿವೇಶಗಳನ್ನು ಒಟ್ಟಾರೆಯಾಗಿ ತೆಗೆದುಕೊಂಡು, ಸಂಪೂರ್ಣ ಸರಣಿಯನ್ನು ನಿರ್ಮಿಸಿ, ಬೇರಾರು ಅಲ್ಲದೆ, ಆಪಾದಿತನೇ ಕೊಲೆಯನ್ನು ಮಾಡಿದ್ದನೆಂಬುದನ್ನು ಎತ್ತಿ ತೋರಿಸಿದಂತಾಗುತ್ತದೆ.ಸಾಕ್ಷ್ಯ ಎ ಅಧಿನಿಯಮದ 106 ನೇ ಪ್ರಕರಣದ ಮೇರೆಗಿನ ಹೊರೆಯನ್ನು ತೆಗೆದುಹಾಕಲಾಗದು ಎಂಬುದನ್ನು ಸಹ ಗಮನಕ್ಕೆ ತೆಗೆದುಕೊಳ್ಳಬೇಕು.ಆಪಾದಿತನು ತನ್ನ ವಿರುದ್ಧ ಹೊರಿಸಲಾದ ದೋಷಾರೋಪವನ್ನು ವಿವರಿಸಲು ಆಪಾದಿತನು ವಿಫಲನಾಗುವುದಕ್ಕೆ ಹಾಗೂ ಅದರ ಪರಿಣಾಮವೇನು ಎಂಬುದಕ್ಕೆ ಸಂಬಂಧಪಟ್ಟಂತಹ ತತ್ವಗಳನ್ನು ಸಹ ಸಂಕ್ಷಿಪ್ತಗೊಳಿಸಿದೆ.ಆಪಾದಿತನು ತನ್ನ ತಿಳಿವಳಿಕೆಗೆ ಬಂದಿರುವ ಸಂಗತಿಯ ಮೇಲೆ ಬೆಳಕು ಚೆಲ್ಲದಿದ್ದರೆ, ಯಾವುದೇ ವಿವರಣೆ ನೀಡುವುದಕ್ಕೆ ಆಗದ ಅವನ ವಿಫಲತೆಯು ಅವನ ವಿರುದ್ಧದ ಬಲವಾದ ವ್ಯತಿರಿಕ್ತ ಸನ್ನಿವೇಶವಾಗಿ ಪರಿಣಮಿಸುತ್ತದೆ.ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಚ ಮೃತನು ಕಾಣೆಯಾಗಿರುವ ಬಗ್ಗೆ ಅವನು ತೃಪ್ತಿಕರವಾಗಿ ವಿವರಿಸಿಲ್ಲವೆನ್ನುವ ೧ ಆಪಾದಿತನ ಕಡೆಯಿಂದಾದ ಲೋಪವನ್ನು ಗಮನಕ್ಕೆ ತೆಗೆದುಕೊಂಡಿರುತ್ತದೆ.

37. ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಜಸ್ಪಾಲ್ ಸಿಂಗ್, ಪೊಲೀಸ್ ಉಪ ಅಧೀಕ್ಷಕರು ವಿರುದ್ಧ ಪಂಜಾಬ್ ರಾಜ್ಯ (2012) 1 ಎಸ್ಸಿ (ಕ್ರಿ) 1 ಮೊಕದ್ದಮೆಯ ತೀರ್ಪಿನ 78 ನೇ ಹಾಗೂ 79 ನೇ ಕಂಡಿಕೆಗಳಲ್ಲಿ, ಅಪರಾಧ ನಡೆಸಿದ ತರುವಾಯ ಆಪಾದಿತನ ವರ್ತನೆಯು ಸುಸಂಬದ್ಧವಾಗಿರಬಹುದು ಎಂದು ಅಭಿಪ್ರಾಯಪಟ್ಟಿದೆ.ಆಪಾದಿತನು ತನ್ನಿಂದಾದ ಅಪರಾಧವನ್ನು ಮುಚ್ಚಿಹಾಕಲು/ನಿರಪರಾಧಿಯೆಂದು

ಘೋಷಿಸಿಕೊಳ್ಳಲು ಕೆಲವು ಸಾಕ್ಷ್ಯವನ್ನು ಸೃಜಿಸಿರುವುದನ್ನು ತೋರಿಸಲು ಸಾಕಷ್ಟು ಸಾಕ್ಷ್ಯಗಳಿದ್ದರೆ, ಅಂಥ ಸನ್ನಿವೇಶವು ಆತನು ಮಾಡಿರುವ ತಪ್ಪಿನ ಕಡೆಗೆ ಬೆರಳಿಟ್ಟು ತೋರಿಸಬಹುದು.

38. ಕರ್ನಾಟಕ ರಾಜ್ಯ ವಿರುದ್ಧ ಸುವರ್ಣಮ್ಮ ಹಾಗೂ ಮತ್ತೊಬ್ಬರು (2015) 1 ಎಸ್ಸಿಸಿ (ಕ್ರಿ) 663 ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ನಾವು ಉಲ್ಲೇಖಿಸಬಯಸುತ್ತೇವೆ.ಈ ತೀರ್ಪಿನಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ದೋಷಪೂರ್ಣ ಅಥವಾ ಕಾನೂನುಬಾಹಿರ ತನಿಖೆ, ತನಿಖಾ ಏಜೆನ್ಸಿಯ ಅನುಚಿತ ನಡತೆ/ಸಾಕ್ಷ್ಯಾಧಾರವನ್ನು ಮುಚ್ಚಿಡುವುದಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದ ಪಾತ್ರವು ಪ್ರಾಸಿಕ್ಯೂಷನ್ ಸಾಕ್ಷ್ಯದಲ್ಲಿ ಗುರುತಿಸಲಾದ ವ್ಯತ್ಯಾಸಗಳನ್ನು ತನಿಖೆಯಲ್ಲಿನ ದೌರ್ಬಲ್ಯಗಳೂ ಹಾಗೂ ವಿಸಂಗತಿಗಳು ಪ್ರಾಸಿಕ್ಯೂಷನ್ ಆವೃತ್ತಿಗಳನ್ನು ನಿರಾಕರಿಸುವ ಸಂಬಂಧ ಆಧಾರಗಳನ್ನು ರೂಪಿಸುವುದಾಗಿರುತ್ತದೆಯೇ?ಎಂದು ಅಭಿಪ್ರಾಯಪಟ್ಟಿದೆ.ತನಿಖಾ ಏಜೆನ್ಸಿಯು ನ್ಯಾಯಸಮ್ಮತವಾಗಿದೆ ಹಾಗೂ ಸಮರ್ಥವಾಗಿದೆಯೆಂದು ನಿರೀಕ್ಷಿಸಿದರೂ, ಅಪರಾಧ ರುಜುವಾತುಪಡಿಸಲು ಸಾಕ್ಷ್ಯವನ್ನು ನಾಶಗೊಳಿಸಿದಾಗ ಅದರ ಕಡೆಯಿಂದಾದ ಯಾವುದೇ ಲೋಪಕ್ಕೆ ಪ್ರಾಸಿಕ್ಯೂಷನ್ನ ವಾದವನ್ನು ತೆಗೆದುಹಾಕಲು ಅದರಷ್ಟಕ್ಕೆ ಆಧಾರವಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ.ಮಾನ್ಯ ಸರ್ವೋಚ್ಚ ನ್ಯಾಯಾಲಯವು, ತನ್ನ ತೀರ್ಪಿನಲ್ಲಿ, ಆಪಾದಿತನ ನಡತೆ, ಚ ಆಪಾದಿತನು ಎತ್ತಿಕೊಂಡ ತಪ್ಪು ವಾದ, ರೂಪಿಸಬಹುದಾದ ವ್ಯತಿರಿಕ್ತ ತೀರ್ಮಾನದ ಊಹೆಯ ಬಗ್ಗೆ ಅಭಿಪ್ರಾಯಪಟ್ಟಿದೆ.ಹಾಗೆಯೇ ಸಾಕ್ಷ್ಯ ಎ ಅಧಿನಿಯಮದ 100 ನೇ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಡಲಾದ ಚರ್ಚೆಯ ಬಗ್ಗೆಯೂ ಅಭಿಪ್ರಾಯ ವ್ಯಕ್ತಪಡಿಸಿದೆ ಹಾಗೂ ಪ್ರಾಸಿಕ್ಯೂಷನ್, ಒಮ್ಮೆ ಆಪಾದಿತನನ್ನು ಅಪರಾಧದಲ್ಲಿ ತೊಡಗಿದ್ದನೆಂದು ಅಂದಾಜು ಮಾಡಿದೆಯಾದರೂ, ಆಪಾದಿತನು ತಪ್ಪು ವಾದವನ್ನು ತೆಗೆದುಕೊಂಡರೆ, ಅಂಥ ತಪ್ಪು ವಾದವನ್ನು, ಆಪಾದಿತನ ವಿರುದ್ಧದ ಹೆಚ್ಚುವರಿ ಸನ್ನಿವೇಶಗಳಾಗಿ ತೆಗೆದುಕೊಳ್ಳಬಹುದು.ಆದಾಗ್ಯೂ, ಸಂವಿಧಾನದ 20 ( 3) ನೇ ಅನುಚ್ಛೇದವು, ಸ್ವಯಂಕೃತಾಪರಾಧದ ವಿರುದ್ಧ ನಿಯಮವನ್ನು ಸೇರಿಸಿದ್ದರೂ ಕೂಡ, ಸದರಿ ನಿಯಮದ ವ್ಯಾಪ್ತಿ ಹಾಗೂ ಒಳಾಂಶವು, ಆಪಾದಿತನು ತನಗೆ ತಿಳಿದಿರುವ ಸಂಗತಿಗಳನ್ನು ಸರಿಯಾಗಿ ಹೊರಗೆಡಹದಿದ್ದಲ್ಲಿ ಅವನ ನಡತೆಯನ್ನು ನಿರ್ಲಕ್ಷಿಸಲು ನ್ಯಾಯಾಲಯವನ್ನು ಅಗತ್ಯಪಡಿಸುವುದಿಲ್ಲ ಎಂದು ಚರ್ಚಿಸಲಾಗಿದೆ.ಆಪಾದಿತನು, ಆತನಿಗೆ ಮಾತ್ರ ಗೊತ್ತಿರುವ ಸಂಗತಿಗಳನ್ನು ಕುರಿತಂತೆ ತಪ್ಪು ವಾದವನ್ನು ಹೂಡಿದಾಗ ಅಂಥ ಸನ್ನಿವೇಶವು, ಆಪಾದಿತನ ವಿರುದ್ಧ ಮಹತ್ವಪೂರ್ಣವಾದ ಹೆಚ್ಚುವರಿ ಸನ್ನಿವೇಶವಾಗಿರುತ್ತದೆ.ಮಾನ್ಯ ಸರ್ವೋಚ್ಚ ನ್ಯಾಯಾಲಯವೂ ಕೂಡ, ಖುಲಾಸೆಯ ವಿರುದ್ಧದ ಅಪೀಲಿನಲ್ಲಿ ಸಕಾರಣವಾದ ದೃಷ್ಟಿಕೋನವನ್ನು ತೆಗೆದುಕೊಂಡಿದ್ದರೆ, ಹಸ್ತಕ್ಷೇಪ ಮಾಡುವ ಅಗತ್ಯವಿರುವುದಿಲ್ಲ ಆದರೆ, ತೆಗೆದುಕೊಂಡ ದೃಷ್ಟಿಕೋನವು ಕಾನೂನುಸಮ್ಮತವಾಗಿ ಸಮರ್ಥನೀಯವಾಗಿರದಿದ್ದರೆ, ಖುಲಾಸೆಯ ಆದೇಶದೊಂದಿಗೆ ಹಸ್ತಕ್ಷೇಪ ಮಾಡುವ ಹೆಚ್ಚಿನ ಅಧಿಕಾರಗಳನ್ನು ನ್ಯಾಯಾಲಯವು ಹೊಂದಿರುತ್ತದೆಯೆಂದು ತೀರ್ಪಿನಲ್ಲಿ ಅಭಿಪ್ರಾಯಪಟ್ಟಿದೆ.ಮಾನ್ಯ ಸರ್ವೋಚ್ಚ ನ್ಯಾಯಾಲಯವು, ವ್ಯತ್ಯಾಸಗಳನ್ನು ಅನ್ವಯವಾಗದಿರುವುದನ್ನು ಹಾಗೂ ಅನವಶ್ಯಕ ಭಾಗಗಳಲ್ಲಿ ಹೆಚ್ಚು ಒತ್ತು ಕೊಡುವಿಕೆ ಬಗ್ಗೆ ವಿವೇಚನೆ ನಡೆಸುವ ಸಣ್ಣ ಪುಟ್ಟ ಚ ವ್ಯತ್ಯಾಸಗಳ ಸಂದರ್ಭಗಳಲ್ಲಿ ಸಾಕ್ಷ್ಯವನ್ನು ಪುನಃ ಮೌಲ್ಯನಿರ್ಣಯ ಮಾಡುವ ಅಥವಾ ಮರು ವಿವೇಚನೆ ಮಾಡುವ, ಒಂದು ವಿಷಯದ ಬಗ್ಗೆ ತಪ್ಪಾಗಿ ಸಾಕ್ಷಿ ಹೇಳುವ ಸಾಕ್ಷಿದಾರನು ಯಾವುದೇ ವಿಷಯದ ಬಗ್ಗೆ ಸಾಕ್ಷಿ ಹೇಳುವುದಕ್ಕೆ ವಿಶ್ವಾಸಾರ್ಹವಾಗುವುದಿಲ್ಲ ಎಂಬುದನ್ನು ಗಮನಿಸಿ ವಿವರಿಸುವುದಕ್ಕೆ ಸಾಕ್ಷಿದಾರನ ಸಾಮರ್ಥ್ಯ ಇವುಗಳ ಸಂಬಂಧದಲ್ಲಿ ಅಭಿಪ್ರಾಯವನ್ನು

ವ್ಯಕ್ತಪಡಿಸಿದೆ.ಸರ್ವೋಚ್ಚ ನ್ಯಾಯಾಲಯವು, ಸಾಕ್ಷ್ಯ ಅಧಿನಿಯಮ, 1872 ರ 165 ನೇ ಹಾಗೂ 155 ನೇ ಎ ಪ್ರಕರಣಗಳ ತತ್ವಗಳನ್ನು ಸಂಕ್ಷಿಪ್ತಗೊಳಿಸಿದೆ ಹಾಗೂ ಸಾಕ್ಷಿದಾರನ ಸಾಕ್ಷ್ಯವನ್ನು ವಿವೇಚಿಸುವಾಗ ವಿಧಾನವು ಒಟ್ಟಾರೆಯಾಗಿ ಸಾಕ್ಷಿದಾರನ ಸಾಕ್ಷ್ಯವು ಸತ್ಯದ ವರ್ತುಲವೆ ಂ ಬುದಾಗಿ ಕಂಡುಬರುತ್ತದೆಯೇ ಎಂಬುದಾಗಿರಬೇಕೆಂದು ಅಭಿಪ್ರಾಯಪಟ್ಟಿದೆ.ಒಮ್ಮೆ ಆ ಅಭಿಪ್ರಾಯ ಮೂಡಿದರೆ, ಸಾಕ್ಷ್ಯವನ್ನು ಅದರಲ್ಲೂ ನಿರ್ದಿಷ್ಟವಾಗಿ ಒಟ್ಟಾರೆಯಾಗಿ ಸಾಕ್ಷ್ಯದಲ್ಲಿ ಗುರುತಿಸಲಾದ ಲೋಪ, ಹಿನ್ನಡೆ ಹಾಗೂ ಅಸ್ಥಿರತೆಗಳನ್ನು ಗಮನದಲ್ಲಿಟ್ಟುಕೊಂಡು, ಸಾಕ್ಷ್ಯವನ್ನು ಪರಿಶೀಲಿಸುವುದು ಹಾಗೂ ಇದು ಸಾಕ್ಷಿದಾರನು ನೀಡಿದ ಸಾಕ್ಷ್ಯದ ಸಾಮಾನ್ಯ ಗತಿಗೆ ವಿರುದ್ಧವಾಗಿದೆಯೇ ಹಾಗೂ ನಂಬಿಕೆಗೆ ಅನರ್ಹವಾಗಿದೆಯೆಂಬುದನ್ನು ನಿರೂಪಿಸಲು ಸಾಕ್ಷ್ಯದ ಮೊದಲಿನ ಮೌಲ್ಯಮಾಪನವು, ಸಾಕ್ಷ್ಯವನ್ನು ಪರಿಶೀಲಿಸುವುದು ನಿಸ್ಸಂದೇಹವಾಗಿ ನ್ಯಾಯಾಲಯಕ್ಕೆ ಅಗತ್ಯವಾಗಿರುತ್ತದೆ.ಮೊಕದ್ದಮೆಯ ತಿರುಳನ್ನು ಮುಟ್ಟದ ಚಿಕ್ಕಪುಟ್ಟ ವಿಷಯಗಳಲ್ಲಿರುವ ಸಣ್ಣಪುಟ್ಟ ವ್ಯತ್ಯಾಸಗಳು, ಸಾಕ್ಷ್ಯದಿಂದ ಅಲ್ಲಲ್ಲಿ ಸಂದರ್ಭದಿಂದ ಜಗ್ಗಿಹೋದ ವಾಕ್ಯಗಳನ್ನು ತೆಗೆದುಕೊಳ್ಳುವ ಮೂಲಕ ಅತ್ಯುತ್ಕೃಷ್ಟ ತಾಂತ್ರಿಕ ವಿಧಾನ, ತನಿಖಾಧಿಕಾರಿಯು ಈ ವಿಷಯದ ಮೂಲಕ್ಕೆ ಹೋಗದೆ ಆಗಿರುವ ಕೆಲವು ತಾಂತ್ರಿಕ ದೋಷಗಳಿಗೆ ಹೆಚ್ಚು ಒತ್ತು ನೀಡುವುದು, ಒಟ್ಟಾರೆಯಾಗಿ ಚ ಸಾಕ್ಷ್ಯವನ್ನು ತಿರಸ್ಕರಿಸುವುದಕ್ಕೆ ಸಾಮಾನ್ಯವಾಗಿ ಅನುಮತಿಸುವುದಿಲ್ಲ.

39. ನಾವು, ಶರದ್ ಬಿರ್ದಿಚಾಂದ್ ಸರ್ದಾ -ವಿರುದ್ಧ-ಮಹಾರಾಷ್ಟ್ರ ರಾಜ್ಯ ಎಐಆರ್ 1984 ಎಸ್ಸಿ 1622 ಮೊಕದ್ದಮೆಯಲ್ಲಿನ ತೀರ್ಪನ್ನು ಉದ್ಧರಿಸಲು ಬಯಸಿದ್ದು, ಇದರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಆಸಕ್ತಿದಾರ ಸಾಕ್ಷಿದಾರರಿಗೆ ಸಂಬಂಧಪಟ್ಟಂತೆ ಅಭಿಪ್ರಾಯ ವ್ಯಕ್ತಪಡಿಸಿದೆ.ಸಂತ್ರಸ್ತರ ಹತ್ತಿರದ ಸಂಬಂಧಿಗಳ ಸಾಕ್ಷ್ಯದ ವಿವೇಚನೆಯು ಅತಿಶಯಗೊಳಿಸುವ ಅಥವಾ ಸಂಗತಿಗಳನ್ನು ಹೆಚ್ಚಿಸುವ ಪ್ರವೃತ್ತಿ ಹೊಂದಿದ್ದು, ನ್ಯಾಯಾಲಯವು ಅಂಥ ಸಾಕ್ಷ್ಯಗಳನ್ನು ತುಂಬಾ ಎಚ್ಚರಿಕೆ ಹಾಗೂ ಜಾಗರೂಕತೆಯಿಂದ ಪರಿಶೀಲಿಸಬೇಕು.ಆಪಾದಿತನ ಮೇಲೆ ಹಾಕಿರದ ಸನ್ನಿವೇಶಗಳನ್ನು ಅವನ ವಿರುದ್ಧ ಬಳಸಬಾರದು.ಸಾಂದರ್ಭಿಕ ಸಾಕ್ಷ್ಯದ ಸಂದರ್ಭದಲ್ಲಿ, ಸರಣಿಯು ಪೂರ್ಣಗೊಂಡಿದೆ ಹಾಗೂ ಪ್ರಾಸಿಕ್ಯೂಷನ್ ಅಸ್ಥಿರತೆ ಅಥವಾ ಲೋಪವನ್ನು ತಪ್ಪು ಪ್ರತಿವಾದ ಅಥವಾ ವಾದದ ಮೂಲಕ ನಿವಾರಿಸಲು ಸಾಧ್ಯವಿಲ್ಲವೆಂಬುದನ್ನು ರುಜುವಾತುಪಡಿಸುವ ಹೊಣೆಗಾರಿಕೆ ಪ್ರಾಸಿಕ್ಯೂಷನ್ನಾದ್ದಾಗಿರುತ್ತದೆ.ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಸಾಂದರ್ಭಿಕ ಸಾಕ್ಷ್ಯದ ಸಂದರ್ಭದಲ್ಲಿ ಸಾಕ್ಷ್ಯ ಎಂ ಅಧಿನಿಯಮದ 3 ನೇ ಪ್ರಕರಣಕ್ಕೆ ಸಂಬಂಧಪಟ್ಟಂತೆ, ಈ ತೀರ್ಪಿನಲ್ಲಿ ಕೆಲವು ಷರತ್ತುಗಳನ್ನು ವಿಧಿಸಿದೆ:

( 1) ಯಾವ ಸಂದರ್ಭಗಳಿಂದ ತಪ್ಪಿನ ನಿರ್ಣಯಕ್ಕೆ ಬರಲಾಗಿದೆಯೋ ಅದನ್ನು ಸ ಂ ಪೂರ್ಣವಾಗಿ ರುಜುವಾತು ಪಡಿಸಬೇಕು.ಸಂಬಂಧಪಟ್ಟ ಸಂದರ್ಭಗಳನ್ನು ' ರುಜುವಾತು ಪಡಿಸಿರಬೇಕು ಅಥವಾ ರುಜುವಾತಾಗಿರಬೇಕೇ ಹೊರತು ರುಜುವಾತು ಮಾಡಬಹುದೆಂದು ಅಲ್ಲ.

(2) ಹಾಗೆ ರುಜುವಾತಾದ ಸಂಗತಿಗಳು, ಆಪಾದಿತನ ಅಪರಾಧದ ಊಹಾಪೋಹಗಳಿಗೆ ಮಾತ್ರ ಅನುಗುಣವಾಗಿರಬೇಕು.ಎಂದರೆ, ಆಪಾದಿತನು ತಪ್ಪಿತಸ್ಥನಾಗಿರುವನು ಎಂಬುದನ್ನು ಹೊರತುಪಡಿಸಿ ಯಾವುದೇ ಇತರ ಊಹಾಪೋಹಗಳ ಮೇಲೆ ಅವುಗಳನ್ನು ವಿವರಿಸುವಂತಿರಬಾರದು.

( 3) ಸಂದರ್ಭಗಳು ನಿರ್ಣಾಯಕ ಸ್ವರೂಪ ಹಾಗೂ ಪ್ರವೃತ್ತಿ ಯುಳ್ಳವಾಗಿರಬೇಕು.

( 4) ರುಜುವಾತುಪಡಿಸಬೇಕಾಗಿರುವ ಸಂಗತಿ ಒಂದನ್ನು ಹೊರತು ಪಡಿಸಿ, ಪ್ರತಿಯೊಂದೂ ಸಂಭವಸಾಧ್ಯ ಊಹಾಪೋಹದಿಂದ ಅವು ಹೊರಗಿರಬೇಕು, ಹಾಗೂ

( 5) ಆಪಾದಿತನ ನಿರಪರಾಧಿತ್ವಕ್ಕೆ ಹೊಂದಿಕೊಳ್ಳುವ ತೀರ್ಮಾನಕ್ಕಾಗಿ ಯಾವುದೇ ಯುಕ್ತ ಆಧಾರ ಬಿಡದಿರುವ ಹಾಗೆ ಪೂರ್ಣಗೊಳ್ಳುವಂತೆ ಸಾಕ್ಷ್ಯದ ಸರಣಿ ಇರಬೇಕು ಹಾಗೂ ಎಲ್ಲಾ ಮಾನವೀಯ ಸಂಭಾವ್ಯತೆಯಲ್ಲಿ ಆಪಾದಿತನು ಕೃತ್ಯವನ್ನು ನಡೆಸಿರಬೇಕು.

ನಿಶ್ಚಿತವಾದ ಮತ್ತು ಸ್ಪಷ್ಟ ಸಾಕ್ಷ್ಯವಿದ್ದಾಗ ಮಾತ್ರ ಮೊಕದ್ದಮೆಯನ್ನು ಸಾಬೀತುಪಡಿಸಲಾಗಿದೆ ಎಂದು ಹೇಳಬಹುದಾಗಿದೆ ಹಾಗೂ ಕೇವಲ ನೈತಿಕ ಅಪರಾಧ ನಿರ್ಣಯದ ಮೇಲೆ ಯಾರೇ ವ್ಯಕ್ತಿಯನ್ನು ಅಪರಾಧಿಯೆಂದು ನಿರ್ಣಯಿಸಬಾರದು.

40. ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಉದ್ದೇಶಕ್ಕೆ ಸಂಬಂಧಪಡುವಂತೆ ಚ ಸುಖ್ಪಾಲ್ ಸಿಂಗ್ -ವಿರುದ್ಧ ಪಂಜಾಬ್ ರಾಜ್ಯ 2019 ಎಸ್ಸಿ ಆನ್ಲೈನ್ ಎಸ್ಸಿ 178 ಮೊಕದ್ದಮೆಯಲ್ಲಿನ ಇತ್ತೀಚಿನ ತೀರ್ಪಿನಲ್ಲಿಯೂ ಕೂಡ, ಉದ್ದೇಶಯುಕ್ತ ಪ್ರಶ್ನೆಯನ್ನು, ಸಾಂದರ್ಭಿಕ ಸಾಕ್ಷ್ಯವನ್ನು ಆಧರಿಸಿದ ಪ್ರಾಸಿಕ್ಯೂಷನ್ ಮೊಕದ್ದಮೆಯಲ್ಲಿ ಮಹತ್ವವೆಂದು ಭಾವಿಸಬಹುದೆಂದು ನಿಸ್ಸಂದೇಹವಾಗಿ ನಿಜವಾದುದಾಗಿದೆಯೆಂದು ಅಭಿಪ್ರಾಯಪಟ್ಟಿದೆ.ಆದರೆ ಸಾಂದರ್ಭಿಕ ಸಾಕ್ಷ್ಯದ ಸಂದರ್ಭದಲ್ಲಿ ಉದ್ದೇಶವನ್ನು ರುಜುವಾತುಪಡಿಸಲು ಪ್ರಾಸಿಕ್ಯೂಷನ್ ಅಸಮರ್ಥವಾದರೆ ಅದು ಪ್ರಾಸಿಕ್ಯೂಷನ್ ಮೊಕದ್ದಮೆಗೆ ಮಾರಕವಾಗುತ್ತದೆಯೇ ಎಂಬುದು ಪ್ರಶ್ನೆಯಾಗಿದೆ.ಅಪರಾಧವನ್ನು ಮಾಡುವುದಕ್ಕೆ ಆಪಾದಿತನಿಗಿದ್ದ ಉದ್ದೇಶವನ್ನು ಪ್ರಾಸಿಕ್ಯೂಷನ್ ರುಜುವಾತುಪಡಿಸಿದರೆ, ಇದು ಸಾಂದರ್ಭಿಕ ಸಾಕ್ಷ್ಯವನ್ನು ಆಧರಿಸಿದ ಪ್ರಾಸಿಕ್ಯೂಷನ್ ಹೇಳಿಕೆಯನ್ನು ನಿಸ್ಸಂದೇಹವಾಗಿ ಬಲಪಡಿಸುತ್ತದೆ.ಆದರೆ, ಅದು ಆಪಾದಿತನು ಅಪರಾಧವೆಸಗುವುದಕ್ಕೆ ಯಾವುದೇ ಉದ್ದೇಶವಿಲ್ಲದಿರುವುದು, ಸಾಂಧರ್ಭಿಕ ಸಾಕ್ಷ್ಯದ ರೂಪದಲ್ಲಿ ನ್ಯಾಯಾಲಯದ ಮುಂದೆ ಲಭ್ಯವಿರುವ ಇತರ ಸಾಕ್ಷ್ಯವನ್ನು ಪರಿಗಣನೆಗೆ ತೆಗೆದುಕೊಳ್ಳದೆ ಪ್ರಾಸಿಕ್ಯೂಷನ್ಗೆ ಮಾರಕವಾಗುತ್ತದೆ ಎಂದು ಹೇಳುವುದರಿಂದ ತುಂಬಾ ಭಿನ್ನವಾಗಿದೆ ಎಂದು ನಮಗನ್ನಿಸುತ್ತದೆ.

41. ಮೇಲೆ ಉಲ್ಲೇಖಿಸಲಾದ ತೀರ್ಪುಗಳಲ್ಲಿ ವಿಧಿಸಲಾದ ತತ್ವಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ನಮ್ಮ ಮುಂದಿರುವ ಮೊಕದ್ದಮೆಯಲ್ಲಿನ ಮೌಖಿಕ ಹಾಗೂ ದಸ್ತಾವೇಜೀಯ ಎರಡೂ ದಾಖಲೆಗಳಲ್ಲಿ ಲಭ್ಯವಿರುವ ಸಾಕ್ಷ್ಯಾಧಾರವನ್ನು ನಾವು ಈಗ ಪರಿಶೀಲಿಸೋಣ.ಆಪಾದಿತನು, ಪತಿ ಹಾಗೂ ಪತ್ನಿಯಾಗಿರುವ ಪಿ.ಡಬ್ಲ್ಯೂ -1 ರ ಹಾಗೂ ಪಿ.ಡಬ್ಲ್ಯೂ -6 ರ ಮನೆಗೆ ಬಂದು ಅಲ್ಲಿಂದ ಮೃತಳನ್ನು ಕರೆದುಕೊಂಡು ಹೋಗಿದ್ದಾನೆ ಎಂಬುದು ಪ್ರಾಸಿಕ್ಯೂಷನ್ ವಾದವಾಗಿದ್ದು, ಕಳೆದ 15 ದಿನಗಳಿಂದ ಮೃತಳು ಅವರ ಮನೆಯಲ್ಲಿದ್ದಳು ಎಂಬುದು ಅದರ ವಾದವಾಗಿದೆ.ಘಟನೆ ನಡೆದ ದಿನಾಂಕದಂದು, 1 ನೇ ಆಪಾದಿತನು, ಬೆಳಿಗ್ಗೆ 10.00 ಗಂಟೆಯಲ್ಲಿ ತನ್ನ ಮೋಟಾರು ಸೈಕಲ್ಲಿನಲ್ಲಿ ಬಂದು ಮೃತಳನ್ನು ಕರೆದುಕೊಂಡು ಹೋಗಿದ್ದಾನೆ.ಪಿ.ಡಬ್ಲ್ಯೂ -1 ಹಾಗೂ 2 ನೇ ಸಾಕ್ಷಿದಾರರು, ತಮ್ಮ ಮನೆಯಿಂದ ಮೃತಳನ್ನು 1 ನೇ ಆಪಾದಿತನು ಕರೆದುಕೊಂಡು ಹೋಗಿರುವುದಕ್ಕೆ ಸಂಬಂಧಿಸಿದಂತೆ ಒಂದೇ ರೀತಿಯಲ್ಲಿ ಮಾತನಾಡಿದ್ದಾರೆ.ಅಷ್ಟೇ ಅಲ್ಲದೆ, ಮಧ್ಯಾಹ್ನ ಸುಮಾರು 1.30 ರಲ್ಲಿ ಮೃತಳು ಕರೆಮಾಡಿ, ತಾನು ಮಧ್ಯಾಹ್ನದ ಊಟಕ್ಕೆ ಬರುವುದಾಗಿ ತಿಳಿಸಿದ್ದಾಳೆ.ಆದರೆ ಅವಳು ಬಂದಿಲ್ಲ ಹಾಗೂ ಅವರು ಮಧ್ಯಾಹ್ನ 02.30 ರವರೆಗೆ ಕಾಯ್ದಿರುವುದು ಪಿ.ಡಬ್ಲ್ಯೂ -1 ಹಾಗೂ 6 ರ ಸಾಕ್ಷ್ಯವಾಗಿದೆಯೆಂಬುದನ್ನು ಗಮನಿಸುವುದು ಪ್ರಮುಖವಾದುದಾಗಿದೆ.ಅವರು ಪುನಃ ಪಿ.ಡಬ್ಲ್ಯೂ -1 ರ ಮೊಬೈಲ್ನಿಂದ ಆಪಾದಿತನಿಗೆ

ಕರೆಮಾಡಿದ್ದಾರೆ.1 ನೇ ಆಪಾದಿತನು ಫೋನ್ ಕರೆಗೆ ಉತ್ತರಿಸಿಲ್ಲ.ಹೀಗಾಗಿ, ' ಕರೆಮಾಡಿ ' ಎಂದು ಸಂದೇಶವನ್ನು ಕಳಿಸಲಾಗಿತ್ತು.ಆದರೆ, ಮತ್ತೆ ಆಪಾದಿತನಿಂದ ಯಾವುದೇ ಉತ್ತರ ಬಂದಿರಲಿಲ್ಲ.ಆದಾಗ್ಯೂ, ಸಾಯಂಕಾಲ 4 ಗಂಟೆಯಲ್ಲಿ 2 ನೇ ಆಪಾದಿತನಿಂದ ಪಿ.ಡಬ್ಲ್ಯೂ -1 ಫೋನ್ ಕರೆಯನ್ನು ಸ್ವೀಕರಿಸಿದ್ದು, ಅಪಘಾತ ನಡೆದಿದ್ದು ಪಿ.ಡಬ್ಲ್ಯೂ .6 ರ ಸಹೋದರಿ ತೀರಿ ಹೋಗಿರುವಳೆಂದು ಹಾಗೂ ಗಾಯಾಳು ಎ ಂ ದರೆ 1 ನೇ ಆಪಾದಿತನನ್ನು ಆಸ್ಪತ್ರೆಗೆ ಕೊಂಡೊಯ್ಯಲಾಗಿತ್ತೆಂದು ತಿಳಿಸಿದ್ದಾನೆ.ಪ್ರಾಸಿಕ್ಯೂಷನ್, ಸದರಿ ಸಂಗತಿಯನ್ನು ರುಜುವಾತುಪಡಿಸುವ ಸಲುವಾಗಿ ನಿಶಾನೆ ಪಿ .58 ಎಂದರೆ ಕರೆ ದಾಖಲೆ ವಿವರಗಳನ್ನು ಅವಲಂಬಿಸಿದೆ.ಆಪಾದಿತನ ದೂರವಾಣಿ ಸಂಖ್ಯೆಯು 9482106653 ' ಆಗಿರುತ್ತದೆ.ಅಪಘಾತವುದಿನಾಂಕ: 19-07-2009ರಂದು ನಡೆದಿದ್ದು,ದಿನಾಂಕ: 18-07-2009ರಂದು 1 ನೇ ಆಪಾದಿತನು, ರಾತ್ರಿ 10.05 ರಿಂದ 10.16 ರವರೆಗೆ ಪಿ.ಡಬ್ಲ್ಯೂ .1 ಕ್ಕೆ ಕ ಸಂದೇಶ ಕಳುಹಿಸಿದ್ದಾನೆ ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.ಅದೇ ದಿನ ರಾತ್ರಿ, 2 ನೇ ಆಪಾದಿತನು, ರಾತ್ರಿ 10.30 ರಿಂದ 281 ಸೆಕೆಂಡುಗಳ ಅವಧಿಯವರೆಗೆ 1 ನೇ ಆಪಾದಿತನೊಂದಿಗೆ ಮಾತನಾಡಿರುವುದನ್ನು ಗಮನಿಸುವುದು ಯುಕ್ತವಾಗಿದೆ.ದಿನಾಂಕ: 19-07-2009ರಂದು 1 ನೇ ಆಪಾದಿತನು ಬೆಳಗ್ಗೆ 9.28 ಕ್ಕೆ ಎಂದರೆ ಪಿ.ಡಬ್ಲ್ಯೂ -1 ರ ಮನೆಗೆ ಭೇಟಿ ಕೊಡುವುದಕ್ಕೂ ಸ್ವಲ್ಪ ಮೊದಲು, ಆಕೆಗೆ ಕರೆಮಾಡಿದ್ದಾನೆ ಹಾಗೂ ಪುನಃ 2 ನೇ ಆಪಾದಿತನು ಅದೇ ದಿನದಂದು ಬೆಳಿಗ್ಗೆ 10.31 ರಲ್ಲಿ 1 ನೇ ಆಪಾದಿತನೊಂದಿಗೆ ಮಾತನಾಡಿರುವುದನ್ನು ಗಮನಿಸುವುದೂ ಕೂಡ ಯುಕ್ತವಾಗಿದೆ.1 ನೇ ಆಪಾದಿತನು ಮಧ್ಯಾಹ್ನ 1.20 ರಲ್ಲಿ ಪಿ.ಡಬ್ಲ್ಯೂ .1 ಕ್ಕೆ ಕರೆ ಮಾಡಿದ್ದನ್ನು ಗಮನಿಸುವುದು ಯುಕ್ತವಾಗಿದೆ.1 ನೇ ಆಪಾದಿತನ ಫೋನ್ನಲ್ಲಿ ಮೃತಳು ಕರೆ ಮಾಡಿದ್ದಳು.ಎಂಬುದು ಹಾಗೂ ಅವರು ಮಧ್ಯಾಹ್ನದ ಊಟಕ್ಕೆ ಬರುತ್ತಿದ್ದು ಊಟವನ್ನು ತಯಾರು ಮಾಡಲು ತಿಳಿಸಿದ್ದಳೆಂಬುದು ಕೂಡ ಪಿ.ಡಬ್ಲ್ಯೂ.ಹಾಗೂ ಪಿ.ಡಬ್ಲ್ಯೂ .6 ರ ಸಾಕ್ಷ್ಯವಾಗಿದೆ.ಮುಂದುವರಿದು, 1 ನೇ ಆಪಾದಿತನು ಮಧ್ಯಾಹ್ನ 2.17 ರಲ್ಲಿ 2 ನೇ ಆಪಾದಿತನಿಗೆ ಕರೆಮಾಡಿದ್ದು, ಹಾಗೆಯೇ 2 ನೇ ಆಪಾದಿತನು 2.23 ರಲ್ಲಿ 1 ನೇ ಆಪಾದಿತನಿಗೆ ಕರೆಮಾಡಿದ್ದಾನೆ ಎಂಬುದನ್ನು ಗಮನಿಸುವುದು ಪ್ರಮುಖವಾಗಿದೆ.ಹೀಗಾಗಿ, 1 ನೇ ಆಪಾದಿತನು ಹಿಂದಿನ ದಿನದಿಂದ 2 ನೇ ಆಪಾದಿತನೊಂದಿಗೆ ಸಂಪರ್ಕದಲ್ಲಿದ್ದನು ಎಂಬುದು ಸ್ಪಷ್ಟವಾಗುತ್ತದೆ.ಅವರು ಹಿಂದಿರುಗಿ ಬರದಿದ್ದಾಗ ಪಿ.ಡಬ್ಲ್ಯೂ.1 ಮಧ್ಯಾಹ್ನ 3.33 ರಲ್ಲಿ ಸಂದೇಶ ಕಳಿಸಿರುವುದನ್ನು ಗಮನಿಸುವುದು ಸಹ ಯುಕ್ತವಾಗಿದೆ.ಮೃತಳ ಸಹೋದರಿಯಾಗಿರುವ ಪಿ.ಡಬ್ಲ್ಯೂ.ತನ್ನ ಸಾಕ್ಷ್ಯದಲ್ಲಿ, ಮೃತಳು ಹಾಗೂ 1 ನೇ ಆಪಾದಿತನು ಅವಳ ಕರೆಗಳನ್ನು ಸ್ವೀಕರಿಸದಿದ್ದಾಗ " ಕರೆಮಾಡು " ಎಂಬ ಸಂದೇಶವನ್ನು ಕಳುಹಿಸಿದ್ದನ್ನು ಸ್ಪಷ್ಟವಾಗಿ ತಿಳಿಸಿದ್ದಾಳೆ.ಅದೇ ದಿನದಂದು ಮಧ್ಯಾಹ್ನ 4.11 ರಲ್ಲಿ 1 ನೇ ಆಪಾದಿತನು 3 ನೇ ಆಪಾದಿತನಿಗೆ ಕರೆಗಳನ್ನು ಕೂಡ ಮಾಡಿದ್ದಾನೆ ಹಾಗೂ ಪಿ.ಡಬ್ಲ್ಯೂ .1 ಸಾಯಂಕಾಲ 4.44 ರಿಂದ 6.12 ರವರೆಗೆ 1 ನೇ ಆಪಾದಿತನಿಗೆ ಕರೆ ಮಾಡಿದ್ದಾರೆ ಹಾಗೆಯೇ 1 ನೇ ಆಪಾದಿತನು ಸಂಜೆ 6.19 ರಲ್ಲಿ ಪಿ.ಡಬ್ಲ್ಯೂ .1 ಕ್ಕೆ ಕರೆಮಾಡಿದ್ದಾನೆ.ಪಿ.ಡಬ್ಲ್ಯೂ.ಹಾಗೂ 6 ತಮ್ಮ ಸಾಕ್ಷ್ಯದಲ್ಲಿ, 1 ನೇ ಆಪಾದಿತನು ಬಂದು ಮೃತಳನ್ನು ಕರೆದುಕೊಂಡು ಹೋದನೆಂದು ಹಾಗೆಯೇ, ಮೃತಳು ಮಧ್ಯಾಹ್ನ 1.20 ರಲ್ಲಿ ಪಿ.ಡಬ್ಲ್ಯೂ .1 ಕ್ಕೆ ಕರೆಗಳನ್ನು ಮಾಡಿರುವ ಬಗ್ಗೆ ನೇರವಾಗಿ ಹೇಳಿರುವುದನ್ನು ಗಮನಿಸುವುದು ೧ ಯುಕ್ತವಾಗಿದೆ.ಅಲ್ಲದೆ, ಮೃತಳು 1 ನೇ ಆಪಾದಿತನ ಮೊಬೈಲ್ನಿಂದ ಪಿ.ಡಬ್ಲ್ಯೂ .6 ರೊಂದಿಗೆ ಮಾತನಾಡಿರುವುದು ಪ್ರಾಸಿಕ್ಯೂಷನ್ ವಾದವನ್ನು ಬಲಗೊಳಿಸುತ್ತದೆ.ಹೀಗಾಗಿ, ಅದೇ ದಿನದಂದು ಮಧ್ಯಾಹ್ನ 1.30 ರಲ್ಲಿ ಅವರಿಬ್ಬರೂ ಒಟ್ಟಿಗೆ ಇದ್ದುದ್ದು ಸ್ಪಷ್ಟವಾಗುತ್ತದೆ.ಆಪಾದಿತನಿಗಾಗಲಿ ಅಥವಾ ಮೃತಳಿಗಾಗಲಿ ಸಂಬಂಧಿಕರಾಗದಿರುವ ಪಿ.ಡಬ್ಲ್ಯೂ -2 ಹಾಗೂ 3 ತಮ್ಮ ಸಾಕ್ಷ್ಯದಲ್ಲಿ ಅವರಿಬ್ಬರೂ, ನಾಗರಾಜುವರ ಜಮೀನಿನಲ್ಲಿ ಕಿರುಚಿಕೊಂಡ ಶಬ್ದವನ್ನು ಕೇಳಿಸಿಕೊಂಡೆವೆಂದು ನೇರವಾಗಿ ಹೇಳಿರುವುದನ್ನು ಗಮನಿಸುವುದು

ಯುಕ್ತವಾದುದಾಗಿದೆ.ಅವರು ಏನು ನಡೆಯುತ್ತಿದೆಯೆಂದು ನೋಡಲು ಪ್ರಯತ್ನಿಸಿದಾಗ, ಅಲ್ಲಿ ಯಾವುದೇ ಪ್ರತಿಕ್ರಿಯೆ ಇರಲಿಲ್ಲ.ಪಾಟೀ-ಸವಾಲಿನಲ್ಲಿ ಪಿ.ಡಬ್ಲ್ಯೂ .2 ಹಾಗೂ 3 ಪ್ರತಿಕೂಲ ಸಾಕ್ಷ್ಯವಾಗಿ ಪರಿಣಮಿಸಿದ್ದರೂ ಕೂಡ, ಮೃತದೇಹ ಕಂಡುಬಂದ ಸ್ಥಳದಲ್ಲಿ ಕಿರುಚಿಕೊಂಡ ಶಬ್ದವನ್ನು ಅವರು ಕೇಳಿಸಿಕೊಂಡಿರುವುದನ್ನು ಬಹಿರಂಗಪಡಿಸಿದ್ದಾರೆ. ಸಾಂದರ್ಭಿಕ ಸಾಕ್ಷಿದಾರರೂ ಆಗಿರುವ ಪಿ.ಡಬ್ಲ್ಯೂ .4, ತನ್ನ ಸಾಕ್ಷ್ಯದಲ್ಲಿ ಪಿ.ಡಬ್ಲ್ಯೂ .4 ನ್ನು ಅಪಘಾತ ನಡೆದ ಸ್ಥಳ ಎಲ್ಲಿ ಎಂಬ ಬಗ್ಗೆ ಅವನು ವಿಚಾರಿಸಿದಾಗ, 2 ನೇ ಆಪಾದಿತನನ್ನು ತಾನು ನೋಡಿರುವುದಾಗಿ ನೇರವಾಗಿ ತಿಳಿಸಿರುವುದನ್ನು, ಪಿ.ಡಬ್ಲ್ಯೂ -4 ಯಾವುದೇ ಅಪಘಾತವನ್ನು ನೋಡಿಲ್ಲವೆಂದು ಉತ್ತರಿಸಿರುವುದನ್ನು ಗಮನಿಸುವುದೂ ಸಹ ಮುಖ್ಯವಾದುದಾಗಿದೆ.ಆದರೆ, 2 ನೇ ಆಪಾದಿತನು, ಸ್ವಲ್ಪ ಮುಂದೆ ಹೋಗಿ ಮೋಟಾರು ಸೈಕಲ್ನಿಂದ ಕೆಳಗಿಳಿದು, ಅಪಘಾತ ನಡೆದಿದೆಯೆಂದು, ಹಳ್ಳದಿಂದ ನೀರನ್ನು ತರಲು ಪಿ.ಡಬ್ಲ್ಯೂ -4 ರ ಸಹಾಯ ಕೋರಿದ್ದನ್ನು ಅವನಿಗೆ ಹೇಳಿದ್ದಾನೆ, 1 ನೇ ಆಪಾದಿತನಿಗೆ ನೀರನ್ನು ಕೊಟ್ಟಿದ್ದಾನೆ ಹಾಗೆಯೇ ತೋಟದ ಜಮೀನಿನಲ್ಲಿ ಹುಡುಗಿಯು ಬಿದ್ದಿರುವುದನ್ನು ನೋಡಿದ.ಆದರೆ, ಅವಳೂ ಬದುಕಿದ್ದಳೇ ಅಥವಾ ಇಲ್ಲವೇ ಎಂಬುದನ್ನು ಅವನು ಪರಿಶೀಲಿಸಿರಲಿಲ್ಲ.ಅಷ್ಟೇ ಅಲ್ಲದೆ, ಆಟೋರಿಕ್ಷಾ ಬಂದಾಗ, 1 ನೇ ಆಪಾದಿತನನ್ನು ಆಸ್ಪತ್ರೆಗೆ ಕಳುಹಿಸಲಾಗಿತ್ತು.ಇವನು 1 ನೇ ಆಪಾದಿತನನ್ನೂ ಸಹ ಗುರುತಿಸಿದ್ದು ಹಾಗೆಯೇ 2 ನೇ ಆಪಾದಿತನನ್ನು ಹಾಗೂ ಅವರಿಬ್ಬರೂ ಅಪರಾಧ ನಡೆದ ಸ್ಥಳದ ಬಳಿ ನಿಂತಿದ್ದುದನ್ನು ಗುರುತಿಸಿದ್ದಾನೆ.ಪಾಟೀ-ಸವಾಲಿನಲ್ಲೂ ಕೂಡ, ಸ್ಥಳದಲ್ಲಿ 1 ನೇ ಹಾಗೂ 2 ನೇ ಆಪಾದಿತರನ್ನು ತಾನು ಕಂಡಿರುವುದನ್ನು ಪಿ.ಡಬ್ಲ್ಯೂ.ಸಾಕ್ಷ್ಯದಲ್ಲಿ ನಂಬದೆ ಇರುವಂಥದ್ದೇನನ್ನೂ ಹೇಳಿಲ್ಲ.ಈ ಸಾಕ್ಷಿದಾರನು ಕೆಲವು ವಿಷಯಗಳಮಟ್ಟಿಗೆ ಪ್ರತಿಕೂಲ ಸಾಕ್ಷ್ಯವಾಗಿ ಪರಿಣಮಿಸಿದರೂ, ಸರ್ಕಾರಿ ಪ್ರಾಸಿಕ್ಯೂಷನ್ ಮಾಡಿದ ಪಾಟೀ-ಸವಾಲಿನಲ್ಲಿ, ಇವರು, 2 ನೇ ಆಪಾದಿತನ, ಹಾಗೆಯೇ 1 ನೇ ಆಪಾದಿತನನ್ನು ಸ್ಪಷ್ಟವಾಗಿ ಗುರುತಿಸುತ್ತಾನೆ.ಆದರೆ, ಪ್ರತಿವಾದಿ ವಕೀಲರ ಪಾಟೀ-ಸವಾಲಿನಲ್ಲಿ ಮಾತ್ರ, ಅವನು ಸ್ಥಳದ ಹತ್ತಿರಕ್ಕೆ ಬಂದಾಗ, 2 ನೇ ಆಪಾದಿತನು ನಾಗರಾಜುವರ ಜಮೀನಿನಲ್ಲಿದ್ದನೆಂಬುದನ್ನು ಹಾಗೂ ಇಳಿಜಾರಿನ ಸ್ಥಳದಲ್ಲಿ ಕೆಳಗೆ ಇದ್ದ ಮೋಟಾರು ಸೈಕಲ್ಲನ್ನು ಅವನು ಕಂಡಿದ್ದನೆಂಬುದನ್ನು ಹೊರಗೆಡಹಿದ್ದಾನೆ.1 ನೇ ಆಪಾದಿತನು ಆಸ್ಪತ್ರೆಗೆ ಹೊರಟ ಆಟೋರಿಕ್ಷಾದಲ್ಲಿ 1 ನೇ ಆಪಾದಿತನೊಂದಿಗೆ ಒಬ್ಬರೂ ಜೊತೆಗಿರಲಿಲ್ಲವೆಂದು ಅವನು ವಾದಿಸಿದ್ದಾನೆ.ಆದರೆ, ಅವನೇ ಆಸ್ಪತ್ರೆಗೆ ಹೋಗಲು ತನಗೆ ಹೇಳಿದನೆಂದು ಕ್ಲೇಮು ಮಾಡಲಾಗಿದೆ.ಅವನು ಪಾಟೀ-ಸವಾಲಿನಲ್ಲಿ, 2 ನೇ ಆಪಾದಿತನು ಅಪಘಾತದ ಸ್ಥಳದ ಬಗ್ಗೆ ವಿಚಾರಿಸಿದ್ದು, ತಾನು ಅವನಿಗೆ ಸಹಾಯ ಮಾಡಿದೆನೆಂದು ಹಾಗೂ ಅದನ್ನು ಸ್ಥಳಕ್ಕೆ ಬಂದಿದ್ದ ಊರಿನವರಿಗೆ ತಾನು ಹೇಳಿದೆನೆಂದು ಮತ್ತೆ ಒತ್ತಿ ಹೇಳಿದ್ದಾನೆ.ಪಿ.ಡಬ್ಲ್ಯೂ .4 ರ ಪಾಟೀ-ಸವಾಲಿನಲ್ಲಿ, ಪಿ.ಡಬ್ಲ್ಯೂ.ಹಾಗೆಯೇ 1 ನೇ ಆಪಾದಿತ ಹಾಗೂ 3 ನೇ ಆಪಾದಿತ ಕುಟುಂಬದ ನಡುವೆ ಮನಃಸ್ತಾಪವಿತ್ತು ಎಂದು ಸೂಚಿಸಲಾಗಿದ್ದು ಅದರ ಬಗ್ಗೆ ತನಗೆ ಗೊತ್ತಿರಲಿಲ್ಲವೆಂದು ಸ್ಪಷ್ಟವಾಗಿ ೧ ನಿರಾಕರಿಸಿದ್ದಾನೆ.ಸ್ಥಳದಲ್ಲಿ 1 ಹಾಗೂ 2 ನೇ ಆಪಾದಿತರನ್ನು ನೋಡಿದ್ದ ಪಿ.ಡಬ್ಲ್ಯೂ -4 ರ ಸಾಕ್ಷ್ಯವನ್ನು ನಂಬದಿರುವುದಕ್ಕೆ ಪಿ.ಡಬ್ಲ್ಯೂ .4 ರ ಬಾಯಿಯಿಂದ ಬೇರೇನೂ ಪ್ರಕಟವಾಗಿರುವುದಿಲ್ಲ.ಪ್ರತಿವಾದಿ ಕೂಡ, 3 ನೇ ಆಪಾದಿತನಿಗೆ ಸೇರಿದ ಆಟೋರಿಕ್ಷಾದಲ್ಲಿ ಮೃತಳ ಮೃತದೇಹವನ್ನು ಸಾಗಿಸಿರುವ ಸಂಗತಿಯಲ್ಲಿ ಯಾವುದೇ ವಿವಾದ ಇರುವುದಿಲ್ಲ.

42. ಗಮನಕ್ಕೆ ತೆಗೆದುಕೊಳ್ಳಬೇಕಾದ ಮತ್ತೊಂದು ಸನ್ನಿವೇಶದ ಸರಣಿ ಯಾವುದೆಂದರೆ, 1 ನೇ ಆಪಾದಿತನು ಆಸ್ಪತ್ರೆಗೆ ಹೋಗಿ ಹಾಸನದಲ್ಲಿರುವ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದು.ಏಕೆಂದರೆ ಮೇಲೆ ಉಲ್ಲೇಖಿಸಲಾದ ತೀರ್ಪುಗಳಲ್ಲಿ ಎಂದರೆ ಜಸ್ಪಾಲ್ ಸಿಂಗ್, ಪೊಲೀಸು ಉಪನಿರೀಕ್ಷಕರು -ವಿರುದ್ಧ ಪಂಜಾಬ್

ರಾಜ್ಯ (ಮೇಲೆ ಹೇಳಿದ) ಮೊಕದ್ದಮೆ ಹಾಗೂ ಕರ್ನಾಟಕ ರಾಜ್ಯ-ವಿರುದ್ಧ– ಸುವರ್ಣಮ್ಮ ಹಾಗೂ ಮತ್ತೊಬ್ಬರು (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಆಪಾದಿತನ ನಡತೆಯು ತುಂಬಾ ಪ್ರಮುಖವಾಗಿರುತ್ತದೆಯೆಂದು ಅಭಿಪ್ರಾಯಪಟ್ಟಿರುತ್ತದೆ.ಗಾಯಾಳುವಿಗೆ ಚಿಕಿತ್ಸೆ ನೀಡಿರುವ ವೈದ್ಯರನ್ನು ಪಿ.ಡಬ್ಲ್ಯೂ .28 ರ ಎಂದು ನ್ಯಾಯಾಲಯದ ಮುಂದೆ ವಿಚಾರಣೆ ಮಾಡಲಾಗಿದೆ.ಪಿ.ಡಬ್ಲ್ಯೂ .28 ರ ಸಾಕ್ಷ್ಯದಿಂದ, 1 ನೇ ಆಪಾದಿತನು ಸ್ವಯಂ ಆಗಿ ಆಸ್ಪತ್ರೆಗೆ ಬಂದಿರುವುದು ಹಾಗೂ ತನಗೆ ಅಪಘಾತವಾಯಿತೆಂದು ಹೇಳಿರುವುದು ಸ್ಪಷ್ಟವಾಗುತ್ತದೆ.ಪರೀಕ್ಷಿಸಿದ ನಂತರ ಅವನಿಗೆ ಯಾವುದೇ ಬಾಹ್ಯ ಗಾಯಗಳು ಕಂಡುಬಂದಿಲ್ಲ.ಆದರೆ, 2 ನೇ ಆಪಾದಿತನೇ ಅವನ ಸ್ನಾಯುಗಳಲ್ಲಿ ನೋವಿದೆಯೆಂದು ಹೇಳಿದಿನಾಂಕ: 19-07-2009 ರಿಂದ 21-07-2009 ರವರೆಗೆ ಎರಡು ದಿನಗಳವರೆಗೆ ಒಳರೋಗಿಯಾಗಿದ್ದನು ಎಂದು ಕ್ಲೇಮು ಮಾಡಿದ್ದಾನೆ.ಪಿ.ಡಬ್ಲ್ಯೂ..28 ರ ಪಾಟೀ-ಸವಾಲಿನಲ್ಲಿ ಪೊಲೀಸರ ಸೂಚನೆಯಂತೆ ನಿಶಾನೆ ಪಿ .31 ನ್ನು ನೀಡಲಾಗಿದೆಯೆಂದು ಹಾಗೂ ಇದು ತಪ್ಪು ದಸ್ತಾವೇಜಾಗಿದೆಯೆಂದು ಸೂಚನೆ ನೀಡಿ ಇದನ್ನು ವೈದ್ಯರು ನಿರಾಕರಿಸಿದ್ದುದನ್ನು ಹೊರತುಪಡಿಸಿದರೆ ಬೇರೇನನ್ನು ಬಹಿರಂಗಪಡಿಸಿರುವುದಿಲ್ಲ.ನಿಶಾನೆ ಪಿ .31 ನ್ನು ಸೃಜಿಸಲಾಗಿದೆಯೆಂದು ಸೂಚನೆ ನೀಡಿರುವುದನ್ನು ಹೊರತುಪಡಿಸಿದರೆ, 1 ನೇ ಆಪಾದಿತನಿಗೆ ನೀಡಿದ ಚಿಕಿತ್ಸೆಯ ಬಗ್ಗೆ ಯಾವುದೇ ವಿವಾದವಿಲ್ಲ.೧

43. ಮೃತಳು ಸ್ಥಳದಲ್ಲಿ ಮರಣ ಹೊಂದಿದ್ದಾಗ 1 ನೇ ಆಪಾದಿತನಿಗೆ ಯಾವುದೇ ಬಾಹ್ಯ ಗಾಯಗಳಾಗಿಲ್ಲ ಎಂಬುದನ್ನು ಹಾಗೂ ಅವನು ಆಸ್ಪತ್ರೆಗೆ ಹೋಗುವ ಅವಶ್ಯಕತೆ ಇರಲಿಲ್ಲವೆಂಬುದನ್ನು ಗಮನಿಸುವುದು ಯುಕ್ತವಾಗಿದೆ.ಅವರ ಪ್ರಕಾರ ಅದೊಂದು ಅಪಘಾತವಾಗಿತ್ತು.ಯಾವುದೇ ಗಾಯಗಳಿಲ್ಲದೆ ಎರಡು ದಿನಗಳವರೆಗೆ ಅವನು ಆಸ್ಪತ್ರೆಯಲ್ಲಿ ಉಳಿದಿದ್ದು, ಮೃತಳು ಅವನೊಂದಿಗೆ ನಿಶ್ಚಿತಾರ್ಥ ಮಾಡಿಕೊಂಡಿದ್ದ ವ್ಯಕ್ತಿಯಲ್ಲದೆ ಬೇರಾರೂ ಅಲ್ಲ ಎಂಬ ಸಂಗತಿಯಾಗಿರುವುದರಿಂದ, ಆಪಾದಿತನ ಸದ್ಯದ ನಡತೆಯು ಪ್ರಮುಖವಾದುದಾಗಿದೆ.ಅಂಥ ಯಾವುದೇ ನಿಶ್ಚಿತಾರ್ಥವಾಗಿರುವುದರಲ್ಲಿ ಪ್ರತಿವಾದ ವಿವಾದವಿದ್ದರೂ ಕೂಡ ಮೃತಳ ಸಹೋದರಿಯಾದ ಪಿ.ಡಬ್ಲ್ಯೂ .6 ರ ಪಾಟೀ-ಸವಾಲಿನಲ್ಲಿ, 1 ನೇ ಆಪಾದಿತನು ತನ್ನ ಸಹೋದರಿಯನ್ನು ವಿವಾಹವಾಗುವ ಉದ್ದೇಶ ಹೊಂದಿದ್ದಾಗ, ವಿವಾಹ ಮಾತುಕತೆಯೂ ನಡೆದಿತ್ತು ಎಂಬ ಸೂಚನೆಯನ್ನು ನೀಡಿದ್ದು, ಮೃತಳ ಪೋಷಕರು, ಸದರಿ ಒಪ್ಪಿಗೆಯ ಬಗ್ಗೆ ತನ್ನ ಪತಿಯನ್ನು ವಿಚಾರಿಸಿದ್ದು, ಪ್ರತಿವಾದಿಯಿಂದಲೇ ಪಿ.ಡಬ್ಲ್ಯೂ .1 ರಿಂದ ಈ ಉತ್ತರಗಳನ್ನು ಬಹಿರಂಗಪಡಿಸಿದ್ದು, ಪ್ರಸ್ತುತ ಸೂಚನೆಯು, 1 ನೇ ಆಪಾದಿತ ಹಾಗೂ ಮೃತಳ ನಡುವೆ ವಿವಾಹದ ಮಾತುಕತೆ ನಡೆದಿದ್ದವು ಎಂಬುದು ಸ್ಪಷ್ಟವಾಗಿ ಪ್ರಕಟವಾಗಿರುತ್ತದೆ.ಹೀಗಾಗಿ ಸದ್ಯದ ಪ್ರತಿವಾದವು, ಅಂಥ ನಿಶ್ಚಿತಾರ್ಥವನ್ನು ಸಮ್ಮತಿಸಲು ಸಾಧ್ಯವಾಗುವುದಿಲ್ಲ ಎಂಬುದಾಗಿತ್ತು.ಮೃತಳು ಆಪಾದಿತನೊಂದಿಗೆ ಇದ್ದಾಗ ಹಾಗೂ ನಿಶಾನೆ ಪಿ .28 ಮರಣೋತ್ತರ ಪರೀಕ್ಷೆ ವರದಿಯಲ್ಲಿ ಸೂಚಿಸಲಾಗಿರುವ ಎಂದರೆ 10 ರಷ್ಟು ಅವಳಿಗೆ ಗಾಯಗಳಾಗಿದ್ದು, ಹಿಂದಲೆಯ ಪ್ರದೇಶದಲ್ಲಿ ಮುರಿತವಾಗಿರುವಾಗ, 1 ನೇ ಆಪಾದಿತನು ಅವಳನ್ನು ಆಸ್ಪತ್ರೆಗೆ ಸಾಗಿಸುವುದಾಗಲಿ ಅಥವಾ ಮೃತದೇಹವನ್ನು ಕೊಂಡೊಯ್ಯುವುದಾಗಲಿ ಯಾವ ಪ್ರಯತ್ನಗಳನ್ನೂ ಮಾಡದೆ, ಬದಲಾಗಿ, ತಾನೇ ಆಸ್ಪತ್ರೆಯಲ್ಲಿ ಸೇರಿಕೊಂಡಿದ್ದಾನೆ.ಆಪಾದಿತನ ಸದ್ಯದ ನಡತೆಯು ಸಂದೇಹಾಸ್ಪದವಾಗಿದ್ದು, ಸಾಂದರ್ಭಿಕ ಸಾಕ್ಷ್ಯದ ಸಂದರ್ಭದಲ್ಲಿ ಆಪಾದಿತನ ನಡತೆಯನ್ನು ಕೂಡ ನೋಡಬೇಕಾಗುತ್ತದೆ.ಸಾಕ್ಷ್ಯ ಅಧಿನಿಯಮದ 106 ನೇ ಪ್ರಕರಣದ ಮೇರೆಗೆ ಏನಾಗಿದೆ ಹಾಗೂ ಯಾವಾಗ ಮೃತಳು ಅವನೊಂದಿಗಿದ್ದಳು ಎಂಬುದರ ಬಗ್ಗೆ ವಿವರಣೆ ನೀಡುವುದು ಆಪಾದಿತನಿಗೆ ಸಂಬಂಧಿಸಿದ್ದಾಗಿದೆ ಹಾಗೂ ಅವರಿಬ್ಬರೂ ಒಟ್ಟಿಗೆ ಇರಲಿಲ್ಲ ಎಂಬುದು ಕೂಡ

ಪ್ರತಿವಾದ ವಿಷಯವಾಗುವುದಿಲ್ಲ.ಪಿ.ಡಬ್ಲ್ಯೂ .28, ನೇರವಾಗಿ, ಅವನು, ಅಪಘಾತದ ವೃತ್ತಾಂತದೊಂದಿಗೆ ಬಂದು ಆಸ್ಪತ್ರೆಗೆ ಸೇರಿಕೊಂಡಿರುವುದನ್ನು ಸ್ಪಷ್ಟವಾಗಿ ತಿಳಿಸಿದ್ದಾನೆ ಹಾಗೂ ಆಪಾದಿತನು, ತನಗೆ ಅಪಘಾತವಾಗಿದ್ದರೆ ಹೇಗೋ ಹಾಗೆ ನಟಿಸಿದ್ದಾನೆ.1 ನೇ ಹಾಗೂ 2 ನೇ ಹಾಗೆಯೇ 3 ನೇ ಆಪಾದಿತರ ನಡುವೆ ಮಾಡಲಾದ ಫೋನ್ ಕರೆಗಳು, ಕೊಲೆಯನ್ನು ಮಾಡಿರುವ ಘಟನೆಯಾದ ಕೂಡಲೇ ಅವನು 2 ನೇ ಆಪಾದಿತನಿಗೆ ಕರೆಮಾಡಿ ಹಾಗೆಯೇ 3 ನೇ ಆಪಾದಿತರಿಗೆ ಕರೆ ಮಾಡಿರುವುದನ್ನು ಸ್ಪಷ್ಟಪಡಿಸುತ್ತವೆ.ಪ್ರತಿವಾದಿ ನ್ಯಾಯವಾದಿಗಳು, ನಿಶಾನೆ ಪಿ .58 ಯಾವುದೇ ದೃಢೀಕರಣ ಮಾಡಿರದ ದಸ್ತಾವೇಜಾಗಿದೆ ಎಂಬ ವಿವಾದವೆತ್ತಿದ್ದರೂ ಕೂಡ, ಫೋನ್ ಕರೆ ಮಾಡಿರುವ ಸಂಬಂಧ ಅದರಲ್ಲೂ ನಿರ್ದಿಷ್ಟವಾಗಿ, ಪ್ರಾ.ಸಾ .30, ಪಿ.ಡಬ್ಲ್ಯೂ .1 ಕ್ಕೆ ಆಗಲಿ ಅಥವಾ 2 ಹಾಗೂ 3 ನೇ ಆಪಾದಿತನಾಗಲಿ 1 ನೇ ಆಪಾದಿತನು ಫೋನ್ ಕರೆಗಳನ್ನು ಮಾಡಿರಲಿಲ್ಲವೆಂದು ತನಿಖಾಧಿಕಾರಿಗೆ ಸೂಚನೆಯನ್ನು ನೀಡಿರಲಿಲ್ಲವೆಂಬ ಸಾಕ್ಷಿದಾರರ ಪಾಟೀ-ಸವಾಲಿನಲ್ಲಿಯೂ ಕೂಡ ಆಪಾದಿತನ ಕಡೆಯಿಂದ ಯಾವುದೇ ವಿವರಣೆ ನೀಡಿರುವುದಿಲ್ಲ.ಅಷ್ಟೇ ಅಲ್ಲದೆ, 2 ನೇ ಹಾಗೂ 3 ನೇ ಆಪಾದಿತರು ಹೇಗೆ ಸ್ಥಳಕ್ಕೆ ಬಂದರು ಹಾಗೂ ಇದರ ಬಗ್ಗೆ ಯಾರು ಮಾಹಿತಿ ನೀಡಿದರು ಎಂಬ ಬಗ್ಗೆ 1 ರಿಂದ 3 ರವರೆಗಿನ ಆಪಾದಿತರ ಕಡೆಯಿಂದ ಯಾವುದೇ ವಿವರಣೆ ನೀಡಿರುವುದಿಲ್ಲವೆಂಬುದನ್ನು ಗಮನಿಸುವುದು ಯುಕ್ತವಾಗಿದೆ.ಆಪಾದಿತನು, 313 ಹೇಳಿಕೆಯಲ್ಲೂ ಕೂಡ, 2 ನೇ ಹಾಗೂ 3 ನೇ ಆಪಾದಿತರು ಹೇಗೆ ಸ್ಥಳಕ್ಕೆ ಬಂದರು ಎಂಬುದಕ್ಕೆ ಸಂಬಂಧಿಸಿದಂತೆ ಏನನ್ನೂ ಹೇಳಿರುವುದಿಲ್ಲ.ನಾವು, ಈಗಾಗಲೇ ವೈದ್ಯಕೀಯ ಸಾಕ್ಷ್ಯದ ಪ್ರಕಾರ ಇದು ಕೊಲೆ ಪ್ರಕರಣ ಆಗಿದ್ದು, ಅಪಘಾತದಿಂದ ಆದ ಸಾವಲ್ಲವೆಂದು ಎತ್ತಿ ತೋರಿಸಿದ್ದೇವೆ.

1 ನೇ ಆಪಾದಿತನು ಗಾಯಾಳುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಿಲ್ಲ ಹಾಗೂ ಆಸ್ಪತ್ರೆಗೆ ಗಾಯಾಳುವನ್ನು ಕರೆದೊಯ್ಯದೆ ಇರುವುದಕ್ಕೆ ಪ್ರಸ್ತುತ ಕಾರಣವೇನೆಂದರೆ ತಾನು ಕೊಲೆಯನ್ನು ಮಾಡಿರುವ ಅವಳು ಸಾವನ್ನಪ್ಪಿದ್ದಾಳೆ ಎಂಬುದು ದೃಢವಾಗಿದ್ದು, ಬದಲಾಗಿ, ಅಪಘಾತವಾಗಿತ್ತೆಂದು ಸ್ಥಳದಲ್ಲಿ ಅವನು ನಟಿಸಿದ್ದಾನೆ.ಅವನು 2 ನೇ ಆಪಾದಿತನಿಗೆ ದೂರವಾಣಿ ಕರೆಗಳನ್ನು ಮಾಡಿದ್ದಾನೆ.ಹಾಗೂ 1 ನೇ ಆಪಾದಿತನಿಗೆ ನೀರನ್ನು ಕೊಡಲು 2 ನೇ ಆಪಾದಿತನಿಗೆ ಸಹಾಯ ಮಾಡಿರುವ ಪಿ.ಡಬ್ಲ್ಯೂ .4, 1 ನೇ ಹಾಗೂ 2 ನೇ ಆಪಾದಿತರು ಅಲ್ಲಿದ್ದುದನ್ನು ಗುರುತಿಸಿದ್ದಾನೆ.ನಮ್ಮ ಮುಂದಿರುವ ಮೊಕದ್ದಮೆಯಲ್ಲಿ 1 ನೇ ಆಪಾದಿತನು ಬಂದು ಮೋಟಾರು ಸೈಕಲ್ನಲ್ಲಿ ಮೃತಳನ್ನು ಕರೆದುಕೊಂಡು ಹೋಗಿರುವುದನ್ನು ಪಿ.ಡಬ್ಲ್ಯೂ.ಹಾಗೂ 6 ತಿಳಿಸಿದ್ದು, ಮೃತಳು 1 ನೇ ಆಪಾದಿತನೊಂದಿಗೆ ಇದ್ದುದನ್ನು ದೃಢಪಡಿಸಿದ್ದಾರೆ.ಘಟನೆಯು ಮಧ್ಯಾಹ್ನ 2 ರಿಂದ 3 ಗಂಟೆ ನಡುವೆ ನಡೆದಿದ್ದು, 2 ನೇ ಆಪಾದಿತನು, 1 ನೇ ಆಪಾದಿತನ ಫೋನ್ ಕರೆಯ ಆಧಾರದ ಮೇಲೆ ಸಾಯಂಕಾಲ 4 ಗಂಟೆಗೆ ಸ್ಥಳಕ್ಕೆ ಹೋಗಿದ್ದು, ಪಿ.ಡಬ್ಲ್ಯೂ .1 ಕ್ಕೆ ಫೋನ್ ಕರೆ ಮಾಡಿದ್ದು, ಅಪಘಾತದ ಬಗ್ಗೆ ಹಾಗೂ ಮೃತಳು ಸಾವನ್ನಪ್ಪಿರುವ ಬಗ್ಗೆ ಂ ತಿಳಿಸಿರುತ್ತಾನೆ.2 ನೇ ಆಪಾದಿತನಿಗೆ ಪಿ.ಡಬ್ಲ್ಯೂ .1 ರ ದೂರವಾಣಿ ಸಂಖ್ಯೆ ಹೇಗೆ ಗೊತ್ತಾಯಿತು ಎಂಬ ಬಗ್ಗೆಯೂ ಆಪಾದಿತನ ಕಡೆಯಿಂದ ಯಾವುದೇ ವಿವರಣೆ ಬಂದಿರುವುದಿಲ್ಲ.ಪಾಟೀ-ಸವಾಲಿನಲ್ಲಿ ವಾದಿಸಿರುವಂತೆ ಮೋಟಾರು ಸೈಕಲ್ನಲ್ಲಿ 1 ನೇ ಆಪಾದಿತನು ಮೃತಳನ್ನು ತನ್ನೊಟ್ಟಿಗೆ ಕರೆದುಕೊಂಡು ಹೋಗಿರದಿದ್ದರೆ, 1 ನೇ ಹಾಗೂ 2 ನೇ ಆಪಾದಿತರಿಗೆ ಪಿ.ಡಬ್ಲ್ಯೂ .1 ರ ದೂರವಾಣಿ ಸಂಖ್ಯೆ ಹೇಗೆ ಗೊತ್ತಾಗಿರಬಹುದು ಎಂಬ ಬಗ್ಗೆ ಅವರು ಯಾವುದೇ ವಿವರಣೆ ನೀಡಿರುವುದಿಲ್ಲ.

44. ಅದೂ ಅಲ್ಲದೆ, 1 ನೇ ಆಪಾದಿತನು, ಪಿ.ಡಬ್ಲ್ಯೂ.1 ಹಾಗೂ 6 ರ ದೂರವಾಣಿ ಕರೆಗೆ ಕರೆಮಾಡಿ " ಎಂಬ ಸಂದೇಶಕ್ಕೆ ಯಾವುದೇ ಪ್ರತ್ಯುತ್ತರ ನೀಡಿಲ್ಲ, ಬದಲಾಗಿ 1 ನೇ ಆಪಾದಿತನು ಸ್ವತಃ ತಾನೇ ಆಸ್ಪತ್ರೆಗೆ ಹೋಗಿ

ದಾಖಲಾಗಿದ್ದಾನೆ.ಅಷ್ಟೇ ಅಲ್ಲದೆ, ಪಾಟೀ-ಸವಾಲಿನಲ್ಲಿ ಪಿ.ಡಬ್ಲ್ಯೂ .1 ರೊಂದಿಗೆ ಮೃತಳಿಗೆ ತುಂಬಾ ನಿಕಟ ಸಂಪರ್ಕವಿದ್ದು, ಅವನು ಸದರಿ ನಿಶ್ಚಿತಾರ್ಥವನ್ನು ಮುರಿಯಲು ಆಸಕ್ತಿ ಹೊಂದಿದ್ದರು ಎಂಬ ಸೂಚನೆಯನ್ನು ನೀಡಿದ್ದು, ಅಷ್ಟೇ ಅಲ್ಲದೆ, ಪಿ.ಡಬ್ಲ್ಯೂ .7 ರ ಪಾಟೀ-ಸವಾಲಿನಲ್ಲಿ ಪ್ರತಿವಾದವು ಘಟನೆ ನಡೆದ ದಿನಾಂಕದಂದು, ಪಿ.ಡಬ್ಲ್ಯೂ.ಹಾಗೂ 6 ರ ನಡುವೆ ಗಲಾಟೆ ನಡೆದಿದ್ದು, ಮೃತಳ ತಲೆಗೆ ಪೆಟ್ಟಾಗಿದೆಯೆಂದು ಸೂಚನೆ ನೀಡುವಷ್ಟರಮಟ್ಟಿಗೆ ಹೋಗಿದ್ದು, ಇದನ್ನು ಪಿ.ಡಬ್ಲ್ಯೂ .7 ನೇರವಾಗಿ ನಿರಾಕರಿಸಿದ್ದಾನೆ, ಮೃತಳಿಗೆ ಹಿಂದಲೆಯ ಪ್ರದೇಶದಲ್ಲಿ ಮೂಳೆ ಮುರಿತವಾಗಿರುವುದನ್ನು ಒಳಗೊಂಡಂತೆ ಹೇಗೆ ಹತ್ತು ಬಾಹ್ಯ ಗಾಯಗಳಾದವು ಎಂಬ ಬಗ್ಗೆ ಯಾವುದೇ ವಿವರಣೆಯನ್ನು ನೀಡಿಲ್ಲ ಎಂಬುದನ್ನು ಗಮನಿಸುವುದು ಮತ್ತಷ್ಟು ಪ್ರಮುಖವಾಗಿದೆ.ತಪ್ಪು ಪ್ರತಿವಾದವನ್ನು ತೆಗೆದುಕೊಂಡಿದ್ದರಿಂದ, ಪ್ರಾಸಿಕ್ಯೂಷನ್ನ ಸಾಂದರ್ಭಿಕ ಸಾಕ್ಷ್ಯಕ್ಕೆ ಹೆಚ್ಚು ಸಂಬಂಧಪಟ್ಟಿರುವ ಪಿ.ಡಬ್ಲ್ಯೂ .1 ರ ಮನೆಯಲ್ಲಿ ಮೃತಳ ಮೇಲೆ ಯಾವ ಆಯುಧದಿಂದ ಹಲ್ಲೆ ಮಾಡಲಾಗಿತ್ತು ಎಂಬ ಬಗ್ಗೆ ಯಾವುದೇ ಪ್ರತಿವಾದ ಇರುವುದಿಲ್ಲ.ಒಮ್ಮೆ ಆತ್ಮಹತ್ಯೆ ಕಾರಣದಿಂದ ಸಾವಾಗಿದೆಯೆಂದು ಮತ್ತೊಮ್ಮೆ ಪಿ.ಡಬ್ಲ್ಯೂ .1 ರ ಹಾಗೂ 6 ರ ನಡುವೆ ಗಲಾಟೆ ನಡೆದಾಗ ಅವಳಿಗೆ ಗಾಯವಾಗಿದೆ ಎಂದು ವಾದಿಸಲಾಗಿದೆ.ಆದರೆ, ಈ ಅಭಿಪ್ರಾಯಕ್ಕೆ ಯಾವುದೇ ಸಮರ್ಪಕ ಸಾಕ್ಷ್ಯಾಧಾರವನ್ನು ಹಾಜರುಪಡಿಸಿಲ್ಲ.ಪಿ.ಡಬ್ಲ್ಯೂ .27 ಎಂದು ವಿಚಾರಣೆ ಮಾಡಲಾಗಿರುವ ವೈದ್ಯರ ಸಾಕ್ಷ್ಯದಲ್ಲಿ, ಕುತ್ತಿಗೆಯ ಮೇಲೆ ಬಂಧಕ ರಜ್ಜುಗೆ ಒತ್ತಡ ಉಂಟಾದ ಪರಿಣಾಮ ಉಸಿರುಗಟ್ಟಿದ ಹಾಗೂ ತಲೆಗೆ ಪೆಟ್ಟಾದ ತರುವಾಯ ಕೋಮಾದಿಂದ ಸಾವು ಸಂಭವಿಸಿದ್ದರಿಂದ ಹತ್ಯೆಯ ಸಾವಿನ ಪ್ರಕರಣವಾಗಿದೆಯೆಂಬುದು ಸ್ಪಷ್ಟವಾಗಿದೆ.ಎರಡು ಘಟನೆಗಳ ನಡುವಿನ ಸಮಯದ ಅಂತರ ತುಂಬಾ ಕಡಿಮೆಯಿರುವುದರಿಂದ ಕುತ್ತಿಗೆ ಮೇಲೆ ಆದ ಒತ್ತಡ ಬೇಗನೇ ಆಗಿದೆಯೇ ಅಥವಾ ತಲೆಗೆ ಗಾಯ ಮೊದಲಾಗಿದೆಯೇ ಎಂಬುದನ್ನು ಅವರು ಹೇಳಲು ಸಾಧ್ಯವಿಲ್ಲವೆಂದು ಪಿ.ಡಬ್ಲ್ಯೂ .27 ಹೇಳಿರುವುದನ್ನು ಗಮನಿಸುವುದು ಇನ್ನಷ್ಟು ಪ್ರಮುಖವಾಗಿದೆ.ಹೀಗಾಗಿ, ತಲೆಗೆ ಗಾಯವಾಗಿರುವುದು ಹಾಗೆಯೇ ಕುತ್ತಿಗೆ ಮೇಲೆ ಒತ್ತಡವಾಗಿರುವುದು ಒಂದೇ ಬಾರಿಗೆ ಆಗಿದೆಯೆಂಬುದು ಸ್ಪಷ್ಟವಾಗಿದೆ.ಇದರಿಂದ, 1 ನೇ ಆಪಾದಿತನು ಮಾಡಿದ ಕೊಲೆಯು ಸ್ಪಷ್ಟ ಪ್ರಕರಣವಾಗಿದ್ದು, ಇದಾದ ನಂತರ ಅವನು, ಇದು ಅಪಘಾತವೆಂಬಂತೆ ನಟಿಸಿ, 1 ಹಾಗೂ 3 ನೇ ಆಪಾದಿತರನ್ನು ಸ್ಥಳಕ್ಕೆ ಕರೆದಿದ್ದಾರೆ.

1 ನೇ ಆಪಾದಿತನು, ಯಾವುದೇ ಬಾಹ್ಯ ಗಾಯಗಳಾಗದಿದ್ದರೂ ಕೂಡ ಯಾವುದೇ ಕಾರಣವಿಲ್ಲದೆ, ಚಿಕಿತ್ಸೆ ಪಡೆಯಲು ಆ ಸ್ಥಳದಿಂದ ಹೊರಟಿದ್ದ ಹಾಗೂ ಎರಡು ದಿನಗಳವರೆಗೆ ಆಸ್ಪತ್ರೆಯಲ್ಲಿ ಒಳರೋಗಿಯಾಗಿದ್ದ.ಅದೂ ಅಲ್ಲದೆ, ಪೊಲೀಸರೂ ಅವಳ ತಲೆಗೆ ಹೊಡೆಯಲು ಬಳಸಿದ್ದ ಕಲ್ಲನ್ನು ಕೂಡ 1 ನೇ ಆಪಾದಿತನ ಸೂಚನೆ ಮೇರೆಗೆ ಸ್ವಾಧೀನಕ್ಕೆ ತೆಗೆದುಕೊಂಡಿರುವರು.1 ನೇ ಆಪಾದಿತನ ಸೂಚನೆ ಮೇರೆಗೆ ಪೊದೆಯ ಬಳಿಯಿದ್ದ ಕಲ್ಲನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ವಿಷಯದಲ್ಲಿ ಮಹಜರು ಸಾಕ್ಷಿದಾರರಾದ ಪಿ.ಡಬ್ಲ್ಯೂ -20 ಹಾಗೂ 21 ಸಹ ಬೆಂಬಲಿಸಿದ್ದಾರೆ.ಪಿ.ಡಬ್ಲ್ಯೂ .30 ರ ಸಾಕ್ಷ್ಯ ಎ ಹಾಗೂ ಮಹಜರು ಸಾಕ್ಷಿದಾರರು ಆಪಾದಿತನ ಸೂಚನೆಯಂತೆ ಕಲ್ಲನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಾಯಿತೆಂದು ನೇರವಾಗಿ ಹೇಳಿದ್ದಾರೆ.2 ನೇ ಆಪಾದಿತನ ಸೂಚನೆ ಮೇರೆಗೆ ಮೊಬೈಲ್ ಕೂಡ ಸ್ವಾಧೀನಕ್ಕೆ ತೆಗೆದುಕೊಳ್ಳಲಾಗಿದೆ.ನಿಶಾನೆ ಪಿ .58 ರ ಅನುಸಾರ ಫೋನ್ ವಿವರಗಳನ್ನು ಸಂಗ್ರಹಿಸಲಾಗಿದೆ.ನಿಶಾನೆ ಪಿ .58 ರ ಅವಗಾಹನೆಯಿಂದ, ಮೃತಳು, 1 ನೇ ಆಪಾದಿತನ ಮೊಬೈಲ್ನಿಂದ ಮಧ್ಯಾಹ್ನ 1.20 ರಲ್ಲಿ ಪಿ.ಡಬ್ಲ್ಯೂ .1 ಕ್ಕೆ ಕರೆ ಮಾಡಿರುವುದನ್ನು ಹಾಗೆಯೇ 1 ನೇ ಆಪಾದಿತನ ಮೊಬೈಲ್ಗೆ ಸಂದೇಶಗಳನ್ನು ಕಳಿಸಿರುವುದನ್ನು ದೃಢಪಡಿಸುತ್ತದೆ, ಹಾಗೇ ಮುಂದುವರಿದು, 1 ನೇ ಆಪಾದಿತನು ಬೆಳಿಗ್ಗೆ 9.28 ರಲ್ಲಿ ಪಿ.ಡಬ್ಲ್ಯೂ .1 ಕ್ಕೆ ಕರೆ ಮಾಡಿ, ಬೆಳಿಗ್ಗೆ 10.30 ರಲ್ಲಿ ಮೃತಳನ್ನು

ಕರೆದುಕೊಂಡು ಹೋಗಿರುವುದನ್ನು ೧ ಬೆಂಬಲಿಸುತ್ತದೆ.ಅಷ್ಟೇ ಅಲ್ಲದೆ, ಮಧ್ಯಾಹ್ನ 1.30 ರಲ್ಲಿ ಪಿ.ಡಬ್ಲ್ಯೂ.1 ಹಾಗೂ ಪಿ.ಡಬ್ಲ್ಯೂ -6 ಕ್ಕೆ ಫೋನ್ ಮಾಡಿದ್ದನ್ನು ಫೋನ್ ಕರೆ ದೃಢಪಡಿಸುತ್ತದೆ.ಅವರು ಮನೆಗೆ ಹಿಂತಿರುಗಿ ಬರದಿದ್ದಾಗ, 1 ನೇ ಆಪಾದಿತನಿಗೆ ಪಿ.ಡಬ್ಲ್ಯೂ.1 ಹಲವಾರು ಕರೆಗಳನ್ನು ಮಾಡಿದ್ದು, ಅವುಗಳಿಗೆ ಉತ್ತರಿಸಿರಲಿಲ್ಲ.ಈ ಎಲ್ಲಾ ನಡವಳಿಕೆ, 1 ನೇ ಆಪಾದಿತನು ಮೃತಳನ್ನು ಕೊಲೆ ಮಾಡಿರುವುದನ್ನು ಹಾಗೂ ಇದು ಅಪಘಾತವಾಗಿತ್ತೆಂದು ನಟಿಸಿ, ಸಾಕ್ಷ್ಯವನ್ನು ಮುಚ್ಚಿಹಾಕಲು ಪ್ರಯತ್ನಿಸಿರುವುದನ್ನು ಹಾಗೂ ಫೋನ್ ಮುಖಾಂತರ 2 ಹಾಗೂ 3 ನೇ ಆಪಾದಿತರಿಗೆ ಕರೆ ಮಾಡಿ ಮಾಹಿತಿ ನೀಡಿರುವುದನ್ನು ಬಹಿರಂಗಪಡಿಸುತ್ತದೆ ಹಾಗೂ 2 ಹಾಗೂ 3 ನೇ ಆಪಾದಿತರು ಮೃತಳ ತಂದೆ-ತಾಯಿಯ ಮನೆಗೆ ಮೃತದೇಹವನ್ನು ಸಾಗಿಸಿರುವ ಸಂಗತಿಯಲ್ಲಿಯೂ ಕೂಡ ಯಾವುದೇ ಸಂದೇಹವಿರುವುದಿಲ್ಲ.

45. ದಾಖಲೆಯಲ್ಲಿರುವ ಸಾಕ್ಷ್ಯಾಧಾರವನ್ನು ಎಂದರೆ, ಸ್ಥಳದಲ್ಲಿ 1 ನೇ ಹಾಗೂ 2 ನೇ ಆಪಾದಿತರನ್ನು ಗುರುತಿಸಿರುವ ಪಿ.ಡಬ್ಲ್ಯೂ .1, 4 ಹಾಗೂ 6 ಇವರ ಸಾಕ್ಷ್ಯ, ಇದರ ಜೊತೆಗೆ ಪಿ.ಡಬ್ಲ್ಯೂ .27 ಹಾಗೂ 28 ರ ವೈದ್ಯಕೀಯ ಸಾಕ್ಷ್ಯ, ಸ್ವಾಧೀನಕ್ಕೆ ತೆಗೆದುಕೊಂಡಿರುವುದು, ಮೃತಳ ಕೊಲೆ ಮಾಡಿರುವುದಕ್ಕೆ ಸಂಬಂಧಿಸಿದ ಉದ್ದೇಶಗಳನ್ನು ಪರಿಗಣಿಸಿ, ಮೃತಳು ಹಾಗೂ 1 ನೇ ಆಪಾದಿತನು ಕೊನೆಯಲ್ಲಿ ಒಟ್ಟಿಗೆ ಕಂಡುಬಂದಿರುವುದರಿಂದ 1 ನೇ ಆಪಾದಿತನ ವಿರುದ್ಧ ನಿಸ್ಸಂದೇಹವಾಗಿ ಪ್ರಕರಣವನ್ನು ಸಾಬೀತುಪಡಿಸಿದೆ.ಪ್ರಾಸಿಕ್ಯೂಷನ್ನು 1 ನೇ ಆಪಾದಿತನಿಗೆ ಪ್ರೇರಣೆಯಾದ ಸಂಗತಿಯನ್ನು ರುಜುವಾತುಪಡಿಸುವ ಸಲುವಾಗಿ ನ್ಯಾಯಾಲಯದ ಮುಂದೆ ಯಾವುದೇ ಸಾಕ್ಷಿದಾರರನ್ನು ವಿಚಾರಣೆ ಮಾಡದಿರುವುದರ ಬಗ್ಗೆ ಯಾವುದೇ ಸಂದೇಹವಿಲ್ಲ ಸುಖ್ಪಾಲ್ ಸಿಂಗ್ -ವಿರುದ್ಧ ಪಂಜಾಬ್ ರಾಜ್ಯ (ಮೇಲಿನ) ಮೊಕದ್ದಮೆಯಲ್ಲಿ ಮೇಲೆ ತಿಳಿಸಲಾದ ಇತ್ತೀಚಿನ ತೀರ್ಪಿನಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಚ ಸಾಂದರ್ಭಿಕ ಸಾಕ್ಷದ ಸಂದರ್ಭದಲ್ಲಿ ಪ್ರೇರಣೆಯು ಅವಶ್ಯಕವಾಗಿ ಬೇಕಾಗುತ್ತದೆಯೆಂದು ಅಭಿಪ್ರಾಯಪಟ್ಟಿದೆ.ಆದರೆ, ಅದೊಂದೇ ಏಕಮಾತ್ರ ಸಾಕ್ಷ್ಯಾಧಾರವಾಗಲು ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.ಇತರ ಸನ್ನಿವೇಶವು, ಪ್ರಾಸಿಕ್ಯೂಷನ್ನ ವಾದವನ್ನು ಬೆಂಬಲಿಸಿದಾಗ, ನ್ಯಾಯಾಲಯವು ಅದನ್ನು ನಿರ್ಧಾರ ಮಾಡಬೇಕಾಗುತ್ತದೆ.ಮುಂದುವರಿದು, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಸಾಂದರ್ಭಿಕ ಸಾಕ್ಷ್ಯವನ್ನು ಆಧರಿಸಿದ ಪ್ರಾಸಿಕ್ಯೂಷನ್ ಅಂಶದಲ್ಲಿ ಕಾರಣದ ಪ್ರಶ್ನೆಯು ಮಹತ್ವಪೂರ್ಣವಾಗಿ ಭಾವಿಸಬಹುದಾಗಿದ್ದು ನಿಸ್ಸಂದೇಹವಾದ ಸತ್ಯವಾಗಿದೆಯೆಂದು ಅಭಿಪ್ರಾಯಪಟ್ಟಿದೆ.ಆದರೆ ಸಾಂದರ್ಭಿಕ ಸಾಕ್ಷ್ಯದ ಸಂದರ್ಭದಲ್ಲಿ, ಕಾರಣವನ್ನು ರುಜುವಾತುಪಡಿಸುವಲ್ಲಿ ಪ್ರಾಸಿಕ್ಯೂಷನ್ ಕಡೆಯಿಂದಾದ ಅಸಾಮರ್ಥ್ಯವು ಪ್ರಾಸಿಕ್ಯೂಷನ್ ವಾದಕ್ಕೆ ಮಾರಕವಾಗುತ್ತದೆಯೇ ಎಂಬುದು ಪ್ರಶ್ನೆಯಾಗಿದೆ.ಅಪರಾಧವೆಸಗಲು ಆಪಾದಿತನಿಗೆ ಆದ ಪ್ರೇರಣಾ ಕಾರಣವನ್ನು ಪ್ರಾಸಿಕ್ಯೂಷನ್ ರುಜುವಾತುಪಡಿಸಿದರೆ, ಸಾಂದರ್ಭಿಕ ಸನ್ನಿವೇಶ ಆಧರಿಸಿದ ಪ್ರಾಸಿಕ್ಯೂಷನ್ ಹೇಳಿಕೆಯನ್ನು ಇದು ನಿಸ್ಸಂದೇಹವಾಗಿ ಬಲಪಡಿಸುತ್ತದೆ ಎಂಬುದು ಸತ್ಯಪೂರ್ಣವಾದುದಾಗಿದೆ, ಆದರೆ ಆಪಾದಿತನು ಅಪರಾಧ ಮಾಡಿದ್ದಕ್ಕೆ ಕಾರಣ ಇಲ್ಲದಿರುವುದು ಸಾಂದರ್ಭಿಕ ಸಾಕ್ಷ್ಯದ ರೂಪದಲ್ಲಿ ನ್ಯಾಯಾಲಯದ ಮುಂದೆ ಲಭ್ಯವಿರುವ ಇತರ ಸಾಕ್ಷ್ಯಾಧಾರವನ್ನು ಪರಿಗಣನೆಗೆ ತೆಗೆದುಕೊಳ್ಳದೆ, ಪ್ರಾಸಿಕ್ಯೂಷನ್ಗೆ ಮಾರಕವಾಗುತ್ತದೆ ಎಂದು ಹೇಳುವುದಕ್ಕಿಂತ ಭಿನ್ನವಾಗಿದೆ.

46. ನಮ್ಮ ಮುಂದಿರುವ ಮೊಕದ್ದಮೆಯಲ್ಲಿ, ನ್ಯಾಯಾಲಯದ ಮುಂದೆ ಲಭ್ಯವಿರುವ ಸಾಕ್ಷ್ಯಾಧಾರವು, 1 ನೇ ಆಪಾದಿತನ ನಿಜವಾದ ಪಾತ್ರವನ್ನು ಎತ್ತಿ ತೋರಿಸಿದ್ದು, ಮೇಲಿನ ನಿರ್ಣಯಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ಚ ಅಭಿಪ್ರಾಯಪಟ್ಟಿರುವಂತೆ ಆಪಾದಿತನ ನೈಜ ನಡವಳಿಕೆಯನ್ನು ಸಹ ಗಣನೆಗೆ

ತೆಗೆದುಕೊಳ್ಳಬೇಕಾಗಿದೆ.ಸಾಕ್ಷಿದಾರರ ಪಾಟೀ-ಸವಾಲಿನಲ್ಲಿ ತಪ್ಪು ವಾದವು, ಆಪಾದಿತನೇ ಕೊಲೆಮಾಡಿ, ತದನಂತರ, ಅಪಘಾತವಾಗಿತ್ತೆಂದು ಹೇಳಿ, ಮೃತಳ ಮೃತದೇಹವನ್ನು ಅವರ ಪೋಷಕರ ಮನೆಗೆ ಸ್ಥಳಾಂತರಿಸಿರುವ 2 ನೇ ಹಾಗೂ 3 ನೇ ಆಪಾದಿತರಿಗೆ ಕರೆ ಮಾಡಿ, ಸಿದ್ಧತೆ ಮಾಡಿಕೊಂಡು, ಸ್ಥಳದಿಂದ ಕಾಣೆಯಾಗಿರುವುದು ಪ್ರಾಸಿಕ್ಯೂಷನ್ ವಾದವನ್ನು ಬಲಗೊಳಿಸುವ ಹೆಚ್ಚುವರಿ ಸಂಗತಿಯಾಗಿದೆ.

47. ನ್ಯಾಯಾಲಯದ ಮುಂದೆ ಲಭ್ಯವಿರುವ ವಾಸ್ತವಿಕ ಸಾಕ್ಷ್ಯವನ್ನು ಚರ್ಚಿಸಿ, ಹಾಗೆಯೇ ಸುತ್ತಲಿನ ಸಾಂದರ್ಭಿಕ ಸಾಕ್ಷ್ಯವನ್ನು ಹಾಗೂ 313 ನೇ ಹೇಳಿಕೆಯಲ್ಲಿ ಆಪಾದಿತನ ಕಡೆಯಿಂದ ಯಾವುದೇ ವಿವರಣೆ ಇಲ್ಲದಿರುವುದನ್ನು ಗಣನೆಗೆ ತೆಗೆದುಕೊಂಡು, ನಾವು, 1 ನೇ ಆಪಾದಿತನ ವಿರುದ್ಧದ ವಾದವನ್ನು ರುಜುವಾತುಪಡಿಸಲು ಪ್ರಾಸಿಕ್ಯೂಷನ್ ಸಮರ್ಥವಾಗಿತ್ತೆಂದು ಹಾಗೂ ಅಧಿವಿಚಾರಣಾ ನ್ಯಾಯಾಲಯವು, ಮೌಖಿಕ ಹಾಗೂ ದಸ್ತಾವೇಜೀಯ ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯವನ್ನು ಪರಿಗಣಿಸುವಲ್ಲಿ ದೋಷವೆಸಗಿದೆಯೆಂದು ಹಾಗೂ ಇದು ಯಥಾದೃಷ್ಟಿಯಲ್ಲಿ ಇಲ್ಲವೆಂದು ಅಭಿಪ್ರಾಯಪಡುತ್ತೇವೆ.ನ್ಯಾಯಾಲಯದ ಮುಂದೆ ಅಪಾರ ಪ್ರಮಾಣದಲ್ಲಿ ಸಾಕ್ಷ್ಯ ಎ ಲಭ್ಯವಿದ್ದರೂ ಕೂಡ ಅಧಿವಿಚಾರಣಾ ನ್ಯಾಯಾಧೀಶರು, ಸರಿಯಾದ ದೃಷ್ಟಿಕೋನದಲ್ಲಿ ಸಾಕ್ಷ್ಯಾಧಾರವನ್ನು ವಿವೇಚಿಸದೇ ತಪ್ಪೆಸಗಿದ್ದಾರೆ ಎಂಬ ದೂರುದಾರರ ವಕೀಲರ, ಹಾಗೆಯೇ ರಾಜ್ಯ ವಕೀಲರ ವಾದದಲ್ಲಿ ಹುರುಳಿದೆ.ಯಾವ ಮೋಟಾರು ಸೈಕಲ್ನಲ್ಲಿ 1 ನೇ ಆಪಾದಿತ ಹಾಗೂ ಮೃತಳು ಪ್ರಯಾಣಿಸಿದ್ದರೋ ಅದಕ್ಕೆ ಯಾವುದೇ ಹಾನಿಯಾಗಿರುವುದಿಲ್ಲ ಹಾಗೂ ಅದೇ ರೀತಿ ನಿಜವಾಗಿಯೂ ಅಪಘಾತ ಸಂಭವಿಸಿದ್ದರೆ, ಮೋಟಾರು ಸೈಕಲ್ಗೆ ಹಾನಿಗಳಾಗಿರುತ್ತಿದ್ದವು ಎಂಬ ಸಂಗತಿಗಳು ಪ್ರಾಸಿಕ್ಯೂಷನ್ ವಾದವನ್ನು ಬೆಂಬಲಿಸುತ್ತವೆ.ಇದೂ ಕೂಡ ಪ್ರಾಸಿಕ್ಯೂಷನ್ 1 ನೇ ಆಪಾದಿತನ ವಿರುದ್ಧದ ವಾದವನ್ನು ರುಜುವಾತುಪಡಿಸುವಲ್ಲಿ ಆಪಾದಿತನ ವಿರುದ್ಧ ಇರುವ ಒಂದು ಸನ್ನಿವೇಶವಾಗಿದೆ.ವಿಚಾರಣಾ ನ್ಯಾಯಾಲಯವು, ಆಪಾದಿತ ಹಾಗೂ ಮೃತಳು ಇಬ್ಬರೂ ಕಡೆಯದಾಗಿ ಒಟ್ಟಿಗೆ ಇದ್ದುದಕ್ಕೆ ಸಂಬಂಧಿಸಿದಂತೆ ಪಿ.ಡಬ್ಲ್ಯೂ -1 ಹಾಗೂ 6 ರ ಸಾಕ್ಷ್ಯವನ್ನು ಪರಿಗಣಿಸದೇ ತಪ್ಪೆಸಗಿದೆ.ಇವರ ವಿಚಾರಣಾ ನ್ಯಾಯಾಲಯವು, ಕೊಲೆಯಾಗುವುದಕ್ಕೂ ಮೊದಲು ಆಗ ತಾನೇ ಮೃತಳು ಪಿ.ಡಬ್ಲ್ಯೂ.ಹಾಗೂ 6 ಇವರಿಗೆ ಕರೆಮಾಡಿ, ತಾವು ಮಧ್ಯಾಹ್ನದ ಊಟಕ್ಕೆ ಬರುವುದಾಗಿ ಅವರಿಗೆ ತಿಳಿಸಿರುವಳೆಂಬ ಪಿ.ಡಬ್ಲ್ಯೂ.ಹಾಗೂ 6 ಇವರ ಸಾಕ್ಷ್ಯವನ್ನೂ ಸಹ ಪರಿಗಣಿಸಿಲ್ಲ.ವಿಚಾರಣಾ ನ್ಯಾಯಾಲಯವು 1 ನೇ ಆಪಾದಿತನ ನಡತೆಯನ್ನು ಹಾಗೆಯೇ, 1 ನೇ ಆಪಾದಿತನಿಗೆ ಯಾವುದೇ ಗಾಯಗಳಾಗದಿದ್ದರೂ ಎರಡು ದಿನಗಳ ಕಾಲ ಆಸ್ಪತ್ರೆಗೆ ದಾಖಲಾಗಿದ್ದನು ಎಂದು ಹೇಳಿಕೆ ನೀಡಿರುವ ಪಿ.ಡಬ್ಲ್ಯೂ .28-ವೈದ್ಯರ ಸಾಕ್ಷ್ಯವನ್ನು ಕೂಡ ಪರಿಗಣಿಸಿಲ್ಲ.ವಿಚಾರಣಾ ನ್ಯಾಯಾಲಯವು, 1 ನೇ ಆಪಾದಿತನು 2 ಹಾಗೂ 3 ನೇ ಆಪಾದಿತರಿಗೆ ಕರೆಮಾಡಿ, ಸ್ಥಳಕ್ಕೆ ಬರಲು ತಿಳಿಸಿ ಮೃತಳ ಪೋಷಕರ ಮನೆಗೆ ಮೃತದೇಹವನ್ನು ಸ್ಥಳಾಂತರಿಸುವ ಏರ್ಪಾಡು ಮಾಡಿರುವುದನ್ನೂ ಸಹ ಗಣನೆಗೆ ತೆಗೆದುಕೊಂಡಿಲ್ಲ.ಈ ಎಲ್ಲಾ ಸಂಗತಿಗಳು, 1 ನೇ ಆಪಾದಿತನೇ ಸ್ವತಃ ಕೊಲೆ ಮಾಡಿರುವನೆಂಬ ಪ್ರತಿಯೊಂದು ಸನ್ನಿವೇಶಕ್ಕೆ ಸಂಬಂಧ ಕಲ್ಪಿಸುತ್ತವೆ.ಹೀಗಾಗಿ ವಿಚಾರಣಾ ನ್ಯಾಯಾಲಯವು ಪ್ರಮುಖ ಸಾಕ್ಷ್ಯವನ್ನು ವಿವೇಚಿಸುವಲ್ಲಿ ದೋಷವೆಸಗಿದೆ.ಆದ್ದರಿಂದ, ಅಧಿವಿಚಾರಣಾ ನ್ಯಾಯಾಲಯದ ನಿರ್ಣಯಗಳು ದೋಷಯುಕ್ತವಾಗಿವೆ.ಇದರಿಂದ, ನಾವು, ಮೇಲೆ ಉಲ್ಲೇಖಿಸಲಾದ ತೀರ್ಪುಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ತತ್ವಗಳ ಹಿನ್ನೆಲೆಯಲ್ಲಿ ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯವನ್ನು ಹಾಗೂ ಸಾಕ್ಷ್ಯ ಲ್ಯು ಅಧಿನಿಯಮದ 106 ನೇ ಪ್ರಕರಣದ ಮೇರೆಗೆ ರೂಪಿಸಲಾದಂಥ ಯಾವುದೇ ವಿವರಣೆಯಿಲ್ಲದ 1 ನೇ ಆಪಾದಿತನ ನಡವಳಿಕೆಯನ್ನು ಮರು-ವಿವೇಚಿಸುವ ಮೂಲಕ ಈ ನ್ಯಾಯಾಲಯ

ಮಧ್ಯಪ್ರವೇಶಿಸುವುದು ಅಗತ್ಯವಾಗಿದೆಯೆಂಬುದು ನಮ್ಮ ಅಭಿಪ್ರಾಯವಾಗಿದೆ.ಇದರಿಂದಾಗಿ, ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ವಿಪರ್ಯಯಗೊಳಿಸುವ ಮೂಲಕ ಭಾರತ ದಂಡ ಸಂಹಿತೆಯ 302 ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ 1 ನೇ ಆಪಾದಿತನನ್ನು ಅಪರಾಧಿಯೆಂದು ನಿರ್ಣಯಿಸುವ ಪ್ರಕರಣಕ್ಕೆ ಯೋಗ್ಯವಾದ ಮೊಕದ್ದಮೆ ಇದಾಗಿದೆಯೆಂಬುದು ನಮ್ಮ ಅಭಿಪ್ರಾಯವಾಗಿದೆ.ತದನುಸಾರವಾಗಿ ನಾವು ವಿವಾದಾಂಶ 1 ಕ್ಕೆ " ಸಕಾರಾತ್ಮಕ " ವೆಂದು ಉತ್ತರಿಸಿದ್ದೇವೆ.

48. ವಿವಾದಾಂಶ ಸಂ .2:-ಪ್ರಾಸಿಕ್ಯೂಷನ್ ಮುಂದುವರಿದ ವಾದ ಏನೆಂದರೆ, 1 ನೇ ಆಪಾದಿತನು ಕೊಲೆ ಮಾಡಿ, 2 ಹಾಗೂ 3 ನೇ ಆಪಾದಿತರಿಗೂ ಸಾಮಾನ್ಯ ಉದ್ದೇಶವನ್ನು ಹಂಚಿಕೊಂಡಿದ್ದು, 1 ನೇ ಆಪಾದಿತನ ವಿರುದ್ಧ ಲಭ್ಯವಿರುವ ಸಾಕ್ಷ್ಯವನ್ನು ಮುಚ್ಚಿಡುವ ಸಲುವಾಗಿ ಅವನಿಗೆ ಸಹಾಯ ಮಾಡಿದ್ದಾರೆ ಹೀಗಾಗಿ, ಅವರು ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ 201 ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಗಳನ್ನೆಸಗಿರುವರು ಎಂಬುದಾಗಿದೆ.

49. ಈ ಸಂಗತಿಯನ್ನು ರುಜುವಾತುಪಡಿಸಲು, ಇದು ಅಪಘಾತವಾಗಿಲ್ಲ.ಆದರೆ, ಇದು ಕೊಲೆ ಎಂಬ ಸಂಗತಿಯು 2 ಹಾಗೂ 3 ನೇ ಆಪಾದಿತರಿಗೆ ಗೊತ್ತಿರಲಿಲ್ಲ ಎಂಬುದಕ್ಕೆ ನ್ಯಾಯಾಲಯದ ಮುಂದೆ ಯಾವುದೇ ಕ ಸಾಕ್ಷ್ಯಾಧಾರವಿರುವುದಿಲ್ಲ.1 ನೇ ಆಪಾದಿತನು, 2 ನೇ ಆಪಾದಿತನಿಗೆ ಕರೆಮಾಡಿ ತಿಳಿಸಿರುವನು ಎಂಬ ಸಂಗತಿಯನ್ನು ನಿಶಾನೆ ಪಿ .58 ಕರೆ ವಿವರಗಳನ್ನು ನೋಡುವ ಮುಖಾಂತರ ದೃಢಪಡಿಸಬಹುದಾಗಿದೆ.ಆದರೆ, 2 ನೇ ಹಾಗೂ 3 ನೇ ಆಪಾದಿತರಿಗೆ ಇದು ಕೊಲೆಯಾಗಿತ್ತು ಎಂಬ ಸಂಗತಿ ಗೊತ್ತಿತ್ತು ಎಂಬುದಕ್ಕೆ ಯಾವುದೇ ಸಾಕ್ಷ್ಯಾಧಾರವಿಲ್ಲ.ಅವರು, 1 ನೇ ಆಪಾದಿತನ ಸೂಚನೆಯಂತೆ ಮೃತದೇಹವನ್ನು ಸ್ಥಳಾಂತರಿಸಿರಬಹುದು.ಅವರು ಆಪಾದಿತನ ಕೃತ್ಯವನ್ನು ಮುಚ್ಚಿ ಹಾಕುವ ಸಲುವಾಗಿ ಸಾಮಾನ್ಯ ಉದ್ದೇಶವನ್ನು ಹಂಚಿಕೊಂಡಿದ್ದಾರೆ ಎಂದು ಅದರ ಅರ್ಥವಲ್ಲ.2 ನೇ ಹಾಗೂ 3 ನೇ ಆಪಾದಿತರಿಗೆ, 1 ನೇ ಆಪಾದಿತನು ಅಪರಾಧವೆಸಗಿ ಮೃತದೇಹವನ್ನು ಸಾಗಿಸಿದ್ದುದು ಅವರಿಗೆ ಚೆನ್ನಾಗಿ ಗೊತ್ತಿತ್ತು ಎಂದು ಯಾವ ಸಾಕ್ಷಿದಾರರೂ ಕೂಡ ಮಾತನಾಡಿಲ್ಲ.ಒಬ್ಬ ಸಾಮಾನ್ಯ ವಿವೇಕವುಳ್ಳ ಮನುಷ್ಯ ಅಪಘಾತದ ಸಂಗತಿಯ ಬಗ್ಗೆ ತಿಳಿದು, ಮೃತಳ ಪೋಷಕರ ಮನೆಗೆ ದೇಹವನ್ನು ಸ್ಥಳಾಂತರಿಸಿರುವ ಹಾಗೆಯೇ ಇದು ನಡೆದಿದೆ.ನ್ಯಾಯಾಲಯದ ಮುಂದೆ ಯಾವುದೇ ಸಮರ್ಪಕ ಸಾಕ್ಷಿಯಿಲ್ಲದೆ, 2 ಹಾಗೂ 3 ನೇ ಆಪಾದಿತರು ಭಾರತ ದಂಡ ಸಂಹಿತೆಯ 201 ನೇ ಪ್ರಕರಣದ ಮೇರೆಗೆ ಅಪರಾಧವೆಸಗಿರುವರು ಎಂಬ ನಿರ್ಣಯಕ್ಕೆ ಬರಲು ಈ ನ್ಯಾಯಾಲಯದ ಕಡೆಯಿಂದ ಯುಕ್ತವೆನಿಸುವುದಿಲ್ಲ.ನಾವು 2 ನೇ ಹಾಗೂ 3 ನೇ ಆಪಾದಿತರ ವಿರುದ್ಧ 201 ನೇ ಪ್ರಕರಣದ ಶಿಕ್ಷಾರ್ಹ ಉಪಬಂಧಗಳನ್ನು ಅನ್ವಯಿಸಲು ಇದು ಯೋಗ್ಯವಾದ ಪ್ರಕರಣವಾಗಿರುವುದಿಲ್ಲ ಎಂಬುದು ನಮ್ಮ ಅಭಿಪ್ರಾಯವಾಗಿದೆ.2 ಮತ್ತು 3 ನೇ ಆಪಾದಿತರ ವಿರುದ್ಧವಾಗಿ ಅಧಿವಿಚಾರಣಾ ನ್ಯಾಯಾಲಯವು ನೀಡಿದಂತ ನಿರ್ಣಯಗಳ ಮಧ್ಯಪ್ರವೇಶಿಸುವುದು ಸಕಾರಣವಲ್ಲ.ತದನುಸಾರವಾಗಿ, ಮೇಲೆ ಮಾಡಲಾದ ಚರ್ಚೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಈ ಮುಂದಿನ ಆದೇಶವನ್ನು ಹೊರಡಿಸುತ್ತೇವೆ:

## ಆದೇಶ

1) ಅಪರಾಧ ಅಪೀಲು ಸಂಖ್ಯೆ 648/2013 ಹಾಗೂ 866/2013 ನ್ನು ಭಾಗಶಃ ಪುರಸ್ಕರಿಸಲಾಗಿದೆ.

ii) 1 ನೇ ಆಪಾದಿತನನ್ನು ಭಾರತ ದಂಡ ಸಂಹಿತೆಯ 302 ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣಯಿಸಲಾಗಿದೆ.ಇವನನ್ನು ಕಠಿಣ ಆಜೀವ ಕಾರಾವಾಸ ಶಿಕ್ಷೆಗೆ ಹಾಗೂ ಪಿ.ಡಬ್ಲ್ಯೂ -7-ಮೃತಳ ತಾಯಿಗೆ 1,00,000/ ರೂ.ಗಳನ್ನು ಸಂದಾಯ ಮಾಡುವ ಜುಲ್ಮಾನೆಯ ಶಿಕ್ಷೆಗೆ ಗುರಿಪಡಿಸಲಾಗಿದೆ.ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದ ಸಂದರ್ಭದಲ್ಲಿ ಅವನನ್ನು ಒಂದು ವರ್ಷದ ಅವಧಿಯ ಹೆಚ್ಚಿನ ಕಾರಾವಾಸವನ್ನು ಅನುಭವಿಸತಕ್ಕದ್ದು.

iii) 1 ನೇ ಆಪಾದಿತನನ್ನು ವಶಕ್ಕೆ ಪಡೆದು ಶಿಕ್ಷೆಗೆ ಒಳಪಡಿಸುವಂತೆ ಅಧಿವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಲಾಗಿದೆ.

iv)ದಿನಾಂಕ: 30-03-2013, ಎಸ್.ಸಿ. ಸಂಖ್ಯೆ 167/2009 ರಲ್ಲಿ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ 2 ಹಾಗೂ 3 ನೇ ಆಪಾದಿತರ ವಿರುದ್ಧ ಖುಲಾಸೆಯ ತೀರ್ಪನ್ನು ಈ ಮೂಲಕ ಸ್ಥಿರೀಕರಿಸಲಾಗಿದೆ.

V) 1 ನೇ ಆಪಾದಿತನು ಅಧಿವಿಚಾರಣೆಯ ಅವಧಿಯಲ್ಲಿ ಅಭಿರಕ್ಷೆಯಲ್ಲಿ ಇದ್ದಿದ್ದರೆ, ದಂಡ ಪ್ರಕ್ರಿಯಾ ಸಂಹಿತೆಯ 428 ನೇ ಪ್ರಕರಣದ ಮೇರೆಗೆ ವಜಾ ಮಾಡಲಾದ ಪ್ರಯೋಜನಕ್ಕೆ ಹಕ್ಕುಳ್ಳವನಾಗಿರುವನು ಎಂದು ತಿಳಿಸುವ ಅಗತ್ಯವಿರುವುದಿಲ್ಲ.